ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಫೆಬ್ರವರಿ 23 ಶುಕ್ರವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 306 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com





ಕೆಆರ್ ಕ್ಷೇತ್ರದ ಅನುದಾನ ಚಾಮರಾಜ, ಎನ್‌ಆರ್‌ಗೆ ಹಂಚಿಕೆ ಮಾಡಲು ಪಾಲಿಕೆ ಆಯುಕ್ತರಿಂದ ಸರ್ಕಾರಕ್ಕೆ ಪತ್ರ

ಅನುದಾನ ಉಳಿಸಿಕೊಡುವಂತೆ ಶಾಸಕ ಶ್ರೀವತ್ಸ ಸ್ಪೀಕರ್ ಮೊರೆ

ಮೈಸೂರು, ಫೆ.22(ಎಸ್‌ಬಿಡಿ)– ಮೈಸೂರು ನಗರದ ಬಿಜೆಪಿ ಶಾಸಕರು ಪ್ರತಿನಿಧಿಸುವ ಕೃಷ್ಣರಾಜ ಕ್ಷೇತ್ರಕ್ಕೆ ನೀಡಿದ್ದ ಅನುದಾನವನ್ನು ಕಾಂಗ್ರೆಸ್ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೆ ಹಂಚಿಕೆ ಮಾಡುವಂತೆ ನಗರ ಪಾಲಿಕೆ ಆಯುಕ್ತರೇ ಸರ್ಕಾರಕ್ಕೆ ಪತ್ರಬರೆದಿರುವುದು ಸದನದಲ್ಲೇ ಬಯಲಾಗಿದೆ.

ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅಧಿವೇಶನದಲ್ಲಿ ಗುರುವಾರ ಈ ವಿಷಯ ಪ್ರಸ್ತಾಪಿಸಿದ್ದು, ಅನುದಾನ ಉಳಿಸಿಕೊಡಲು ಮುಖ್ಯಮಂತ್ರಿಗಳು ಹಾಗೂ ನಗರಾಭಿವೃದ್ಧಿ ಸಚಿವರಲ್ಲಿ ಮನವಿ ಮಾಡಿದ್ದರೂ ಏನೂ ಕ್ರಮ ವಹಿಸಿಲ್ಲ. ಹಾಗಾಗಿ ನೀವೇ ನನ್ನ ಬೆಂಬಲಕ್ಕೆ ನಿಲ್ಲಬೇಕು ಎಂದು ಸ್ಪೀಕರ್ ಯು.ಟಿ.ಖಾದರ್ ಅವರಲ್ಲಿ ಮನವಿ ಮಾಡಿದ್ದಾರೆ.


ಶ್ರೀವತ್ಸ

ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೃಷ್ಣರಾಜ ವಿಧಾನ ಸಭಾ ಕ್ಷೇತ್ರಕ್ಕೆ 45 ಕೋಟಿ ರೂ. ಎಸ್‌ಎಫ್‌ಸಿ ಅನುದಾನ ನೀಡಿದ್ದರು. ಆ ಅನುದಾನದಡಿ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಟೆಂಡರ್ ಹಂತದವರೆಗೂ ಪ್ರಕ್ರಿಯೆ ನಡೆದಿತ್ತು. ಆದರೆ ಸರ್ಕಾರದ ಆದೇಶವನ್ನು ಬದಿಗೊತ್ತಿ ಮೈಸೂರು ನಗರ ಪಾಲಿಕೆ ಆಯುಕ್ತರು, ಕೃಷ್ಣರಾಜ ಕ್ಷೇತ್ರಕ್ಕೆ ನೀಡಿರುವ ಅನುದಾನದಲ್ಲಿ ನೆರೆಯ ಚಾಮರಾಜ ಕ್ಷೇತ್ರಕ್ಕೆ 25 ಕೋಟಿ ಹಾಗೂ ನರಸಿಂಹರಾಜ ಕ್ಷೇತ್ರಕ್ಕೆ 20 ಕೋಟಿ ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ ಎಂದು ತಿಳಿಸಿದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ನನ್ನ ಕ್ಷೇತ್ರಕ್ಕೆ ನೀಡಿರುವ 45 ಕೋಟಿ ರೂ. ಅನುದಾನವನ್ನು ಉಳಿಸಿಕೊಡುವಂತೆ ಮುಖ್ಯಮಂತ್ರಿಗಳು ಹಾಗೂ ನಗರಾಭಿವೃದ್ಧಿ ಸಚಿವರನ್ನು ಭೇಟಿ ಮಾಡಿ, ಮನವಿ ಮಾಡಿದ್ದೇನೆ. ಆದರೂ ಏನೂ ಪ್ರಯೋಜನವಾಗಿಲ್ಲ. ನಮ್ಮ ಕ್ಷೇತ್ರಕ್ಕೆ ನೀಡಿದ್ದ ಅನುದಾನವನ್ನು ಬೇರೆ ಕ್ಷೇತ್ರಗಳಿಗೆ ಹಂಚಿಕೆ ಮಾಡಿದರೆ ಶಾಸಕನಾಗಿ ನಾನು ಕ್ಷೇತ್ರದ ಜನರಿಗೆ ಏನೆಂದು ಉತ್ತರಿಸಲಿ. ಈ ವಿಚಾರದಲ್ಲಿ ನೀವು ನನ್ನ ಬೆಂಬಲಕ್ಕೆ ನಿಲ್ಲಬೇಕು ಎಂದು ಮನವಿ ಮಾಡಿದರು.

ತನಿಖೆಗೆ ಆಗ್ರಹ: ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದಾಗ 2000–2001ರ ಸಾಲಿನಲ್ಲಿ ಆಶ್ರಯ ಮನೆಗಳನ್ನು ನಮ್ಮ ಕ್ಷೇತ್ರದಲ್ಲಿ ಹಂಚಿಕೆ ಮಾಡಲಾಗಿದ್ದು, ಕಳೆದ 20 ವರ್ಷಗಳಿಂದ ಆ ಯೋಜನೆಯು ಕಡತವಿಲ್ಲ. ಅಲ್ಲದೆ ಫಲಾನುಭವಿಗಳ ಪಟ್ಟಿ ಆಗಾಗ್ಗೆ ಬದಲಾವಣೆಯಾಗಿದೆ. ಅನೇಕ ಫಲಾನುಭವಿಗಳು ಹಣ ಕಟ್ಟಿದ್ದು, ಅವರಿಗೆ ಹಕ್ಕುಪತ್ರವನ್ನೂ ನೀಡಿಲ್ಲ. ಆದರೆ ಹಂಚಿಕೆಯಾಗಿರದ ಹಲವರ ಹೆಸರಲ್ಲಿ ಆಶ್ರಯ ಮನೆ ನೋಂದಣಿಯಾಗಿದೆ. ಈ ಬಗ್ಗೆ ತನಿಖೆ ನಡೆಸುವ ಅಗತ್ಯವಿದೆ ಎಂದು ಆಗ್ರಹಿಸಿದರು.

ಹಲವು ಬೇಡಿಕೆಗಳು: ಹಿಂದಿನ ಬಜೆಟ್ ಸಂದರ್ಭದಲ್ಲೂ ಮೈಸೂರು ನಗರಕ್ಕೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸ್ಥಾಪನೆಗೆ ಒತ್ತಾಯಿಸಿದ್ದೆವು. ಈ ಬಾರಿಯು ಪೂರಕ ಬಜೆಟ್‌ನಲ್ಲಾದರೂ ಈ ಬೇಡಿಕೆಯನ್ನು ಈಡೇರಿಸಬೇಕು. ಮಹಾರಾಣಿ ಸರ್ಕಾರಿ ಮಹಿಳಾ ಕಾಲೇಜುಗಳಲ್ಲಿ ತಲಾ 2 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಶಿಕ್ಷಣ ಪಡೆಯುತ್ತಿದ್ದು, ಮತ್ತಷ್ಟು ಬಡ ಕುಟುಂಬದ ಹೆಣ್ಣು ಮಕ್ಕಳಿಗೆ ಅವಕಾಶ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಮತ್ತೆರಡು ಸರ್ಕಾರಿ ಮಹಿಳಾ ಕಾಲೇಜುಗಳನ್ನು ಆರಂಭಿಸಬೇಕು. ಮೈಸೂರು ಕರಗ ಉತ್ಸವಕ್ಕೆ ಈ ಬಾರಿ ನೂರು ವರ್ಷವಾಗಲಿರುವ ಹಿನ್ನೆಲೆಯಲ್ಲಿ ಉತ್ಸವಕ್ಕಾಗಿ ವಿಶೇಷ ಅನುದಾನ ಬಿಡುಗಡೆ ಮಾಡಬೇಕು. ಇಮ್ಮಾವು ಚಿತ್ರನಗರಿ ಯೋಜನೆಗೆ 100 ಕೋಟಿ ರೂ. ಅನುದಾನ ಕೇಳಿದ್ದೆವು. ಆದರೆ ಅದು ಮತ್ತೆ ನೆನೆಗುದಿಗೆ ಬಿದ್ದಿದ್ದು, ಈ ಬಗ್ಗೆಯೂ ಸರ್ಕಾರ ಗಮನಹರಿಸಬೇಕು ಎಂದು ಒತ್ತಾಯಿಸಿದರು.

'ಮೈಸೂರು' ಉತ್ಪನ್ನ ಮಾರಾಟಕ್ಕೆ ಕಾಡಾ ಕಟ್ಟಡ ನೀಡಿ...

ಮೈಸೂರು: ಅರಮನೆ ಬಳಿಯ ಪಾರಂಪರಿಕ ಕಾಡಾ ಕಚೇರಿ ಕಟ್ಟಡದಲ್ಲಿ ಸರ್ಕಾರಿ ಸ್ವಾಮ್ಯದ ಮೈಸೂರು ಬ್ರ್ಯಾಂಡ್ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ವ್ಯವಸ್ಥೆ ಮಾಡುವಂತೆ ಶಾಸಕ ಟಿ.ಎಸ್.ಶ್ರೀವತ್ಸ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಸದನದಲ್ಲಿ ಮಾತನಾಡಿದ ಅವರು, ಕಾಡಾ ಕಚೇರಿ ಸಂಕೀರ್ಣದಲ್ಲಿರುವ ಎಲ್ಲಾ ಕಚೇರಿಗಳನ್ನೂ ಸಿದ್ಧಾರ್ಥನಗರದ ಜಿಲ್ಲಾ ಮಟ್ಟದ ಅಧಿಕಾರಿಗಳ ಕಚೇರಿ ಸಂಕೀರ್ಣ(ಹೊಸ ಡಿಸಿ ಆಫೀಸ್)ಕ್ಕೆ ಸ್ಥಳಾಂತರ ಮಾಡಿ, ಈ ಪಾರಂಪರಿಕ ಕಟ್ಟಡದಲ್ಲಿ ಮೈಸೂರು ಸಿಲ್ಕ್, ಮೈಸೂರು ಸ್ಯಾಂಡಲ್ ಸೋಪ್, ಆಯಿಲ್ ಸೇರಿದಂತೆ ಸರ್ಕಾರಿ ಸ್ವಾಮ್ಯದಲ್ಲಿ ಉತ್ಪಾದಿಸಲಾಗುತ್ತಿರುವ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ವ್ಯವಸ್ಥೆ ಮಾಡಬೇಕು. ಅದರಿಂದ ಪ್ರವಾಸಿಗರು ಮೋಸ ಹೋಗದಂತೆ ಅರಮನೆ ಪಕ್ಕದಲ್ಲೇ ತಮಗೆ ಬೇಕಾದ ವಸ್ತುಗಳನ್ನು ಕೊಳ್ಳಲು ಅನುಕೂಲವಾಗುತ್ತದೆ ಎಂದು ಅವರು ಅಭಿಪ್ರಾಯಿಸಿದರು.

ನಿತ್ಯ ಅರಮನೆ ಬೆಳಗಲಿ: ಅರಮನೆ, ಮೃಗಾಲಯ, ರೇಷ್ಮೆ ಕಾರ್ಖಾನೆ ಸೇರಿದಂತೆ ಮೈಸೂರು ಮಹಾರಾಜರ ಕೊಡುಗೆಗಳನ್ನು ಮುಂದಿಟ್ಟುಕೊಂಡು ಪ್ರವಾಸಿಗರನ್ನು ಸೆಳೆಯುತ್ತಿದ್ದೇವೆ ಹೊರತು ಇಲ್ಲಿನ ಪ್ರವಾಸೋದ್ಯಮ ಅಭಿವೃದ್ಧಿಗೆ ಮಹಾರಾಜರ ಮಾದರಿಯಲ್ಲಿ ಸರ್ಕಾರಗಳು ಏನೂ ಮಾಡಿಲ್ಲ. ವಾರಾಂತ್ಯ ಮಾತ್ರವಲ್ಲದೆ ಉಳಿದ ದಿನಗಳಲ್ಲೂ ಮೈಸೂರಿಗೆ ಪ್ರವಾಸಿಗರನ್ನು ಆಕರ್ಷಿಸಿ, ಇಲ್ಲಿ ವಾಸ್ತವ್ಯ ಹೂಡುವಂತೆ ಮಾಡುವ ನಿಟ್ಟಿನಲ್ಲಿ ನಿತ್ಯ 10 ನಿಮಿಷವಾದರೂ ಅರಮನೆ ವಿದ್ಯುತ್ ದೀಪಗಳನ್ನು ಬೆಳಗಿಸಲು ಮುಖ್ಯಮಂತ್ರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಗಮನಹರಿಸಬೇಕು ಎಂದು ಮನವಿ ಮಾಡಿದರು.

ಮೈಸೂರಿನ ಮಹಾರಾಜರು ಬಳಸುತ್ತಿದ್ದ ಲಾಂಛನವನ್ನು ಎಲ್ಲಾ ಶಾಸಕರಿಗೂ ನೀಡುವ ಮೂಲಕ ರಾಜ್ಯಕ್ಕೆ ಪರಿಚಯಿಸಿದ್ದೀರಿ. ಈ ಮೂಲಕ ಶಾಸಕರ ಜವಾಬ್ದಾರಿಯನ್ನೂ ಹೆಚ್ಚಿಸಿದ್ದೀರಿ ಎಂದು ಮೈಸೂರಿನ ಜನತೆ ಪರವಾಗಿ ಸ್ಪೀಕರ್ ಯು.ಟಿ.ಖಾದರ್ ಅವರಿಗೆ ಅಭಿನಂದನೆ ಸಲ್ಲಿಸಿದರು.

ಬೈಕಿಗೆ ಕಾರು ಡಿಕ್ಕಿ: ಇಬ್ಬರು ಸಾವು


ಮೈಸೂರು,ಫೆ22(ಆರ್‌ಕೆ)–ಬೈಕಿಗೆ ಕಾರೊಂದು ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಮೈಸೂರು ತಾಲೂಕು ಹೊಸಹುಂಡಿ ಗ್ರಾಮದ ಬಳಿ ರಿಂಗ್‌ರೋಡ್‌ನಲ್ಲಿ ಇಂದು ಬೆಳಿಗ್ಗೆ ಸಂಭವಿಸಿದೆ.

ಮೈಸೂರಿನ ಐಪಿಎಸ್ ನಗರ ನಿವಾಸಿ ಮಂಜುನಾಥ(50) ಹಾಗೂ ಗುಜ್ಜೇಗೌಡನಪುರದ ವೆಂಕಟೇಶ್(48) ಸಾವನ್ನಪ್ಪಿದವರು. ತಿ.ನರಸೀಪುರ ಕಡೆಯಿಂದ ಬೈಕಿನಲ್ಲಿ ಮೈಸೂರಿನ ಬಂಡಿಪಾಳ್ಯದ ಎಪಿಎಂಸಿ ಮಾರುಕಟ್ಟೆ ಕಡೆಗೆ ಬರುತ್ತಿದ್ದಾಗ ಹಿಂದಿನಿಂದ ಬಂದ ಹುಂಡೈ ಐ–10 ಕಾರು ಹೊಸಹುಂಡಿ ಬಳಿ ರಿಂಗ್ ರಸ್ತೆಯಲ್ಲಿ ಬೆಳಿಗ್ಗೆ 8–45 ಗಂಟೆಗೆ ಡಿಕ್ಕಿ ಹೊಡೆಯಿತು.

ಕಾರು ಡಿಕ್ಕಿ ಹೊಡೆದ ರಭಸಕ್ಕೆ ಬೈಕ್ ಸವಾರರಿಬ್ಬರೂ ಸ್ಥಳದಲ್ಲೇ ಅಸುನೀಗಿದರು. ಸ್ಥಳಕ್ಕೆ ಧಾವಿಸಿದ ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ಇನ್‌ಸ್ಪೆಕ್ಟರ್ ಶೇಖರ್ ಹಾಗೂ ಸಿಬ್ಬಂದಿ ಮಹಜರು ನಡೆಸಿ ಸಂಪೂರ್ಣವಾಗಿ ಜಖಂಗೊಂಡಿದ್ದ ಬೈಕ್ ಅನ್ನು ಹೊರತೆಗೆದು ಮೃತ ದೇಹಗಳನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ರವಾನಿಸಿದರು. ಪ್ರಕರಣ ದಾಖಲಿಸಿಕೊಂಡು ಕಾರು ಚಾಲಕ ನಂದೀಶ್ವರನನ್ನು ವಶಕ್ಕೆ ಪಡೆದು ತನಿಖೆ ನಡೆಸುತ್ತಿದ್ದಾರೆ. ಕಾರು ಚಾಲಕನ ಅತಿವೇಗ ಮತ್ತು ಅಜಾಗರೂಕತೆಯೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ. ಎಸ್ಪಿ ಸೀಮಾ ಲಾಟ್ಕರ್, ಎಎಸ್ಪಿ ಡಾ.ಬಿಎನ್ ನಂದಿನಿ, ಡಿವೈಎಸ್ಪಿ ಕರೀಂ ರಾವತರ ಘಟನಾ ಸ್ಥಳಕ್ಕೆ ಧಾವಿಸಿ, ಪರಿಶೀಲಿಸಿದರು.

ಅಪಘಾತ ಸಂಭವಿಸುತ್ತಿದ್ದಂತೆಯೇ ಸ್ಥಳದಲ್ಲಿ ಜಮಾಯಿಸಿದ ಸುತ್ತಮುತ್ತಲಿನ ಗ್ರಾಮಸ್ಥರು ಕಾರಿಗೆ ಸಿಲುಕಿ ಒದ್ದಾಡುತ್ತಿದ್ದ ಬೈಕ್ ಸವಾರರನ್ನು ಹೊರಕ್ಕೆಳೆದು ಆಸ್ಪತ್ರೆಗೆ ದಾಖಲಿಸಲು ಮುಂದಾದರಾದರೂ ಸ್ಥಳದಲ್ಲೇ ತಲೆಗೆ ತೀವ್ರ ಗಾಯಗಳಾಗಿದ್ದರಿಂದ ಬಾರೀ ರಕ್ತಸ್ರಾವದ ಕಾರಣ ಅವರು ಸ್ಥಳದಲ್ಲೇ ಸಾವನ್ನಪ್ಪಿದರು ಎಂದು ಪೊಲೀಸರು ತಿಳಿಸಿದ್ದಾರೆ.


ನಿಧನ



ಚೊಟ್ಟಂಗಡ ಲಲಿತಾ ಕುಶಾಲಪ್ಪ

ಮೈಸೂರು,ಫೆ.22–ಮೈಸೂರಿನ ವಿದ್ಯಾರಣ್ಯಪುರಂ 4ನೇ ಮೇನ್, 2ನೇ ಕ್ರಾಸ್ ನಿವಾಸಿ ದಿವಂಗತ ಕುಶಾಲಪ್ಪ (ಮೂಲತಃ ಬಿರುನಾಣಿಯವರು) ಅವರ ಪತ್ನಿ ಚೊಟ್ಟಂಗಡ ಲಲಿತಾ ಕುಶಾಲಪ್ಪ (89) (ತಾಮನೇ–ಮುಕ್ಕಾಟ್ಟೀರ ಚೇರಂಬಾಣೆ) ಗುರುವಾರ ನಿಧನರಾದರು.

ಮೃತರು ಮೂವರು ಹೆಣ್ಣು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಫೆ.23) ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಕೆ.ವಿ.ಲಲಿತಮ್ಮ

ಬಿಜೆಪಿ ಹಿರಿಯ ಮುಖಂಡ, ಮೈಸೂರು ವಿಭಾಗ ಪ್ರಭಾರಿಯೂ ಆದ ಮೈ.ವಿ.ರವಿಶಂಕರ್ ಅವರ ತಾಯಿ ಕೆ.ವಿ.ಲಲಿತಮ್ಮ (92) ಗುರುವಾರ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರ ಅಂತ್ಯಕ್ರಿಯೆ ನಾಳೆ (ಫೆ.23) ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ನಾಳೆ 8.30 ಬೆಳಗ್ಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ 82 ಕಳವು ಪ್ರಕರಣ ಬಯಲು

15 ಮಂದಿ ಆರೋಪಿಗಳ ಬಂಧನ, 1.70 ಲಕ್ಷ ರೂ. ನಗದು ಸೇರಿ 1.69 ಕೋಟಿ ರೂ. ಮೌಲ್ಯದ ಆಭರಣ, ವಾಹನಗಳ ಜಪ್ತಿ



ವಶಪಡಿಸಿಕೊಂಡ ಆಭರಣಗಳನ್ನು ಮೈಸೂರು ಪೊಲೀಸ್ ಆಯುಕ್ತ ಬಿ.ರಮೇಶ್ ವೀಕ್ಷಿಸುತ್ತಿರುವುದು. ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ, ಸಿಸಿಬಿ ಎಸಿಪಿ ಎಸ್.ಎನ್.ಸಂದೇಶ್‌ಕುಮಾರ್, ಕೆ.ಆರ್.ಉಪವಿಭಾಗದ ಎಸಿಪಿ ಹೆಚ್.ಡಿ.ರಮೇಶ್‌ಕುಮಾರ್, ಎನ್‌ಆರ್ ಉಪ ವಿಭಾಗದ ಎಸಿಪಿ ಸುಧಾಕರ್ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಫೆ.22(ಆರ್‌ಕೆ)–ಮೈಸೂರು ನಗರದಲ್ಲಿ ನಡೆದಿದ್ದ 19 ಮನೆ ಕಳವು ಹಾಗೂ 63 ವಾಹನ ಕಳವು ಪ್ರಕರಣವನ್ನು ಭೇದಿಸಿರುವ ಪೊಲೀಸರು, 15 ಮಂದಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬಂಧಿತರಿಂದ 2 ಕೆಜಿ 343 ಗ್ರಾಂ ಚಿನ್ನಾಭರಣ, 1 ಕೆಜಿ 357 ಗ್ರಾಂ ಬೆಳ್ಳಿ ಪದಾರ್ಥ, 61 ದ್ವಿಚಕ್ರ ವಾಹನಗಳು, 2 ಕಾರು ಹಾಗೂ 1,70,000 ರೂ. ನಗದು ಸೇರಿ ಒಟ್ಟು 1,69,71,200 ರೂ. ಬೆಲೆ ಬಾಳುವ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಲಷ್ಕರ್ ಮೊಹಲ್ಲಾದ ಅಶೋಕ ರಸ್ತೆಯಲ್ಲಿ ಫೆ. 15 ರಂದು ಮೂವರು ಖದೀಮರನ್ನು ಬಂಧಿಸಿದ ಸಿಸಿಬಿ ಪೊಲೀಸರು, ಅವರು ಕಳವು ಮಾಡಿದ್ದ 13 ಪ್ರಕರಣಗಳ 68,59,200 ರೂ. ಮೌಲ್ಯದ 1.95 ಕೆಜಿ ಚಿನ್ನಾಭರಣ, 1.32 ಕೆಜಿ ಬೆಳ್ಳಿ ಪದಾರ್ಥ ಹಾಗೂ ಇತರ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಜನವರಿ 17ರಂದು ಅಶೋಕ ರಸ್ತೆಯಲ್ಲಿ ಓರ್ವನನ್ನು ಸೆರೆ ಹಿಡಿದ ಸಿಸಿಬಿ ಪೊಲೀಸರು ಆತ ನೀಡಿದ ಮಾಹಿತಿಯನ್ವಯ ಫೆಬ್ರವರಿ 10 ರಂದು ಮಂಡಿ ಮೊಹಲ್ಲಾದಲ್ಲಿ ಮತ್ತೋರ್ವನನ್ನು ಬಂಧಿಸಿ, ವಿಜಯನಗರ, ಹಾವೇರಿ ಠಾಣೆ ವ್ಯಾಪ್ತಿಯಲ್ಲಿ ನಡೆದ 3 ಕಳವು ಪ್ರಕರಣದಲ್ಲಿ 26 ಲಕ್ಷ ರೂ. ಮೌಲ್ಯದ 416 ಗ್ರಾಂ ಆಭರಣ, 1 ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡರು.

ಜನವರಿ 29ರಂದು ಉನ್ನತಿನಗರದಲ್ಲಿ ಮೂವರು ಆರೋಪಿಗಳನ್ನು ಬಂಧಿಸಿರುವ ಎನ್.ಆರ್.ಠಾಣೆ ಪೊಲೀಸರು, ಮೈಸೂರು, ಸುತ್ತಮುತ್ತ ಕಳವು ಮಾಡಿದ್ದ 42.42 ಲಕ್ಷ ರೂ. ಮೌಲ್ಯದ 832 ಗ್ರಾಂ ಚಿನ್ನಾಭರಣ, 37 ಗ್ರಾಂ ಬೆಳ್ಳಿ ನಾಣ್ಯ ಹಾಗೂ 1.70 ಲಕ್ಷ ರೂ. ನಗದು ವಶಪಡಿಸಿಕೊಂಡಿದ್ದಾರೆ.

30 ದ್ವಿಚಕ್ರ ವಾಹನಗಳ ವಶ: ವಿದ್ಯಾರಣ್ಯಪುರಂ ಠಾಣೆ ಪೊಲೀಸರು ಫೆ. 20 ರಂದು ಖದೀಮನನ್ನು ಬಂಧಿಸಿ 15 ಲಕ್ಷ ರೂ. ಬೆಲೆ ಬಾಳುವ 30 ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ. ಅದೇ ರೀತಿ ನಜರ್‌ಬಾದ್ ಠಾಣೆ ಪೊಲೀಸರು ಫೋರಂ ಮಾಲ್ ಬಳಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಓರ್ವನನ್ನು ಬಂಧಿಸಿ ಕಳವು ಮಾಡಿದ್ದ 9 ಲಕ್ಷ ರೂ. ಮೌಲ್ಯದ 20 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

143 ಕೆಜಿ ಗಾಂಜಾ ವಶ: ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಮಾದಕ ದ್ರವ್ಯಗಳ ವಿರುದ್ಧ ಕಾರ್ಯಾಚರಣೆ ನಡೆಸಿರುವ ಸಿಸಿಬಿ ಪೊಲೀಸರು, ನಾಲ್ವರನ್ನು ಬಂಧಿಸಿ 60,19,500 ರೂ. ಬೆಲೆಬಾಳುವ 143 ಕೆಜಿ 430 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ. ಡಿಸಿಪಿಗಳಾದ ಎಂ. ಮುತ್ತುರಾಜ್, ಎಸ್.ಜಾಹ್ನವಿ ಮಾರ್ಗದರ್ಶನದಲ್ಲಿ ಎಸಿಪಿಗಳಾದ ಎಸ್.ಎನ್.ಸಂದೇಶ್ ಕುಮಾರ್, ಸಿ.ಕೆ. ಅಶ್ವಥನಾರಾಯಣ, ಶಾಂತಮಲ್ಲಪ್ಪ, ಗಜೇಂದ್ರಪ್ರಸಾದ್ ಅವರ ನೇತೃತ್ವದಲ್ಲಿ ನಡೆದ ಪತ್ತೆ ಕಾರ್ಯಾಚರಣೆಯಲ್ಲಿ ವಿದ್ಯಾರಣ್ಯಪುರಂ ಠಾಣೆ ಇನ್ಸ್‌ಪೆಕ್ಟರ್ ಮೋಹಿತ್, ಸಹದೇವ, ಸಬ್ ಇನ್ಸ್‌ಪೆಕ್ಟರ್‌ಗಳಾದ ಪೂಜಾ, ಎಂ.ಎಸ್.ನಿತ್ಯಾನಂದ, ಸಿಸಿಬಿ ಇನ್ಸ್‌ಪೆಕ್ಟರ್ ಪೂವಯ್ಯ, ಮೋಹನ್ ಕುಮಾರ್, ಸಬ್ ಇನ್ಸ್‌ಪೆಕ್ಟರ್‌ಗಳಾದ ಲೇಪಾಕ್ಷ, ರಾಜು, ಕೋನಕೇರಿ, ಮಾರುತಿ ಅಂತರಗಟ್ಟಿ, ಕಿರಣ್ ಎ., ಹಂಪಿಹೋಳಿ, ಎನ್.ಆರ್.ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ ಕೆ. ತಳವಾರ, ಸಬ್ ಇನ್ಸ್‌ಪೆಕ್ಟರ್ ಎಸ್.ಕೆ.ಗಣೇಶ್, ನಜರ್‌ಬಾದ್ ಠಾಣೆ ಇನ್ಸ್‌ಪೆಕ್ಟರ್ ಎಂ.ಮಹದೇವಸ್ವಾಮಿ, ಸಬ್ ಇನ್ಸ್‌ಪೆಕ್ಟರ್ ಶ್ರೀನಿವಾಸ್ ಪಾಟೀಲ್ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ಆತ್ಮಶ್ರೀ ಯುಗಾದಿ ಕಥಾ ಸ್ಪರ್ಧೆ

ಮೈಸೂರು, ಫೆ. 22– ಬೆಂಗಳೂರಿನ ಆತ್ಮಶ್ರೀ ಪ್ರಕಾಶನ ಸಂಸ್ಥೆ ಯುಗಾದಿ ಕಥಾ ಸ್ಪರ್ಧೆ ಏರ್ಪಡಿಸಿದ್ದು, ನಾಡಿನ ಆಸಕ್ತ ಕಥೆಗಾರರು 1 ಸಾವಿರ ಪದಗಳಿಗೆ ಮೀರದಂತೆ ಕಥೆಗಳನ್ನು ಕಳುಹಿಸಬಹುದು. ಸ್ಪರ್ಧೆಯಲ್ಲಿ ಭಾಗವಹಿಸಿದ ಪ್ರತಿಯೊಬ್ಬರಿಗೂ ಪ್ರಶಂಸಾ ಪತ್ರ ನೀಡಲಾಗುವುದು.

ಸ್ಪರ್ಧೆಯಲ್ಲಿ ಗೆದ್ದ ಮೂರು ಕಥೆಗಳಿಗೆ ಮೊದಲನೇ ಬಹುಮಾನ ರೂ. 5000, 2ನೇ ಬಹುಮಾನ ರೂ. 3000, 3ನೇ ಬಹುಮಾನ ರೂ. 2000 ನೀಡಲಾಗುವುದು. ಕಥೆಗಳನ್ನು ಇ–ಮೇಲ್ ಮೂಲಕ ಕಳುಹಿಸಬೇಕು. ಸ್ಪರ್ಧೆಗೆ ರೂ. 500 ಗಳು ಪ್ರವೇಶ ಶುಲ್ಕವನ್ನು ಪಾವತಿಸಬೇಕು. ಕಥೆಗಳನ್ನು ಕಳುಹಿಸಲು ಕಡೆ ದಿನಾಂಕ ಮಾ.15.

ಉಚಿತ ತರಬೇತಿ ಕಾರ್ಯಾಗಾರ

ನಂಜನಗೂಡು,ಫೆ. 22–ಸಾಮರಸ್ಯ ವೇದಿಕೆ ಮೈಸೂರು ಸಹಯೋಗದಲ್ಲಿ ಅತ್ತಿಖಾನೆ ಇಂಗ್ಲಿಷ್ ಅಕಾಡೆಮಿ ನಂಜನಗೂಡು ವತಿಯಿಂದ ಆದರ್ಶ ಶಾಲೆಯ ಪ್ರವೇಶ ಪರೀಕ್ಷೆಗೆ 15 ದಿನಗಳ ಕಾಲ ಉಚಿತವಾಗಿ ತರಬೇತಿ ನೀಡಲಾಗುವುದು. ವಿದ್ಯಾರ್ಥಿಗಳು ನಗರದ ಆರ್.ಪಿ.ರಸ್ತೆ, 13ನೇ ಕ್ರಾಸ್‌ನಲ್ಲಿರುವ ಅತ್ತಿಖಾನೆ ಇಂಗ್ಲಿಷ್ ಅಕಾಡೆಮಿಯಲ್ಲಿ ಹೆಸರನ್ನು ನೊಂದಾಯಿಸಿಕೊಳ್ಳುವ ಮೂಲಕ ಸದಾವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಹೇಶ್ ಅತ್ತಿಖಾನೆ ದೂ. 9845276568 ಸಂಪರ್ಕಿಸಬಹುದು.

ಬೋಗಾದಿ ಕೆರೆ ಬಳಿ ತ್ಯಾಜ್ಯದ ರಾಶಿಗೆ ಬೆಂಕಿ

● ವಿಜಯನಗರ 3ನೇ ಹಂತ ಸುತ್ತಮುತ್ತಲಿನ ವಸತಿ ಬಡಾವಣೆಯಲ್ಲಿ ದಟ್ಟ ಹೊಗೆ ● ಹೂಟಗಳ್ಳಿ ನಗರ ಸಭೆ ಸುರಿದ ಕಸದ ರಾಶಿ ಎಂದು ಪಾಲಿಕೆ ಹೇಳಿಕೆ ● ನಮ್ಮದಲ್ಲ ಮುಡಾ, ಪಾಲಿಕೆ ಕೆಲಸ ಎನ್ನುವ ಹೂಟಗಳ್ಳಿ ನಗರಸಭೆ



ಮೈಸೂರು,ಫೆ22(ಆರ್‌ಕೆ): ನಿತ್ಯ ಮೈಸೂರು ನಗರದಲ್ಲಿ ಉತ್ಪತ್ತಿಯಾಗುವ ಘನ ತ್ಯಾಜ್ಯ ವಿಲೇವಾರಿಗೆ ಪ್ರತ್ಯೇಕ ಘಟಕಗಳಿದ್ದಾಗ್ಯೂ, ಸಾರ್ವಜನಿಕ ಸ್ಥಳದಲ್ಲಿ ಕಂಡಕಂಡಲ್ಲಿ ಕಸ ಸುರಿದು ಪರಿಸರ ಮಾಲಿನ್ಯಗೊಳಿಸುವ ಕೆಲಸ ಎಗ್ಗಿಲ್ಲದೆ ನಡೆಯುತ್ತಿದೆ.

ಕಳೆದ ಎರಡು ದಿನಗಳ ಹಿಂದೆ ಬೋಗಾದಿ ಕೆರೆ ಪಕ್ಕದ ಖಾಲಿ ಜಾಗದಲ್ಲಿ ರಾಶಿಗಟ್ಟಲೆ ಸುರಿದಿದ್ದ ಪ್ಲಾಸ್ಟಿಕ್ ಮತ್ತು ಘನತ್ಯಾಜ್ಯದ ಯಾರ್ಡ್‌ಗೆ ಯಾರೋ ದುಷ್ಕರ್ಮಿಗಳು ಬೆಂಕಿ ಹಾಕಿದ ಪರಿಣಾಮ ಬೋಗಾದಿ 2ನೇ ಹಂತ, ವಿಜಯನಗರ 3ನೇ ಹಂತದ ಬಡಾವಣೆಗಳಲ್ಲಿ ದಟ್ಟ ಹೊಗೆ ಆವರಿಸಿ ನಿವಾಸಿಗಳಿಗೆ ಉಸಿರು ಕಟ್ಟಿದ ಆತಂಕ ಎದುರಾಯಿತು.

ರಾತ್ರಿಯಿಡೀ ಹೊಗೆಯಿಂದ ಆವರಿಸಿದ್ದ ವಿಜಯನಗರ 3ನೇ ಹಂತದಲ್ಲಿ ಮುಂಜಾನೆ ವಾಯುವಿಹಾರಕ್ಕೆ ಹೋದವರಿಗೆ ದಾರಿ ಕಾಣದೇ ಉಸಿರು ಕಟ್ಟಿದಂತಾಗಿ ಕೆಮ್ಮಲಾರಂಭಿಸಿದರು. ಸಾರ್ವಜನಿಕರು ನೀಡಿದ ಮಾಹಿತಿಯಿಂದ ಸ್ಥಳಕ್ಕೆ ತೆರಳಿದ ಪಾಲಿಕೆ ಅಧಿಕಾರಿಗಳು, ಅಗ್ನಿಶಾಮಕ ಠಾಣೆ ಸಿಬ್ಬಂದಿ ಕರೆಸಿ ಕಸದ ರಾಶಿಗೆ ಬಿದ್ದಿದ್ದ ಬೆಂಕಿ ನಂದಿಸಿದರು.

ಘಟನೆಯಿಂದಾಗಿ ಎರಡು ದಿನ ಆ ಭಾಗದ ಬಡಾವಣೆಗಳಲ್ಲಿ ಕೆಟ್ಟವಾಸನೆ ಬೀರಿತ್ತಲ್ಲದೆ, ವಾತಾವರಣ ಕಲುಷಿತ ಗೊಂಡು ರೋಗಿಗಳು, ವಯಸ್ಸಾದವರು, ಗರ್ಭಿಣಿಯರು, ಮಕ್ಕಳಿಗೆ ಉಸಿರಾಟದ ತೊಂದರೆ ಕಾಣಿಸಿಕೊಂಡು ಪರದಾಡುವಂತಾಗಿತ್ತು.

ವಿಜಯನಗರ 3 ಮತ್ತು 4ನೇ ಹಂತ, ಗರುಡಾಚಾರ್ ಬಡಾವಣೆ, ಮೇಟಗಳ್ಳಿ, ಹೆಬ್ಬಾಳ ನಂತಹ ಪ್ರದೇಶದ ರೆವಿನ್ಯೂ ಬಡಾವಣೆಗಳಲ್ಲಿ ಪಾಲಿಕೆಯಿಂದ ಮನೆ ಮನೆಗೆ ತೆರಳಿ ಕಸ ಸಂಗ್ರಹಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತಿದ್ದು, ಪರಿಸರಕ್ಕೆ ಹಾನಿಯಾಗದಂತೆ ಕ್ರಮ ವಹಿಸುತ್ತಿದ್ದರೂ, ಕೆಲವರು ಎಲ್ಲೆಂದರಲ್ಲಿ ಕಸ ಸುರಿಯುತ್ತಿರುವುದಲ್ಲದೆ ತ್ಯಾಜ್ಯಕ್ಕೆ ಬೆಂಕಿ ಹಾಕುತ್ತಿರುವುದರಿಂದ ನಿವಾಸಿಗಳಿಗೆ ತೀವ್ರ ತೊಂದರೆಯಾಗುತ್ತಿದೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರೀಯೆ ನೀಡಿದ ಮೈಸೂರು ಮಹಾನಗರಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಬೋಗಾದಿ ಕೆರೆ ಬಳಿ ಕಸ ತಂದು ಸುರಿಯುತ್ತಿರುವವರು ಹೂಟಗಳ್ಳಿ ನಗರಸಭೆಯವರು. ಅವರು ಸಂಗ್ರಹಿಸಿದ ತ್ಯಾಜ್ಯವನ್ನು ಇಲ್ಲಿನ ಖಾಲಿ ಜಾಗದಲ್ಲಿ ಡಂಪ್ ಮಾಡಿದ್ದಾರೆ ಎಂದರು.

ಬೋಗಾದಿ ಕೆರೆ, ವಿಜಯನಗರ 3ನೇ ಹಂತ ನಗರಪಾಲಿಕೆ ವ್ಯಾಪ್ತಿಯಲ್ಲಿದೆಯಾದರೂ, ತಾಂತ್ರಿಕವಾಗಿ ಅವರು ಹೂಟಗಳ್ಳಿ ನಗರಸಭೆ ಅಡಿ ಬರುವುದರಿಂದ ಅವರು ಅಲ್ಲಿ ತ್ಯಾಜ್ಯವನ್ನು ಹಾಕುತ್ತಿದ್ದಾರೆ. ಬೆಂಕಿ ಹೊತ್ತಿರುವ ಬಗ್ಗೆ ಅಲ್ಲಿನ ಆಯುಕ್ತರಿಗೆ ತಿಳಿಸಿದ್ದ ಮೇರೆಗೆ ಅವರ ನೆರವಿನೊಂದಿಗೆ ಬೆಂಕಿ ನಂದಿಸಲಾಗಿದೆ ಎಂದರು.

ಈ ಕುರಿತು ಪ್ರತಿಕ್ರೀಯೆ ನೀಡಿದ ಹೂಟಗಳ್ಳಿ ನಗರಸಭೆ ಆಯುಕ್ತ ನರಸಿಂಹ ಮೂರ್ತಿ ಅವರು, ವ್ಯಾಪ್ತಿ ನಮಗೆ ಸೇರಿದೆಯಾದರೂ ನಾವು ಅಲ್ಲಿ ಕಸ ಸುರಿಯುತ್ತಿಲ್ಲ, ಸಾರ್ವಜನಿಕರು ಸುರಿದಿರಬಹುದು. ಮುಂದೆ ಆ ಬಗ್ಗೆ ನಿಗಾವಹಿಸಿ ಇಂತಹ ಘಟನೆಗಳು ಸಂಭವಿಸದಂತೆ ಎಚ್ಚರ ವಹಿಸುತ್ತೇವೆ ಎಂದರು.

ವಿಜಯನಗರ 4ನೇ ಹಂತ ಮುಡಾ ಅಧೀನದಲ್ಲೇ ಇರುವುದರಿಂದ ಅವರೇ ಬಡಾವಣೆಯ ಸ್ವಚ್ಛತಾ ಕಾರ್ಯ ನಡೆಸುತ್ತಾರೆ. ಅಲ್ಲಿ ಸಂಗ್ರಹವಾದ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡದೇ ಖಾಲಿ ಜಾಗದಲ್ಲಿ ಸುರಿಯುತ್ತಿರುವುದರಿಂದ ಈ ಸಮಸ್ಯೆ ಎದುರಾಗುತ್ತಿದೆ ಎಂದು ಪಾಲಿಕೆ ಆಯುಕ್ತರು ಆರೋಪಿಸಿದರು.


ತೆರಿಗೆ ಸಂಗ್ರಹಿಸುತ್ತಿರುವ ಮುಡಾ ತನ್ನ ಬಡಾವಣೆಯ ಸ್ವಚ್ಛತೆಯನ್ನು ಮಾತ್ರ ಮಾಡುತ್ತಿದೆ. ಕುಡಿಯುವ ನೀರು, ಒಳಚರಂಡಿ, ಉದ್ಯಾನವನಗಳ ನಿರ್ವಹಣೆಯಂತಹ ಮೂಲ ಸೌಕರ್ಯಗಳನ್ನು ಪಾಲಿಕೆಯಿಂದ ಒದಗಿಸಲಾಗುತ್ತಿದೆ. ಅಂತಹ ಬಡಾವಣೆಗಳನ್ನು ನಮಗೆ ಹಸ್ತಾಂತರಿಸಿದರೆ, ತೆರಿಗೆ ಸಂಗ್ರಹಿಸಿ ಅದಕ್ಕೆ ತಕ್ಕಂತೆ ಇನ್ನೂ ಉತ್ತಮವಾಗಿ ಸೌಲಭ್ಯ ಒದಗಿಸಬಹುದು ಎಂದು ಪಾಲಿಕೆ ಆಯುಕ್ತರು ತಿಳಿಸಿದರು.

ಒಟ್ಟಾರೆ ಕಸ ಸುರಿದು ಬೆಂಕಿ ಹೊತ್ತಿಸಿ ಪರಿಸರ ಮಾಲಿನ್ಯದ ಜವಬ್ದಾರಿ ಹೊರದೆ, ಸ್ಥಳೀಯ ಸಂಸ್ಥೆ ಅಧಿಕಾರಿಗಳು ಪರಸ್ಪರ ಆರೋಪ–ಪ್ರತ್ಯಾರೋಪ ಮಾಡಿ ನುಣುಚಿಕೊಳ್ಳಲೆತ್ನಿಸುತ್ತಿರುವ ಬಗ್ಗೆ ಅಲ್ಲಿನ ನಿವಾಸಿಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಾಳೆ ಶನಿ ಮಹಾಶಾಂತಿ, ಸುದರ್ಶನ ಹೋಮ

ಮೈಸೂರು,ಫೆ.22–ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಫೆ.24ರಂದು ಶನಿವಾರ ಬೆಳಗ್ಗೆ 9ರಿಂದ ಮೀನ, ಕರ್ಕಾಟಕ, ತುಲಾ, ಮಕರ, ಕುಂಭ ರಾಶಿಯವರಿಗೆ ವಿಶೇಷ ಸಂಕಲ್ಪದೊಂದಿಗೆ ಶನಿ ಮಹಾಶಾಂತಿ ಮತ್ತು ಆರೋಗ್ಯಕರ ಮೃತ್ಯುಂಜಯ ಹೋಮ ಬಾಧಾ ನಿವಾರಕ ಮಹಾ ಸುದರ್ಶನ ಹೋಮ ಮತ್ತು ಶ್ರೀ ಸತ್ಯನಾರಾಯಣ ಪೂಜೆ ಏರ್ಪಡಿಸಲಾಗಿದೆ. ಮಧ್ಯಾಹ್ನ 12:30 ಗಂಟೆಗೆ ಪೂರ್ಣಾಹುತಿ ಮತ್ತು ಮಹಾಮಂಗಳಾರತಿ, ಪ್ರಸಾದ ವಿನಿಯೋಗವಿದೆ. ಹೆಚ್ಚಿನ ವಿಷಯಗಳಿಗೆ ಮೈ ಕುಮಾರ್ ಜಾತಕ ವಿಮರ್ಶಕರನ್ನು ಮೊ.ಸಂಖ್ಯೆ 9845183399, 9342183399 ಮೂಲಕ ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.2.2024 ಶುಕ್ರವಾರ, ಮಳೆ ನಕ್ಷತ್ರ: ಶತಭಿಷ 20.2.2024 ರಿಂದ 03.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಚತುರ್ದಶಿ ನಕ್ಷತ್ರ: ಆಶ್ಲೇಷ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಕರ್ನಾಟಕ ಸರ್ಕಾರ, ಧಾರ್ಮಿಕ ದತ್ತಿ ಇಲಾಖೆ:** ಮೈಸೂರು ಅರಮನೆ ಕೋಟೆ ಆವರಣದಲ್ಲಿರುವ ಶ್ರೀ ತ್ರಿಣೇಶ್ವರಸ್ವಾಮಿಯವರ ಬ್ರಹ್ಮೋತ್ಸವ, ಹಗಲು ರಾತ್ರಿ ಪೂಜೆ, ಬಲಿ ಪ್ರಧಾನ ಉತ್ಸವ ನಂತರ ಸಂಧಾನ ಸೇವೆ ಪುರಾಣ, ಸ್ಥಳ: ದೇವಸ್ಥಾನ, ಅರಮನೆ ಆವರಣ.

■ **ಕೆ.ಆರ್.ಯಲ್ಲಪ್ಪಾಚಾರ್ಯರ ಶ್ರೀ ಯಲ್ಲಮ್ಮನವರ ದೇವಸ್ಥಾನ:** ಬೇವಿನಮರದ ಶ್ರೀ ಯಲ್ಲಮ್ಮನವರ 76ನೇ ವರ್ಷದ ಮಹೋತ್ಸವ, ಬೆಳಗ್ಗೆ 7ಕ್ಕೆ ಕಲಶ ಸ್ಥಾಪನೆ, ಬೆ. 9ಕ್ಕೆ ಚಂಡಿಕಾ ಹೋಮ, ಮ. 12.30ಕ್ಕೆ ಪೂರ್ಣಾಹುತಿ ನಂತರ ಪ್ರಸಾದ ವಿನಿಯೋಗ, ಸಂಜೆ 5ಕ್ಕೆ ದೇವರನಾಮ, ಸ್ಥಳ: ದೇವಸ್ಥಾನ, ನಾಲಾಬೀದಿ, ಕೃಷ್ಣರಾಜ ಮೊಹಲ್ಲಾ.

■ **ಮೈಸೂರು ವಿಶ್ವವಿದ್ಯಾನಿಲಯ, ಅಭಿವೃದ್ಧಿ ಅಧ್ಯಯನ ವಿಭಾಗ :** ಸಾಮಾಜಿಕ ವಿಜ್ಞಾನದಲ್ಲಿ ಅಂಕಿ ಅಂಶಗಳ ಅನ್ವಯ ಕುರಿತು ಕಾರ್ಯಾಗಾರ, ಉದ್ಘಾಟನೆ : ಬಿ.ಎನ್. ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್ ಪ್ರಾಧ್ಯಾಪಕ ಪ್ರೊ. ಡಿ. ಆನಂದ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಸಚಿವ ಪ್ರೊ. ಕೆ.ಎಂ. ಮಹದೇವನ್, ಅಧ್ಯಕ್ಷತೆ : ಅಭಿವೃದ್ಧಿ ಅಧ್ಯಯನ ವಿಭಾಗದ ನಿರ್ದೇಶಕ ಪ್ರೊ. ಎಸ್.ಜೆ. ಮಂಜುನಾಥ್, ಸ್ಥಳ: ಪ್ರೊ. ಆರ್.ಪಿ. ಮಿಶ್ರಾ ಸಭಾಂಗಣ, ಬೆಳಗ್ಗೆ 9.30ಕ್ಕೆ.

■ **ಮಹಾಜನ ಪ್ರಥಮ ದರ್ಜೆ ಕಾಲೇಜು :** ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಅವಕಾಶಗಳು ಕುರಿತು ಕಾರ್ಯಾಗಾರ, ಉದ್ಘಾಟನೆ : ಅಕ್ಕ ಐಎಎಸ್ ಅಕಾಡೆಮಿ ನಿರ್ದೇಶಕ ಡಾ. ಶಿವಕುಮಾರ್, ಅಧ್ಯಕ್ಷತೆ : ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಿನ್ಸಿಪಾಲ್ ಡಾ. ಬಿ.ಆರ್. ಜಯಕುಮಾರಿ, ಉಪಸ್ಥಿತರು : ಡಾ. ಎಸ್.ಆರ್. ರಮೇಶ್, ಶ್ರೀಮತಿ ಡಿ. ಗೀತಾ, ಸ್ಥಳ: ಎವಿಸಿ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆ :** ನೃಪತುಂಗ ಕನ್ನಡ ಶಾಲೆ, ಪ್ರೊ. ಎಲ್.ಎಸ್. ಶೇಷಗಿರಿರಾವ್ ಜನ್ಮ ಶತಾಬ್ದಿ, ವಿದ್ಯಾನಿಧಿ ನೀಡಿಕೆ ಮತ್ತು ಮಕ್ಕಳ ಪುಸ್ತಕ ಅಂಗಳ ಉದ್ಘಾಟನೆ, ಉದ್ಘಾಟನೆ : ಕುವೆಂಪು ಭಾಷಾ ಭಾರತಿ ಮಾಜಿ ಅಧ್ಯಕ್ಷ ಡಾ. ಪ್ರಧಾನ್ ಗುರುದತ್ತ, ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಅವರಿಂದ ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರ ಕನ್ನಡ ಕಾಯಕ ಕುರಿತು ಉಪನ್ಯಾಸ, ಸಹಾಯಕ ಪ್ರಾಧ್ಯಾಪಕ ಡಾ. ಡಿ.ಬಿ. ಶಿವಕುಮಾರ್ ಅವರಿಂದ ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರ ಬದುಕು–ಬರಹ (ಸಣ್ಣ ಕತೆಗಳು) ಕುರಿತು ಉಪನ್ಯಾಸ, ಅಧ್ಯಕ್ಷತೆ : ಸಂಸ್ಥೆ ಅಧ್ಯಕ್ಷ ಡಾ. ಯತೀಂದ್ರ ಸಿದ್ದರಾಮಯ್ಯ, ಉಪಸ್ಥಿತರು : ಶ್ರೀಮತಿ ಭಾರತಿ ಶೇಷಗಿರಿರಾವ್, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಬೆಳಗ್ಗೆ 11ಕ್ಕೆ.

■ **ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ:** ಸಾಂಸ್ಕೃತಿಕ ಸಮಿತಿ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ರಂಗಕರ್ಮಿ ಹೆಚ್.ಜನಾರ್ಧನ್ (ಜನ್ನಿ), ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಡಾ.ಎಸ್.ಶಿವರಾಜಪ್ಪ, ಉಪಸ್ಥಿತರು: ಮಹಾವಿದ್ಯಾಲಯ ಪ್ರಾಂಶುಪಾಲ ಡಾ.ಮಹೇಶ್ ದಳಪತಿ, ಸ್ಥಳ: ಶ್ರೀ ನಟರಾಜ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಸುಮಧ್ವ–ವಿಜಯ ಎಕ್ಸ್‌ಪ್ರೆಸ್, ಮಧ್ವ–ಪುರಂದರ ನಮನ, ಗಾನಸಿರಿ–ವೇದಾಂತ ಲಹರಿ, ಪಂಡಿತ್ ಕೃಷ್ಣಾಚಾರ್ಯ ಎಸ್.ಕೆ., ಕಲಾಶ್ರೀ ಡಾ. ಮುದ್ದು ಮೋಹನ್ ಅವರಿಂದ ಸುಮಧ್ವ ವಿಜಯ 11 ಮತ್ತು 12ನೇ ಸರ್ಗಗಳ ವಿಶ್ಲೇಷಣೆ ಹಾಗೂ ಗಾಯನ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5.30 ರಿಂದ.

■ **ಶ್ರೀ ಚಿಕ್ಕಲಿಂಗೇಶ್ವರಸ್ವಾಮಿ ದೇವಸ್ಥಾನ :** ಶ್ರೀ ಮದ್ರಾಜಯೋಗಿ ಶ್ರೀ ಚಿಕ್ಕಲಿಂಗಣ್ಣಸ್ವಾಮಿಯವರ 87ನೇ ವರ್ಷದ ಆರಾಧನಾ ಮಹೋತ್ಸವ, ಪ್ರತಿನಿತ್ಯ ಸಂಜೆ 5.30 ರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಭಜನೆ, ಕೃ. ರಾಮಚಂದ್ರ ಅವರಿಂದ ಹರಿಭಕ್ತಿಸಾರ ಕಾವ್ಯವಾಚನ, ಗಣೇಶ ಶರ್ಮ ಅವರಿಂದ ಶಿವಪುರಾಣ ಕುರಿತು ಪ್ರವಚನ, ಸ್ಥಳ: ದೇವಸ್ಥಾನ, ಉಪ್ಪಿನಕೇರಿ, ಮಂಡಿ ಮೊಹಲ್ಲಾ, ಸಂಜೆ 6.30 ರಿಂದ.

■ **ಶ್ರೀ ಎಲ್ಲಮ್ಮತಾಯಿ ದೇವಸ್ಥಾನ :** ಭರತ ಹುಣ್ಣಿಮೆ ಅಂಗವಾಗಿ ಓಂ ಶ್ರೀ ಎಲ್ಲಮ್ಮತಾಯಿ ಅಮ್ಮನವರ 20ನೇ ವರ್ಷದ ಪೂಜಾ ಮಹೋತ್ಸವ, ಸಂಜೆ 6ಕ್ಕೆ ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದಿಂದ ಅಮ್ಮನವರ ಕಳಸವನ್ನು ವೀರಭದ್ರ ಕುಣಿತ ಮಂಗಳವಾದ್ಯ ಸಮೇತ ಮೆರವಣಿಗೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ರಾಜರಾಜೇಶ್ವರಿ ನಿಲಯ, ರಾಮಾನುಜ ರಸ್ತೆ, ಕೆ.ಆರ್. ಮೊಹಲ್ಲಾ.

■ **ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ಧರ್ಮಸಂಸ್ಥೆ ಟ್ರಸ್ಟ್ :** 77ನೇ ಜಾತ್ರಾ ಮಹೋತ್ಸವ, ಬೆಳಗ್ಗೆ ಶ್ರೀ ಗಣಪತಿ ನವಗ್ರಹ, ಶ್ರೀ ಪರಶುರಾಮ, ಶ್ರೀ ದೇವಿಯರಿಗೆ ಪಂಚಾಮೃತಾಭಿಷೇಕ, ಹೋಮಗಳು, ಪೂರ್ಣಾಹುತಿ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ದೇವಸ್ಥಾನ, ಮಂಡಿ ಮೊಹಲ್ಲಾ.

■ **ಶ್ರೀ ಕೃಷ್ಣ ಗಾನಸಭಾ :** ಡಾ. ಸಿ.ಎಂ. ಮುನಿರಾಮಪ್ಪನವರಿಂದ ಅವರ ತಂದೆ ತಾಯಿಗಳ ಜ್ಞಾಪಕಾರ್ಥ ಸಂಗೀತ ಕಾರ್ಯಕ್ರಮ, ವಿದ್ವಾನ್ ಮೈಸೂರು ಎನ್. ಶ್ರೀನಾಥ್–ಗಾಯನ, ವಿದ್ವಾನ್ ಎಂ.ಡಿ. ಅರ್ಜುನ–ಪಿಟೀಲು, ವಿದ್ವಾನ್ ಪಿ.ಎಸ್. ಶ್ರೀಧರ–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಮೋರ್ಚಿಂಗ್, ಸ್ಥಳ: ಆಳ್ವಾರ್ ಕಲಾಭವನ, ಗೋಕುಲಂ 3ನೇ ಹಂತ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ– ಲೀಲಾ ಅಪ್ಪಾಜಿ, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ ಪ್ರೊ.ಕೆ.ಬಿ.ಪ್ರವೀಣ್, ಕುಲಸಚಿವರು. ಪ್ರಸ್ತುತಿ–ಎನ್.ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವ ಗೀತೆಗಳು– ರತ್ನಮಾಲಾ ಪ್ರಕಾಶ್, ನರಸಿಂಹನಾಯಕ್, ರಮಾ ಅರವಿಂದ್, 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ವಿವೇಕ್ ಸದಾಶಿವಂ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ–ಶೈಲಾ ಸಿದ್ದರಾಮಪ್ಪ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಯು.ಪಿ. ರಾಜು–ಮ್ಯಾಂಡೋಲಿನ್, 4.00 ಮಹಿಳಾರಂಗ–ಸಖೀಪದ, ಪ್ರಸ್ತುತಿ– ಎಂ.ಎಸ್.ಭಾರತಿ, 4.30 ವೃತ್ತಿ ಮಾರ್ಗದರ್ಶನ–ಸ್ವಉದ್ಯೋಗದ ಪ್ರಾಮುಖ್ಯತೆ ಕುರಿತು ರಾಕೇಶ್ ಅಕುಲ ಅವರೊಂದಿಗೆ ಮಾತುಕತೆ, 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ–ಕೃಷಿಲೋಕ, ಪ್ರಸುತಿ–ಆರ್.ಲೋಕೇಶ್ವರಿ, 8.00 ಸಂಧ್ಯಾರಾಗ–ಪರಿಸರ ಸಂರಕ್ಷಣೆಯಲ್ಲಿ ತೊಡಗಿಕೊಂಡಿರುವ ಡಾ.ಹೆಚ್.ಸಿ. ಶರಶ್ಚಂದ್ರ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಜಿ.ಶಾಂತಕುಮಾರ್, 9.30 ತ್ರಿಚೂರ್ ವಿ. ರಾಮಚಂದ್ರನ್–ಹಾಡುಗಾರಿಕೆ, 10.00 ಹಳ್ಳಿ ಹಾಡು, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.30 ಸವಿನೆನಪು

Apache RTR 160 4V
TVS
DOWN PAYMENT
₹8,100/-*
* T&C Apply
AMBARI TVS
Sayyaji Rao Road, Bamboo Bazar, Mandi Mohalla, Mysore - 01.
Ph : 99640 21500, 90191 72160

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 23 ಶುಕ್ರವಾರ 2024

ಸಂಪುಟ: 44 | ಸಂಚಿಕೆ: 306 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಯಶಸ್ವಿ ಕಂಚಿ ಸೊಸೈಟಿ
D. D. Urs Road, MYSORE
Ph: 0821-2431830 / 4262458

22 ಕ್ಯಾರೆಟ್ ಚಿನ್ನದ ದರ @ ತೊಳಸಿ
ತೊಳಸಿ ಜ್ಯೂಯಲ್ಸ್
THOLASI JEWELS
₹ 5750/-
ಅಶೋಕ ರಸ್ತೆ, ಮೈಸೂರು. ಫೋ: 0821-2521926,
ದೇವಸ್ಥಾನದ ರಸ್ತೆ ಪಿ.ಪಿ.ಮೊಹಲ್ಲಾ, ಮೈಸೂರು.
ಫೋ: 0821-2411926
ಎಂಜಿಎಸ್ ರಸ್ತೆ, ಬಸ್‌ಸ್ಟ್ಯಾಂಡ್ ಎದುರು, ನಂಜನಗೂಡು. ಫೋ: 08221-200926

ಬೆಂಗಳೂರು ಗ್ರಾಮಾಂತರ ಇಲ್ಲವೇ ಬೆಂಗಳೂರು ಉತ್ತರದಿಂದ

ಡಾ.ಸಿ.ಎನ್.ಮಂಜುನಾಥ್ ಸ್ಪರ್ಧೆಗೆ ಅಮಿತ್ ಷಾ ಹಸಿರು ನಿಶಾನೆ

- ಮಾಜಿ ಸಿಎಂ ಕುಮಾರಸ್ವಾಮಿ ಅವರೊಂದಿಗೆ ಸುದೀರ್ಘ ಮಾತುಕತೆ
- ಬಿಜೆಪಿ ಚಿಹ್ನೆಯಡಿ ಡಾ.ಮಂಜುನಾಥ್ ಸ್ಪರ್ಧೆಗೆ ಸಹಮತ
- ಜೆಡಿಎಸ್‌ಗೆ ಮಂಡ್ಯ, ಹಾಸನ, ಕೋಲಾರದ ಜೊತೆಗೆ ಚಿಕ್ಕಬಳ್ಳಾಪುರ ಇಲ್ಲವೇ ಹೈದರಾಬಾದ್–ಕರ್ನಾಟಕದಲ್ಲಿ ಒಂದು ಕ್ಷೇತ್ರ ಬಿಟ್ಟುಕೊಡಲು ತೀರ್ಮಾನ



ಡಾ. ಸಿ.ಎನ್.ಮಂಜುನಾಥ್

ಬೆಂಗಳೂರು,ಫೆ.22(ಕೆಎಂಶಿ)– ಜಯದೇವ ಹೃದ್ರೋಗ ಸಂಸ್ಥೆಯ ಮಾಜಿ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಅವರನ್ನು ಲೋಕಸಭಾ ಚುನಾವಣಾ ಕಣಕ್ಕಿಳಿಸಲು ಕೇಂದ್ರ ಗೃಹ ಸಚಿವ ಅಮಿತ್ ಷಾ ಹಸಿರು ನಿಶಾನೆ ತೋರಿದ್ದಾರೆ.



ಗುರುವಾರ ದೆಹಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಅವರ ಪುತ್ರ ನಿಖಿಲ್ ಭೇಟಿಯಾದರು.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಕುಟುಂಬಕ್ಕೆ ಸೇರಿದ ಡಾ.ಮಂಜುನಾಥ್ ಅವರನ್ನು ಬಿಜೆಪಿ ಚಿನ್ಹೆಯಡಿ ಬೆಂಗಳೂರು ಗ್ರಾಮಾಂತರ ಇಲ್ಲವೇ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಸಲು ನಿರ್ಧರಿಸಲಾಗಿದೆ. ಡಾ.ಮಂಜುನಾಥ್ ಅವರನ್ನು ಕಣಕ್ಕಿಳಿಸುತ್ತಿರುವುದರಿಂದ ಜೆಡಿಎಸ್‌ಗೆ ನಾಲ್ಕು ಸ್ಥಾನಗಳ ಬದಲು ಮಂಡ್ಯ, ಹಾಸನ, ಕೋಲಾರ ಕ್ಷೇತ್ರ ಬಿಟ್ಟುಕೊಡುವ ನಿರ್ಧಾರವಾಗಿದೆ.

ದೆಹಲಿಯಲ್ಲಿಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಜೊತೆ ಜೆಡಿಎಸ್ ರಾಜ್ಯಾಧ್ಯಕ್ಷ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ನಡೆಸಿದ ಮಾತುಕತೆ ಸಂದರ್ಭದಲ್ಲಿ ಸೀಟು ಹಂಚಿಕೆ ಸೇರಿದಂತೆ ಕರ್ನಾಟಕದಲ್ಲಿನ ರಾಜಕೀಯ ● 9ನೇ ಪುಟಕ್ಕೆ

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರರಿಂದ ಸಂಸದ ಶ್ರೀನಿವಾಸ್ ಪ್ರಸಾದ್ ಭೇಟಿ

ಲೋಕಸಭಾ ಚುನಾವಣೆ ಗೆಲುವಿನ ಲೆಕ್ಕಾಚಾರ; ಕುತೂಹಲ ಮೂಡಿಸಿದ ಉಭಯ ನಾಯಕರ ರಹಸ್ಯ ಮಾತುಕತೆ



ಮೈಸೂರು, ಫೆ.22(ಬಿಎಲ್‌ಯು)–ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಚಾಮರಾಜನಗರ ಸಂಸದ ಶ್ರೀನಿವಾಸ ಪ್ರಸಾದ್ ಅವರನ್ನು ಮೈಸೂರಿನಲ್ಲಿ ಇಂದು ಭೇಟಿ ಮಾಡಿ ಲೋಕಸಭಾ ಚುನಾವಣೆ ಗೆಲುವಿನ ಸಂಬಂಧ ಚರ್ಚೆ ನಡೆಸಿದರು. ಮೈಸೂರಿನ ಜಯಲಕ್ಷ್ಮಿಪುರಂನ ಶ್ರೀನಿವಾಸ ಪ್ರಸಾದ್ ಮನೆಗೆ ಭೇಟಿ ನೀಡಿದ ವಿಜಯೇಂದ್ರ ಅವರನ್ನು ಶ್ರೀನಿವಾಸ ಪ್ರಸಾದ್ ಅಳಿಯಂದಿರಾದ ಮಾಜಿ ಶಾಸಕ ಹರ್ಷವರ್ಧನ ಹಾಗೂ ಡಾ. ಮೋಹನ್ ಸ್ವಾಗತಿಸಿದರು. ಸುಮಾರು ಅರ್ಧ ಗಂಟೆ ಕಾಲ ನಡೆದ ● 9ನೇ ಪುಟಕ್ಕೆ

DGF JEWELLERS
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ ಉಳಿದ ಹಣ ತಕ್ಷಣ ಕೊಡುತ್ತೇವೆ. (T&C)
ಒಂದು ಗ್ರಾಂ ಚಿನ್ನಕ್ಕೆ 7000
8884171888

2 BHK HOUSE
ON 20X30 PLOT
₹ 24.99 Lakh Only
Pay ₹4 Lakh Only BALANCE LOAN
PRM/KA/RERA/1268/378/PR/200117/003188
Yesh 9538885507

ಮೈಸೂರು–ಚಾಮರಾಜನಗರ ಜಿಲ್ಲಾ ಪೊಲೀಸ್ ಪತ್ತಿನ ಸಹಕಾರ ಸಂಘ(ರಿ)
ಆಡಳಿತ ಮಂಡಳಿ ಚುನಾವಣೆ–2024
ದಿನಾಂಕ: 25-02-2024ನೇ ಭಾನುವಾರ
ಸಮಯ: ಬೆಳಗ್ಗೆ 9-00 ಗಂಟೆಯಿಂದ ಸಂಜೆ 4-00 ಗಂಟೆಯವರೆಗೆ
ಸ್ಥಳ: ಸೆಂಟ್ ಫಿಲೋಮಿನಾ ಪ್ರೌಢಶಾಲೆ, ಗಾಂಧಿನಗರ ರಸ್ತೆ, ಅಂಬೇಡ್ಕರ್ ಸರ್ಕಲ್ ಹತ್ತಿರ, ಎನ್. ಆರ್. ಮೊಹಲ್ಲಾ, ಮೈಸೂರು
ಮೇಲ್ಕಂಡ ಸಂಘದ ನಿರ್ದೇಶಕ ಸ್ಥಾನದ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದು, ನಿಮ್ಮ ಅಮೂಲ್ಯ ಮತವನ್ನು ಕ್ರಮ ಸಂಖ್ಯೆ 31, ನೇಗಿಲು ಗುರುತಿಗೆ ತಪ್ಪದೇ ನೀಡಿ, ಆಶೀರ್ವದಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

ಕ್ರಮ ಸಂಖ್ಯೆ	ಹೆಸರು	ಚಿಹ್ನೆ
31	ರಘು ಎಂ.ಜಿ. (MGR) M.Sc., B.Ed	

TO QUALIFY IN CSP-2024
IAS GS-II CSAT
Join our 100 Hrs.
SPECIAL TRAINING with SKILL BUILDING Approach
on Saturdays-5 hrs:2.30 to 8 pm &
Sundays-5 hrs: 8.30 to 1 pm for 10 weeks
Useful for Banking SSC & Railways Exam
Fees Rs.10,000/-only
Conducted by: -B. SHIVAKUMAR
Viveka Bureau
S.J.P. Road, K.R.Puram, Hassan.
M: 9448867087

ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಸರ್ಕಾರಿ ಶಾಲಾ ಮಕ್ಕಳಿಗೆ ರಾಗಿ ಮಾಲ್ಟ್ ವಿತರಣೆ



ಬೆಂಗಳೂರು,ಫೆ.22(ಕೆಎಂಶಿ)– 'ಉತ್ತಮ ಪೌಷ್ಟಿಕಾಂಶ ಉತ್ತಮ ಶಿಕ್ಷಣಕ್ಕೆ ರಹದಾರಿ' ಕಾರ್ಯಕ್ರಮದಡಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಸರ್ಕಾರಿ ಶಾಲೆಗಳ 55 ಲಕ್ಷ ಮಕ್ಕಳ ಮಾನಸಿಕ, ದೈಹಿಕ ಆರೋಗ್ಯಕ್ಕಾಗಿ ರಾಗಿ ಮಾಲ್ಟ್ ವಿತರಣೆ ಆರಂಭಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ರಾಗಿ ಹೆಲ್ತ್ ಮಿಕ್ಸ್ ವಿತರಣೆ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಲ್ಲಿನ ರಕ್ತಹೀನತೆ ಮತ್ತು ಪೌಷ್ಟಿಕಾಂಶ ಕೊರತೆ ನೀಗಿಸಿದಾಗ ಮಾತ್ರ ಮಾನಸಿಕವಾಗಿ ಸದೃಢರಾಗಿ ಓದಿನಲ್ಲಿ ಹೆಚ್ಚು ಚುರುಕಾಗುತ್ತಾರೆ, ಗುಣಮಟ್ಟದ ಶಿಕ್ಷಣ ಪಡೆದುಕೊಳ್ಳುತ್ತಾರೆ, ಶ್ರೀಮಂತರ ಮಕ್ಕಳಂತೆ ● 9ನೇ ಪುಟಕ್ಕೆ

ವನ್ಯಜೀವಿ ಅಂಗಾಂಗ, ಅದರಿಂದ ಮಾಡಿದ ಕಲಾಕೃತಿ ಹೊಂದುವುದು ಅಪರಾಧ

ಏ.10ರೊಳಗೆ ಅರಣ್ಯ ಇಲಾಖೆಗೆ ಹಿಂದಿರುಗಿಸಿ



ಈಶ್ವರ ಖಂಡ್ರೆ



ಮೈಸೂರು, ಫೆ.22–ವನ್ಯಜೀವಿ ಅಂಗಾಂಗಗಳನ್ನು ಹೊಂದಿರುವುದು ಕಾನೂನಿನ ಪ್ರಕಾರ ಅಪರಾಧ. ಹಾಗಾಗಿ ವನ್ಯಜೀವಿ ಅಂಗಾಂಗ ಹಾಗೂ ಅದರಿಂದ ಮಾಡಿರುವ ಕಲಾಕೃತಿಗಳನ್ನು ಹೊಂದಿರುವವರು ಏ.10ರೊಳಗೆ ಸಮೀಪದ ಅರಣ್ಯ ಇಲಾಖಾ ಕಚೇರಿಗೆ ಒಪ್ಪಿಸಬೇಕೆಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಮನವಿ ಮಾಡಿದ್ದಾರೆ. ಸರ್ಕಾರವು ಏ.10ರವರೆಗೆ ನೀಡಿರುವ ಕಾಲಾವಕಾಶವನ್ನು ಸದುಪಯೋಗಪಡಿಸಿಕೊಂಡು ಅರಣ್ಯ ಇಲಾಖಾ ಕಚೇರಿಗೆ ತೆರಳಿ, ಆರ್‌ಎಫ್‌ಒ, ಎಸಿಎಫ್ ಅಥವಾ ಡಿಸಿಎಫ್ ಅವರಿಗೆ ವನ್ಯಜೀವಿ ಅಂಗಾಂಗಗಳನ್ನು ನೀಡಬೇಕು ಎಂದು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ವನ್ಯಜೀವಿ ಅಂಗಾಂಗ ಹೊಂದಿರುವುದು ಕಾನೂನಿನ ಪ್ರಕಾರ ಅಪರಾಧ ಎಂಬ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕಾರ್ಯೋನ್ಮುಖವಾಗಿದೆ. ಕೆಎಸ್‌ಆರ್‌ಟಿಸಿ ಬಸ್‌ಗಳೂ ಸೇರಿದಂತೆ ಸಾರ್ವಜನಿಕ ವೇದಿಕೆಗಳಲ್ಲಿ ● 9ನೇ ಪುಟಕ್ಕೆ

V.K. GOLD
ಗಿರವಿ ಚಿನ್ನಾಭರಣ ಖರೀದಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಮ್ಮ ಕಂಪನಿಯ ಹಣದಿಂದ ಬಿಡಿಸಿ ಉಳಿದ ಹಣವನ್ನು ಕೊಡುತ್ತೇವೆ (T&C)
ಒಂದು ಗ್ರಾಂ ಚಿನ್ನಕ್ಕೆ 6200
8867564400

PHARMACY JOB
Required SALES EXECUTIVES
(Experience 3+ Yrs in Pharma Field)
Work Location:
Mysore - Chamarajanagara - Mandya - Kodagu
Work Head Quarters Is Mysore
WALK IN INTERVIEW
Date: 24-02-2024 Time: 10.00 AM to 6.00 PM
Venue : ASHIRVAAD PHARMACEUTICALS
Opp Mission Hospital, Mysore. Call : 93418 16171



ನಕ್ಕರೆ ಅದೇ ಸ್ವರ್ಗ

ಆತ : "ರೈಲಲ್ಲಿ ಪ್ರಯಾಣ ಮಾಡೋದನ್ನು ನಿಲ್ಲಿಸಿ ಬಿಟ್ಟಿದ್ದೀನಿ, ಫ್ಲಾಟ್‌ಫಾರಂ ಅಂದ್ರೆ ನನಗೆ ಅಲರ್ಜಿ"

ಈತ : "ಅದ್ಯಾಕಯ್ಯಾ?"

ಆತ : "ನಾನು ನನ್ನ ಹೆಂಡ್ತೀನ ಮೊದಲ ಬಾರಿಗೆ ನೋಡಿ ಮೆಚ್ಚಿದ್ದು ಫ್ಲಾಟ್‌ಫಾರಂ ಮೇಲೆ, ಈಗಂತೂ ನಾನು ಫ್ಲಾಟ್ ಆಗಿ ಫಾರಂ ಕಳ್ಕೊಂಡಿದ್ದೀನಿ!"

ಮೈಸೂರು ಮಿತ್ರ

ಶುಕ್ರವಾರ, 23 ಫೆಬ್ರವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಏನೂ ಮಾಡದೆ ಇರುವುದಕ್ಕಿಂತ, ತಡವಾಗಿಯಾದರೂ ಏನಾದರೂ ಒಳ್ಳೆಯದನ್ನು ಮಾಡುವುದು ಶ್ರೇಯಸ್ಕರ –ಸೂಕ್ತಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೆಣ್ಣೆ ಮನ್ಯಾಗೆ ಇಟ್ಕೊಂಡು ತುಪ್ಪಕ್ಕೆ ಮನೆ ಮನೆ ಅಲೆದಂತೆ

ನಿಮ್ಮ ಪತ್ರಗಳು

■ ಹಸಿದವರಿಗೆ ಅನ್ನ ಕೊಟ್ಟರೆ ಬೇಸರವೇ?

ಮಾನ್ಯರೆ,

ಹಸಿದಾಗ ಅನ್ನ, ದಣಿದಾಗ ನೀರು ಕೊಡದಿದ್ದ ಮೇಲೆ ಏನ್ ಚಂದವೊ ಅಂತ ಹೇಳಿರುವ ತವರಿನ ಸಿರಿಯ ಚಿತ್ರದ ಹಾಡನ್ನೊಮ್ಮೆ ನೆನಪಿಸಿಕೊಳ್ಳಬೇಕು. ಕುರುಡನಿಗೆ ಕಣ್ಣು, ಹಸಿದವನಿಗೆ ಅನ್ನ, ಬಡವನಿಗೆ ಹಣ, ರೋಗಿಗೆ ಚಿಕಿತ್ಸೆ ಕೊಟ್ಟರೆ ಬೇಸರವಾಗುತ್ತದೆಯೇ? ಯಾಕಿ ಪ್ರಶ್ನೆ ಎಂದರೆ ಬಿಜೆಪಿ ಟಿಕೆಟ್ ಆಕಾಂಕ್ಷಿಯಾದ ವೆಂಕಟರಮಣಸ್ವಾಮಿ (ಪಾಪು) ಇವರು ಚಾಮರಾಜನಗರದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಸ್ಥಳೀಯರಿಗೆ ಟಿಕೆಟ್‌ಗೆ ಒತ್ತಾಯಿಸಿದ್ದಾರೆ. ಈ ವೇಳೆ ಕಾಂಗ್ರೆಸ್‌ನ ಗ್ಯಾರಂಟಿಯಿಂದ ಜನ ಬೇಸತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಈ ಹೇಳಿಕೆಯು ಹಾಸ್ಯಾಸ್ಪದವಾಗಿದೆ. ಬೆಲೆ ಏರಿಕೆಯಿಂದ ಬೇಸತ್ತಿರುವ ಜನರಿಗೆ ಗೃಹಲಕ್ಷ್ಮಿ ಹಣ ಕೊಟ್ಟರೆ ಬೇಸರವೆ? ಉಚಿತ ವಿದ್ಯುತ್, ಬಸ್ ಸೌಲಭ್ಯ, ಅಕ್ಕಿ ಕೊಟ್ಟರೆ ಬೇಸರವೇ, ರೋಗಿಗಳಿಗೆ ಆಸ್ಪತ್ರೆ ಕಟ್ಟಿಸಿಕೊಟ್ಟರೆ ಬೇಸರವೇ, ರೈತರ ಸಾಲದ ಬಡ್ಡಿ ಮನ್ನಾ ಮಾಡಿದರೆ ಬೇಸರವೇ? ಖಂಡಿತ ಇದನ್ನು ಕರ್ನಾಟಕ ರಾಜ್ಯದ ಜನತೆ ಒಪ್ಪುವುದಿಲ್ಲ. ಒಂದು ಪಕ್ಷದ ಕಾರ್ಯಕರ್ತರಾಗಿ ಹೇಳಬಹುದೇ ವಿನಃ ಸಾರ್ವತ್ರಿಕವಾಗಿ ಒಪ್ಪಲಾಗದು. ಜನತೆ ಗ್ಯಾರಂಟಿಯನ್ನು ಒಪ್ಪಿಕೊಂಡಿದ್ದಾರೆ, ಅಪ್ಪಿಕೊಂಡಿದ್ದಾರೆ. ನಿಜವಾಗಿ ಜನ ಬೇಸತ್ತಿದ್ದಾರೆ ಎಂದಾದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಯಾವುದನ್ನು ಉಚಿತವಾಗಿ ಕೊಡುವುದಿಲ್ಲ, ಕೊಡುತ್ತಿರುವುದನ್ನು ನಿಲ್ಲಿಸುತ್ತೇವೆ ಎಂದು ಘೋಷಿಸಲಿ. ಆಗ ಗ್ಯಾರಂಟಿಯ ನಾರಿ ಶಕ್ತಿ ತಿಳಿಯುತ್ತದೆ. ಕಾಂಗ್ರೆಸ್ ಗ್ಯಾರಂಟಿ ಮುಂದೆ ವಿರೋಧ ಪಕ್ಷದವರು ಜನರ ಬಳಿ ಮತ ಕೇಳೋದೆ ದೊಡ್ಡ ಸವಾಲು ಎಂಬುದನ್ನು ಮರೆಯುವಂತಿಲ್ಲ.

–ದಡದಹಳ್ಳಿ ರಮೇಶ್, ಚಂದಕವಾಡಿ, ಚಾಮರಾಜನಗರ ಜಿಲ್ಲೆ.

■ ಮಧ್ಯಪ್ರದೇಶದಲ್ಲಿ ಕೃಷಿಕರ ಬಂಧನ ಖಂಡನೀಯ

ಮಾನ್ಯರೆ,

ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಂಯುಕ್ತ ಕಿಸಾನ್ ಮೋರ್ಚಾ ಹಾಗೂ ಕಿಸಾನ್ ಮಜ್ದೂರ್ ಮೋರ್ಚಾ ದೆಹಲಿ ಚಲೋಗೆ ಕರೆ ಕೊಟ್ಟಿದ್ದು, ಅದರಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದ ರಾಜ್ಯ ರೈತರನ್ನು ಭೋಪಾಲ್‌ನ ರೈಲ್ವೆ ನಿಲ್ದಾಣದಲ್ಲಿ ಬಂಧಿಸಿರುವುದು ಅತ್ಯಂತ ಖಂಡನೀಯ.

ಇದು ಹೋರಾಟಗಾರರನ್ನು ಹತ್ತಿಕ್ಕುವ ಕೆಲಸ. ರೈತರ ಬಗ್ಗೆ ಹಿತಾಸಕ್ತಿ ಇದ್ದರೆ ಕೇಂದ್ರ ಸರ್ಕಾರ ಬೆಂಬಲ ಬೆಲೆಯನ್ನು ಕಾನೂನಾತ್ಮಕವಾಗಿ ಜಾರಿ ಮಾಡಲಿ. ಕೇಂದ್ರ ಹಾಗೂ ಮಧ್ಯಪ್ರದೇಶ ಸರ್ಕಾರಕ್ಕೆ ಕಾಳಜಿ ಹೊಂದಿದ್ದರೆ ಬಂಧಿಸಿರುವ ರೈತರನ್ನು ಬಿಡುಗಡೆಗೊಳಿಸಿ ಅದನ್ನು ಬಿಟ್ಟು ಕೃಷಿಕರನ್ನು ಬಂಧಿಸಿ ಪೊಲೀಸರು ಹಲ್ಲೆ ಮಾಡಿರುವುದು ದುರದೃಷ್ಟಕರ.

–ಪಿ ಸಿ ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು

■ ಎಸ್‌ಬಿಐ ಎಟಿಎಂ ದುರಸ್ತಿ ಮಾಡಿ

ಮಾನ್ಯರೆ,



ಹೆಚ್.ಡಿ.ಕೋಟೆಯ ಹ್ಯಾಂಡ್‌ಪೋಸ್ಟ್ ಹೃದಯ ಭಾಗದಲ್ಲಿರುವ ಎಸ್‌ಬಿಐ ಬ್ಯಾಂಕ್‌ನ ಎಟಿಎಂ ಯಂತ್ರ ಕೆಟ್ಟು 15 ದಿನಗಳೇ ಕಳೆದರೂ ಅದನ್ನು ದುರಸ್ತಿ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು ಎಂಬ ಅರಿವನ್ನೇ ಬ್ಯಾಂಕಿನ ವ್ಯವಸ್ಥಾಪಕರು ಮರೆತಂತಿದೆ. ಮಾನ್ಯ ವ್ಯವಸ್ಥಾಪಕರೇ ಪ್ರತಿದಿನ ನೂರಾರು ಮಂದಿ ತಮ್ಮ ಬ್ಯಾಂಕಿನ ಮೂಲಕ ವಹಿವಾಟು ನಡೆಸುವ ಜನರಿದ್ದಾರೆ ಹಾಗೂ ಪ್ರತಿದಿನ ನೂರಾರು ಮಂದಿ ಸಾರ್ವಜನಿಕರು ಕಾರ್ಯ ನಿಮಿತ್ತ ಹ್ಯಾಂಡ್ ಪೋಸ್ಟ್‌ಗೆ ಅಗಮಿಸುತ್ತಾರೆ. ಅವರ ವಾಣಿಜ್ಯ ವ್ಯವಹಾರ ನಡೆಸಲು ಹಣದ ಅವಶ್ಯಕತೆ ಬಂದಾಗ ತಮ್ಮ ಬ್ಯಾಂಕಿನ ಎಟಿಎಂ ಮುಂದೆ ಬರುತ್ತಾರೆ. ಆದರೆ ಇನ್ನೂ ದುರಸ್ತಿಯಾಗದೆ ಕೆಟ್ಟು ಹೋಗಿರುವ ಎಟಿಎಂ ನೋಡಿ ಜನರು ನಿರಾಸೆಯಿಂದ ಹಿಂದಿರುಗುತ್ತಾರೆ. ಹಾಗಾಗಿ ತಕ್ಷಣ ಎಟಿಎಂ ಅನ್ನು ದುರಸ್ತಿ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಿ. ಮತ್ತು ಸೂಕ್ತ ಮಾಹಿತಿಯನ್ನು ನೀಡುವ ಕಾವಲುಗಾರರನ್ನು ನೇಮಿಸಿ.

–ಕೆ.ಎಸ್.ಸುರೇಶ್, ಶಿಕ್ಷಕರು, ಕೆ.ಜಿ.ಹಳ್ಳಿ, ಹೆಚ್.ಡಿ. ಕೋಟೆ.

■ ಸತ್ಯಾಂಶ ಬಿಚ್ಚಿಟ್ಟ 'ಮಿತ್ರ'

ಮಾನ್ಯರೇ,

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನೂತನವಾಗಿ ಆರಂಭಿಸಿರುವ ಟ್ರಾಮಾ ಕೇರ್ ಸೆಂಟರ್‌ನಲ್ಲಿ ಅಕ್ಷರಶಃ ಖಾಸಗಿ ಲ್ಯಾಬ್‌ಗಳ ಹಾವಳಿ ವಿಪರೀತವಾಗಿದೆ. ಈ ಕುರಿತು ಫೆ.20ರ 'ಮೈಸೂರು ಮಿತ್ರ'ನಲ್ಲಿ ' ಹೆಸರಿಗೆ ಸರ್ಕಾರಿ ಆಸ್ಪತ್ರೆ; ಇಲ್ಲಿ ದುಡ್ಡಿಲ್ಲದೆ ಚಿಕಿತ್ಸೆ ಇಲ್ಲ' ಶೀರ್ಷಿಕೆಯಲ್ಲಿ ಪ್ರಕಟವಾದ ಸುದ್ದಿಯಲ್ಲಿ ತಿಳಿಸಿರುವಂತಹ ಅನುಭವ ಸಂಬಂಧಿಕರಿಗೆ, ಪರಿಚಯಸ್ಥರಿಗೆ ಆಗಿದೆ.

ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಸರ್ಕಾರ ಕೋಟ್ಯಾಂತರ ರೂ. ಖರ್ಚು ಮಾಡುತ್ತಿದ್ದರೂ ತಪಾಸಣೆ ನೆಪದಲ್ಲಿ ಬಡಜನರಿಂದ ಹಣ ದೋಚುವುದು ಸರಿಯಲ್ಲ. ವೈದ್ಯೋ ನಾರಾಯಣ ಹರಿ ಎಂಬಂತೆ ವೈದ್ಯರು ರಕ್ಷಕರಾಗಬೇಕೆ ಹೊರತು ಭಕ್ಷಕರಾಗಬಾರದು. ಇತ್ತೀಚಿನ ದಿನಗಳಲ್ಲಿ ವೈದ್ಯರು ತಮ್ಮ ಕರ್ತವ್ಯ ಹಾಗೂ ವೃತ್ತಿ ಘನತೆಯನ್ನು ಮರೆಯುತ್ತಿರುವುದು ಅತ್ಯಂತ ವಿಷಾದನೀಯ. ಸಾಮಾಜಿಕ ಕಳಕಳಿಯುಳ್ಳ ಸುದ್ದಿಗಳನ್ನು ಪ್ರಕಟಿಸುತ್ತಿರುವ 'ಮಿತ್ರ'ನಿಗೆ ಧನ್ಯವಾದ ಅರ್ಪಿಸುತ್ತೇನೆ.

–ಚೇತನ್ ಕಾಂತರಾಜು, ಅಧ್ಯಕ್ಷರು, ಜೈ ಭೀಮ್ ಜನಸ್ಪಂದನ ವೇದಿಕೆ

■ ಶಿಕ್ಷಕ ವೃತ್ತಿಯ ಗೌರವ ಉಳಿಸಿ

ಮಾನ್ಯರೆ,

ಶಿಕ್ಷಕರು ಎಂದರೆ ಎಲ್ಲರಿಗೂ ವಿಶೇಷವಾದ ಗೌರವ ಹೆಚ್ಚಿನದಾಗಿರುತ್ತದೆ. ಯಾವುದೇ ಕ್ಷೇತ್ರದಲ್ಲಿ ಸಾಧನೆಗೈದಿದ್ದಾರೆ ಎಂದರೆ ವಿದ್ಯೆ ಕಲಿಸಿದ ಶಿಕ್ಷಕರೇ ಅದಕ್ಕೆ ಕಾರಣ. ಆದರೆ ಸರಗೂರು ತಾಲೂಕಿನ ಪ್ರೌಢಶಾಲೆಯ ಶಿಕ್ಷಕನ ನಡವಳಿಕೆ ಅಸಹ್ಯ ಹುಟ್ಟಿಸುವಂತಿದೆ. ಈ ಶಿಕ್ಷಕನ ವರ್ತನೆಯಿಂದ ಶಿಕ್ಷಕ ವೃತ್ತಿಗೆ ಕಪ್ಪು ಚುಕ್ಕೆಯಂತಾಗಿದೆ. ಶಿಕ್ಷಕನ ಕುಡಿತ ಹಾಗೂ ಅಸಭ್ಯ ವರ್ತನೆಗೆ ವಿದ್ಯಾರ್ಥಿಗಳು ನಲುಗಿ ಹೋಗಿದ್ದಾರೆ. ಬೇರೆಡೆ ವರ್ಗ ಮಾಡದೇ ಕೆಲಸದಿಂದ ವಜಾ ಮಾಡುವುದೇ ಒಳ್ಳೆಯದು. ಇಂತಹ ಗೋಮುಖ ವ್ಯಾಘ್ರಗಳಿದ್ದರೆ ಹೆಣ್ಣು ಮಕ್ಕಳ ಗತಿ ಏನು. ಈ ಶಿಕ್ಷಕನಿಗೆ ಕಠಿಣ ಶಿಕ್ಷೆ ವಿಧಿಸಿ. ಈ ಶಿಕ್ಷೆ ಮತ್ತೊಬ್ಬರಿಗೆ ಪಾಠವಾಗಬೇಕು. ಎಲ್ಲಾ ಸರ್ಕಾರಿ ಸೌಲಭ್ಯಗಳು ಕಡಿತಗೊಳಿಸಬೇಕು. ಪೋಷಕರಿಗೂ ಹಾಗೂ ವಿದ್ಯಾರ್ಥಿನಿಯರಿಗೂ ಆಪ್ತ ಸಮಾಲೋಚನೆ ನಡೆಸಿ ಧೈರ್ಯ ತುಂಬಬೇಕು. ವಿದ್ಯಾಭ್ಯಾಸ ಮುಂದುವರೆಯಲು ಎಲ್ಲರ ಸಹಕಾರ ಅಗತ್ಯ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು

ಈ ಜೀವನ...



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು,
ರಾಮಕೃಷ್ಣ ವಿದ್ಯಾಶಾಲೆ,
ಮೈಸೂರು. ಮೊ.: 9036389640

'ಮಂಕುತಿಮ್ಮ'ನ ಪ್ರೇರಣೆಯಲ್ಲಿ 'ಮುದ್ದುರಾಮ'ನ ಸತ್ಸಂದೇಶ

ಕೆ.ಸಿ.ಶಿವಪ್ಪ ಎಂಬ ಹೆಸರು ಕನ್ನಡ ಸಾಹಿತ್ಯ ವಲಯದಲ್ಲಿ ಚಿರಸ್ಥಾಯಿಯಾಗಿ ಉಳಿಯುವ ಹಾಗೂ ಕಿರಿದರೊಳ್ ಹಿರಿತನದ ಸಾರಸತ್ವವನ್ನು ಸಾವಿರಾರು ಚೌಪದಿಗಳಲ್ಲಿ ಕೃತಿಸಿ ಮುದ್ದುರಾಮನಾಗಿ ತಮ್ಮದೇ ವಿಶಿಷ್ಟ ಛಾಪು ಮೂಡಿಸಿದ್ದಾರೆ. ಮೂಲತಃ ಕೆ.ಸಿ.ಶಿವಪ್ಪ ಅವರು ಚಾಮರಾಜನಗರ ಜಿಲ್ಲೆಯ ಕಾಗಲವಾಡಿಯವರು. 'ನಾನು ಡಿ.ವಿ.ಜಿ ಅವರ ಮಂಕುತಿಮ್ಮನ ಕಗ್ಗದಿಂದ ಪ್ರೇರೇಪಿತನಾಗಿ ಮುದ್ದುರಾಮನನ್ನು ರಚಿಸಿರುವೆ' ಎಂಬ ವಿನೀತ ಭಾವದಲ್ಲಿಯೇ ನುಡಿಯುವ ಶಿವಪ್ಪ ಅವರು ಮುದ್ದುರಾಮನ ಹೆಸರಿನಲ್ಲಿ ನಾಲ್ಕು ಸಾಲಿನ ಮುಕ್ತಕದಲ್ಲಿ ಇದುವರೆವಿಗೂ ಸುಮಾರು ಮೂವತ್ತು ಸಾವಿರಕ್ಕೂ ಹೆಚ್ಚು ಮುಕ್ತಕಗಳನ್ನು ಬರೆದು ಪ್ರಸಿದ್ಧರಾದವರು. 87 ವರ್ಷವಾದರೂ ಹುರುಪಿನಿಂದ ಇಂದಿನ ಯುವ ಜನಾಂಗದವರು ಸಹ ಬಾಯಿ ಮೇಲೆ ಬೆರಳಿಟ್ಟು ನಾಚುವಂತೆ ಕ್ರಿಯಾಶೀಲ ಕಾರ್ಯ ಚಟುವಟಿಕೆಯ ಪಾದರಸವಾಗಿದ್ದಾರೆ. ಇಂತಹ ಶ್ರೇಷ್ಠ ಹಾಗೂ ಈ ಶತಮಾನದ ಅಭಿನವ ಡಿವಿಜಿ ಅವರಂತೆ ನಮಗೆ ಗೋಚರವಾಗುತ್ತಿರುವ ಶ್ರೀಯುತ ಕೆ.ಸಿ.ಶಿವಪ್ಪನವರಿಗೆ ಇತ್ತೀಚೆಗೆ ಔಚಿತ್ಯಪೂರ್ಣವಾಗಿ ಡಿ.ವಿ.ಜಿ ಪ್ರತಿಷ್ಠಾನದ ವತಿಯಿಂದ ಡಿ.ವಿ.ಜಿ. ಪ್ರಶಸ್ತಿ ಅರಸಿ ಬಂದದ್ದು ಸಂತಸದ ಸಂಗತಿ.

ಮುದ್ದುರಾಮನ ಹೆಸರಿನಲ್ಲಿ ಬರೆದ ಮುಕ್ತಕಗಳ ವಸ್ತು ವಿಷಯಗಳ ವ್ಯಾಪ್ತಿ ಅಗಾಧವಾದುದು. ಆಡು ಮುಟ್ಟದ ಸೊಪ್ಪಿಲ್ಲ ಮುದ್ದುರಾಮನ ಮುಕ್ತಕಗಳು ಮಾತಾಡದ ವಿಷಯಗಳಿಲ್ಲ ಎನ್ನುವ ಬಗೆಯಲ್ಲಿ ಸಾರ್ವಕಾಲಿಕವಾಗುವ ಸರ್ವರಲ್ಲು ಸಲ್ಲುವ, ಎದೆಯ ನೋವನ್ನು ಹಗುರವಾಗಿಸುವ, ದಾರಿತಪ್ಪಿದವರ ದಾರಿದೀಪವಾಗಿವೆ. ಕೆಲವು ಮುಕ್ತಕಗಳ ಆಂತರ್ಯದಲ್ಲಿ ಅಲೆದಾಡಿ ಬರುವ ಸಣ್ಣ ಪ್ರಯತ್ನ ಸದರಿ ಲೇಖನ.

ಕರುಬಿದರೆ ಬಂತೇನು ಉಪ್ಪು ಸಿಹಿಯಾಗುವುದೇ
ಕಾಗೆ ಕೋಗಿಲೆಯಾಗಿ ಹಾಡ ಕಲಿತೀತೆ
ಯಾರಿಗಿದೆ ಅರೆಗಳಿಗೆ ಗೋಳಕತೆ ಕೇಳಲಿಕೆ
ಚಿಂತೆ ಜೀವನವೇನೊ ! – ಮುದ್ದುರಾಮ

ಪ್ರಸ್ತುತ ಸನ್ನಿವೇಶಕ್ಕೆ ತೀರಾ ಅಗತ್ಯವಾದಂತಹ ಮುಕ್ತಕ ಇದಾಗಿದೆ. ಉಪ್ಪು ತನ್ನ ಮೂಲ ಗುಣವನ್ನು ಬಿಟ್ಟು ಸಿಹಿಯಾಗಲು, ಕಾಗೆ ಕೋಗಿಲೆಯಾಗಿ ಹಾಡಲು ಸಾಧ್ಯವಿಲ್ಲ. ಹಾಗೆಯೇ ಒಬ್ಬರು ಮತ್ತೊಬ್ಬರ ಮೇಲೆ ಹೊಟ್ಟೆಕಿಚ್ಚು ಪಡುವುದರಿಂದ ಯಾವುದೇ ಲಾಭ ಇಲ್ಲ. ಯಾರಿಗೂ ಕೂಡ ನಿನ್ನ ಗೋಳಿನ ಕಥೆಯನ್ನು ಕೇಳಲಿಕ್ಕೆ ಅರೆಗಳಿಗೆ ಸಮಯವಿಲ್ಲ. ಬರೀ ಚಿಂತಿಸಿ ಸಮಯವನ್ನು ವ್ಯರ್ಥ ಮಾಡಿಕೊಳ್ಳುವುದು ಜೀವನವೇನೋ? ಎಂದು ಪ್ರಶ್ನಿಸಿದ್ದಾರೆ.

ತಮ್ಮ ಶಕ್ತಿ ಸಾಮರ್ಥ್ಯವನ್ನು ಅರ್ಥ ಮಾಡಿಕೊಳ್ಳಲಾರದೆ ತಮ್ಮ ಜೀವನವನ್ನು ಮತ್ತೊಬ್ಬರೊಂದಿಗೆ ಹೋಲಿಕೆ ಮಾಡಿಕೊಂಡು ಮತ್ತೊಬ್ಬರನ್ನು ನೋಡಿ ಯಾವಾಗಲೂ ಕರಬುವಂತಹ ಮನೋಭಾವ ಉಳ್ಳವರಿಗೆ ತಿಳಿ ಹೇಳಿದಂತಿದೆ ಈ ಮುಕ್ತಕ. ಆಧುನಿಕ ಜೀವನದಲ್ಲಿ ಪ್ರತಿಯೊಬ್ಬರೂ ಓಟಕ್ಕೆ ಬಿದ್ದವರಂತೆ ಓಡಲೇಬೇಕು. ಯಾರಿಗೂ ಕೂಡ ಮತ್ತೊಬ್ಬರ ಕಷ್ಟವನ್ನು ಕೇಳುವ ಸಮಯ ಇರುವುದಿಲ್ಲ. ಹಾಗಾಗಿ ಇಲ್ಲದ ಚಿಂತನೆಗಳನ್ನು ಮಾಡುತ್ತಾ ಸಮಯವನ್ನು ಕಳೆಯಬೇಡ ಎಂದು ತಿಳಿ ಹೇಳಿದ್ದಾರೆ.

ನೀನವನ ಚಪ್ಪಲಿಯ ಹಾಕಿ ನಡೆ ಕೆಲ ನಿಮಿಷ.,
ಅರಿವಾಗುವುದು ಆಗ ಅದರೆಡರುತೊಡರು.
ದೂರ ಬೆಟ್ಟದ ಕಲ್ಲು ಕಾಣುವುದು ನುಣುಪಾಗಿ.,
ಅವರವರಿಗಿದೆ ಕಷ್ಟ – ಮುದ್ದುರಾಮ

ಬಹುತೇಕ ಮನುಷ್ಯರಲ್ಲಿ ಸಾಮಾನ್ಯವಾಗಿ ಇರುವ ಒಂದು ದೌರ್ಬಲ್ಯವೆಂದರೆ ತಮ್ಮ ಬದುಕನ್ನು ಮತ್ತೊಬ್ಬರ ಬದುಕಿನೊಂದಿಗೆ ಹೋಲಿಸಿಕೊಂಡು ನೋಡಿ ವ್ಯಥೆಪಡುವುದು. ಅವರ ಬದುಕೇ ಬೇರೆ ತಮ್ಮ ಬದುಕೆ ಬೇರೆ ಎಂಬಂತಹ ಸಾಮಾನ್ಯ ತಿಳುವಳಿಕೆಯನ್ನು ಕೂಡ ಕೆಲವೊಮ್ಮೆ ಮರೆತಿರುತ್ತಾರೆ. ಅಂತಹ ಜನರಿಗೆ ಬುದ್ಧಿವಾದವನ್ನು ಹೇಳುವಂತಿದೆ ಈ ಮುಕ್ತಕ.

ಆನೆಯ ಭಾರ ಆನೆಗೆ ಇರುವೆ ಭಾರ ಇರುವೆಗೆ ಎಂಬ ಗಾದೆಯಂತೆ ಪ್ರತಿಯೊಬ್ಬರಿಗೂ ಅವರದೇ ಆದ ಕಷ್ಟ ಸುಖ ಇರುತ್ತದೆ. ಆದರೆ ಅದನ್ನು ಅರ್ಥಮಾಡಿಕೊಳ್ಳದೆ ಕಷ್ಟ ನನಗೆ ಮಾತ್ರ ಇದೆ, ನನ್ನನ್ನೇ ಹುಡುಕಿಕೊಂಡು ತೊಂದರೆಗಳು ಬರುತ್ತಿವೆ. ಉಳಿದವರೆಲ್ಲರೂ ಚೆನ್ನಾಗಿದ್ದಾರೆ, ಸುಖವಾಗಿದ್ದಾರೆ ಎಂದು ಭ್ರಮಿಸಿ ಒಳಗೊಳಗೆ ವ್ಯಥೆಪಡುವ ಮನೋಭಾವ ಉಳ್ಳಂತಹ ಜನರಿಗೆ ಬುದ್ಧಿವಾದವನ್ನು ಹೇಳುವ ರೀತಿಯಲ್ಲಿದೆ ಈ ಮುಕ್ತಕ. ನೀನು ಅವನ ಚಪ್ಪಲಿಯನ್ನು ಹಾಕಿ ಕೆಲ ನಿಮಿಷ ನಡೆದು ನೋಡು, ಆಗ ನಿನಗೆ ಅರಿವಾಗುವುದು ಅದರಲ್ಲಿ ಇರುವಂತಹ ತೊಂದರೆ. ದೂರದ ಬೆಟ್ಟದ ಕಲ್ಲು ನುಣುಪಾಗಿ ಕಂಡರೂ ಹತ್ತಿರ ಹೋದಾಗಲೇ ಗೊತ್ತಾಗುವುದು ಕಲ್ಲು ಮುಳ್ಳು ಎಷ್ಟಿದೆ, ಹೇಗಿದೆ ಎಂದು. ಅವರವರ ಕಷ್ಟ ಅವರವರಿಗೆ ತಿಳಿಯುವುದು. ಹಾಗೆಯೆ ಕಲ್ಲು ಮುಳ್ಳು ಎಷ್ಟಿದೆ ಎಂಬ ಸತ್ಯ ಗ್ರಹಣವಾಗುತ್ತದೆ. ಪ್ರತಿಯೊಬ್ಬರ ನೋವು ಅನುಭವಿಸಿದವರಿಗೆ ತಿಳಿದಿರುತ್ತದೆ ವಿನಃ ಉಳಿದವರಿಗಲ್ಲ ಎಂಬ ಸಾರ್ವಜನಿಕ ಸತ್ಯವನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ.


ರಜತ ತಟ್ಟೆಯಲಿಟ್ಟು ಕೊಟ್ಟ ಮಾತ್ರಕೆ ದ್ರಾಕ್ಷಿ
ಕಳೆದುಕೊಳ್ಳುವುದೇನು ತನ್ನ ಹುಳಿ ರುಚಿಯ
ಹೊರ ರೂಪದಲ್ಲಿಲ್ಲ ವಸ್ತುವಿನ ನಿಜಸತ್ವ,
ತೋರಿಕೆಯ ಗುಣ ಗುಣವೆ – ಮುದ್ದುರಾಮ

ಬಹಿರಂಗದ ತೋರಿಕೆಗಿಂತ ಅಂತರಂಗದ ಸತ್ವ ಮುಖ್ಯ ಎಂಬುದನ್ನು ಈ ಮುಕ್ತಕದಲ್ಲಿ ತಿಳಿಸಲಾಗಿದೆ. ನೀಡಿರುವ ಉಪಮೇಯು ಕೂಡ ಅರ್ಥವತ್ತಾಗಿದೆ. ಬೆಳ್ಳಿ ತಟ್ಟೆಯಲ್ಲಿ ಇಟ್ಟು ಕೊಟ್ಟಮಾತ್ರಕ್ಕೆ ದ್ರಾಕ್ಷಿ ತನ್ನಲ್ಲಿರುವ ಹುಳಿಯನ್ನು ಕಳೆದುಕೊಳ್ಳಲು ಸಾಧ್ಯವಿಲ್ಲ. ತಟ್ಟೆ ಬೆಳ್ಳಿಯದ್ದು ಎಂದ ಮಾತ್ರಕ್ಕೆ ಹಣ್ಣಿನ ರುಚಿಯು ಸಿಹಿಯಾಗಿರಲೇಬೇಕು ಎಂದೇನಲ್ಲ. ತಟ್ಟೆ ಯಾವುದೇ ಇರಲಿ ಹಣ್ಣಿನ ರುಚಿ ಹೇಗಿರುವುದು ಹಾಗೆ ಇರುತ್ತದೆ. ಇಲ್ಲಿ ಹಣ್ಣಿನ ಒಳಗಡೆ ಇರುವ ರುಚಿ ಮುಖ್ಯವಾಗುತ್ತದೆ ವಿನಹ ತಟ್ಟೆಯಲ್ಲ. ಹಾಗೆಯೇ ನಾವು ವ್ಯಕ್ತಿಯ ವ್ಯಕ್ತಿತ್ವಕ್ಕೆ ಮನ್ನಣೆ ನೀಡಬೇಕೆ ಹೊರತು ತೋರ್ಪಡಿಕೆಯ ಗುಣಕ್ಕೆ ಅಲ್ಲ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಮುಖವಾಡ ಎಂಬುದು ಒಂದಲ್ಲ ಒಂದು ದಿನ ಕಳಚಿ ಬೀಳಲೇಬೇಕು ಏಕೆಂದರೆ ಅದು ಮುಖವಾಡವೇ ಹೊರತು ಮುಖವಲ್ಲ. ಹಾಗೆಯೇ ಏನೇ ತೋರ್ಪಡಿಕೆಯ ನಾಟಕವನ್ನಾಡಿದರೂ ಕೊನೆಗುಳಿಯುವುದು ಅವರ ನಿಜ ಸ್ವರೂಪವೇ ಹೊರತು ನಾಟಕವಲ್ಲ. ಇದನ್ನೇ ಶಿವಪ್ಪನವರು ದ್ರಾಕ್ಷಿಯ ಉಪಮೇಯ ಮೂಲಕ ತುಂಬಾ ಸೊಗಸಾಗಿ ವರ್ಣಿಸಿದ್ದಾರೆ. ಮನ್ನಣೆ, ಗೌರವ ನೀಡಬೇಕಾಗಿರುವುದು ನಿಜವಾದ ವ್ಯಕ್ತಿತ್ವಕ್ಕೆ ಹೊರತು ತೋರ್ಪಡಿಕೆಯ ಗುಣಕ್ಕಲ್ಲ ಎಂಬುದು ಈ ಮುಕ್ತಕದ ಮುಖ್ಯ ಉದ್ದೇಶ ಎನ್ನಬಹುದು.

ಬೇಕು ತಿನಲಿಕೆ ತಿನಿಸು, ಹಣ ವೆಚ್ಚ ಮಾಡಲಿಕೆ.,
ಅತಿಯಾದರದೆ ನಮಗೆ ನೂರು ತಲೆನೋವು.
ಬರಿಬಿಸಿಲು, ಬರಿಸೋನೆ ಹಿತವಲ್ಲ ಜೀವಿತಕೆ.,
ಮಿತವಿದ್ದರದೆ ಅಂದ – ಮುದ್ದುರಾಮ

ಅತಿಯಾದ ಅಮೃತವು ವಿಷ ಎಂಬ ಗಾದೆ ಮಾತನ್ನು ನೆನಪಿಸುವಂತಿದೆ ಈ ಮುಕ್ತಕ. ತಿನ್ನೋದಕ್ಕೆ ತಿನಿಸು, ಖರ್ಚು ಮಾಡಲು ಹಣ ಬೇಕೇ ಬೇಕು. ಆದರೆ ಅದು ಮಿತವಾಗಿರಬೇಕು. ಉಚಿತವಾಗಿ ಆಹಾರ ಸಿಕ್ಕಿದೆ ಎಂದೋ ಅಥವಾ ಭಕ್ಷ್ಯ ಭೋಜನಗಳು ಇವೆ ಎಂದೋ ಆಸೆಪಟ್ಟು ಅತಿಯಾಗಿ ತಿಂದರೆ ಅಜೀರ್ಣವಾಗಬಹುದು, ಇನ್ನಿತರ ಕಾಯಿಲೆಗಳನ್ನು ತಂದೊಡ್ಡಬಹುದು. ಹಾಗೆಯೇ ಜೀವನ ನಡೆಸಲು ಹಣ ಬೇಕು. ಆದರೆ ಆ ಹಣ ಅತಿಯಾಗಿರಬಾರದು. ಈ ಮಾತಿನ ಅರ್ಥ ಸಂಪಾದನೆ ಮಾಡಬಾರದು ಎಂದಾಗಲೀ ಹಣ ಮಾಡಬಾರದು ಎಂದಾಗಲೀ ಅಲ್ಲ. ಬರೀ ಹಣದ ಬೆನ್ನತ್ತಿ ಹೋದರೆ ಬೇಕು ಬೇಕು ಎಂಬ ಅತಿ ಆಸೆ ಉಂಟಾಗಿ ಎಲ್ಲವನ್ನು ಕಳೆದುಕೊಳ್ಳಬೇಕಾಗುತ್ತದೆ. ಮಿತ ಯಾವಾಗಲೂ ಒಳ್ಳೆಯದು, ಅತಿ ಯಾವಾಗಲೂ ತಲೆ ನೋವನ್ನು ತಂದೊಡ್ಡುವುದು. ಬರೀ ಬಿಸಿಲು ಇದ್ದರೂ ಕಷ್ಟ, ಬರಿ ಮಳೆಯೇ ಆದರೂ ಕಷ್ಟ, ಮಿತವಾಗಿದ್ದರೆ ಎಲ್ಲವೂ ಚೆಂದ. ಅತಿಯಾಗಿ ಆಸೆ ಪಡದೆ ಮಿತವಾಗಿ ಆಸೆ ಪಟ್ಟರೆ ಬದುಕು ಸುಂದರ ಎಂಬುದನ್ನು ತುಂಬಾ ಸೊಗಸಾಗಿ ಈ ಮುಕ್ತಕ ಕಟ್ಟಿಕೊಡುತ್ತಿದೆ.



ಕೆ.ಸಿ.ಶಿವಪ್ಪ

ಬರದ ದಿನವನು ನೆನೆದು ಇಂದೇಕೆ ಚಡಪಡಿಕೆ
ಮಾಗಿ ಚಳಿ ನೆನೆದೀಗ ಕಂಪಿಸುವೆ ಏಕೆ
ಹೆದರುವುದೆ ಶೀತಲಕೆ ಗಿರಿಯನೇರುವ ಮೊದಲೆ
ಬದುಕು ಈ ನಿಮಿಷದಲಿ – ಮುದ್ದುರಾಮ

ಜೀವನ ಎಂದರೆ ಏಳು– ಬೀಳಿನ ಪಯಣ. ಏನೇ ಕಷ್ಟಗಳು ಎದುರಾದರೂ ಅದನ್ನು ಎದುರಿಸಿ ಮುನ್ನುಗ್ಗಲೇಬೇಕು. ಹುಟ್ಟಿದ ಮೇಲೆ ಸಾವು ಸಹಜ. ಆಗೆಂದ ಮಾತ್ರಕ್ಕೆ ಯಾರು ಕೂಡ ಸ್ಮಶಾನದಲ್ಲಿ ಮನೆ ಮಾಡಿಕೊಂಡು ಜೀವಿಸಲಾರರು. ಎದುರಾಗುವ ಅಡೆತಡೆಗಳು ಏನೇ ಇದ್ದರೂ ಅದನ್ನು ದಾಟಿ ಮುನ್ನುಗ್ಗಲೇಬೇಕು. ಈ ಮುಕ್ತಕದಲ್ಲಿಯೂ ಅದನ್ನೇ ಹೇಳಿದ್ದಾರೆ. ಮುಂದೆ ಕಷ್ಟ ಬರುತ್ತದೆ ಎಂದೋ ಅಥವಾ ಸಮಸ್ಯೆಗಳು ಬರುತ್ತದೆ ಎಂದೋ ಈ ದಿನ ಚಡಪಡಿಸುವ ಅಗತ್ಯ ಇಲ್ಲ. ಮಾಗಿಯ ಸಮಯದಲ್ಲಿ ಚಳಿ ಹೆಚ್ಚಾಗಿರುತ್ತದೆ. ಮಾಘ ಮಾಸದಲ್ಲಿ ಚಳಿ ಜಾಸ್ತಿ ಎಂದು ಇಂದು ನಡುಗುವ ಅಗತ್ಯವಿಲ್ಲ. ಬೆಟ್ಟವನ್ನು ಹತ್ತುವ ಮೊದಲೇ ಭಯಪಡುವ ಅಗತ್ಯವಿಲ್ಲ. ಈ ಕ್ಷಣದಲ್ಲಿ ಬದುಕುವುದನ್ನು ರೂಢಿಸಿಕೊಳ್ಳಬೇಕು. ಯುಗಾದಿಯ ಹಬ್ಬದಂದು ಬೇವು ಬೆಲ್ಲವನ್ನು ಜೀವನದಲ್ಲಿ ಕಷ್ಟ ಸುಖಗಳು ಏನೇ ಬಂದರೂ ಅದನ್ನು ಸಮಾನವಾಗಿ ಸ್ವೀಕರಿಸಿ ಬಾಳುವೆ ಎಂಬ ಉದ್ದೇಶದಿಂದ ತಿನ್ನುತ್ತೇವೆ. ಹಾಗೆಯೇ ಬರದ ನಾಳೆಗಾಗಿ ಇಂದು ಸಿಕ್ಕಿರುವ ಸುಮಧುರ ಕ್ಷಣಗಳನ್ನು ಹಾಳು ಮಾಡಿಕೊಳ್ಳುವ ಅಗತ್ಯವಿಲ್ಲ. ಈ ಕ್ಷಣ ಮರಳಿ ಬರಲಾರದು ಜೀವಿಸು ಈ ಕ್ಷಣದಲ್ಲೇ ಎಂಬುದನ್ನು ತುಂಬಾ ಅರ್ಥವತ್ತಾಗಿ ಈ ಮುಕ್ತಕದಲ್ಲಿ ಹೇಳಲಾಗಿದೆ.

ನನಗೆ ಈ ಮುಕ್ತಕವನ್ನು ಓದುವಾಗ ಡಿವಿಜಿ ಅವರು ಬರೆದಿರುವ ಮಂಕುತಿಮ್ಮನ ಕಗ್ಗದ ಪದ್ಯ ಜ್ಞಾಪಕಕ್ಕೆ ಬಂತು.

ದಿವಸಕ್ಕೆ, ನಿಮಿಷದಿಂ ನಿಮಿಷಕ್ಕೆ
ಭವಿಷಿಯವ ಚಿಂತಿಸದೆ ಬದುಕ ನೂಕುತಿರು
ವಿವರಗಳ ಜೋಡಿಸುವ ಯಜಮಾನ ಬೇರಿಹನು
ಸವೆಸು ನೀಂ ಜನುಮವನು –ಮಂಕುತಿಮ್ಮ

ಈ ಕಗ್ಗದಲ್ಲಿ ಡಿವಿಜಿ ಅವರು ಜನರಿಗೆ ಬುದ್ಧಿವಾದವನ್ನು ಹೇಳಿದ್ದಾರೆ. ದಿನದಿಂದ ದಿನಕ್ಕೆ, ನಿಮಿಷದಿಂದ ನಿಮಿಷಕ್ಕೆ ಭವಿಷ್ಯವನ್ನು ಚಿಂತಿಸದೇ ಬದುಕುವುದನ್ನು ಕಲಿ ನೀನು ಏನಾಗಬೇಕೆಂದು ವಿವರಗಳನ್ನು ಜೋಡಿಸುವ ಯಜಮಾನನೊಬ್ಬ ಇರುವನು ನೀನು ನಿನ್ನ ಜೀವನವನ್ನು ನಡೆಸು ಅಂದರೆ ನಮಗೆ ಕಷ್ಟಗಳು ತಪ್ಪಿದಲ್ಲ, ನಮ್ಮ ಜೀವನ ಯಾವಾಗ ಸರಿಯಾಗುತ್ತೋ ಎಂದು ಬದುಕಿನ ಸುಮಧುರ ಕ್ಷಣಗಳನ್ನು ಮರೆತು ಬಾಳುವ ಜನರಿಗೆ ಕಿವಿಮಾತು ಹೇಳಿದಂತಿದೆ ಈ ಕಗ್ಗ. ನಿನ್ನ ಜೀವನವನ್ನು ನೀನು ನಡೆಸು ಮುಂದೇನಾಗುತ್ತದೆ ಎಂದು ಚಿಂತಿಸಿ ಅದರ ಬಗ್ಗೆ ಪರಿತಪಿಸುವ ಅಗತ್ಯ ನಿನಗಿಲ್ಲ. ನಿನ್ನ ಭವಿಷ್ಯ ಚೆನ್ನಾಗಿರಬೇಕು ಎಂದಾದರೆ ಭವಿಷ್ಯದ ಬಗ್ಗೆ ಕನಸು ಕಾಣುವ ಬದಲು ಪ್ರಾಮಾಣಿಕತೆಯಿಂದ ವರ್ತಮಾನವನ್ನು ನಡೆಸು ನಿನಗೇನು ಸಿಗಬೇಕೋ ಅದು ಸಿಕ್ಕೇ ಸಿಗುತ್ತದೆ ಎಂದು ತಿಳಿಸುತ್ತದೆ. ನಿಜ ಅಲ್ವ, ಭವಿಷ್ಯದ ಬಗ್ಗೆ ಕನಸು ಕಾಣುತ್ತಾ ವರ್ತಮಾನದ ಕ್ಷಣಗಳನ್ನು ಮರೆತರೆ ಅದು ಎಷ್ಟು ಸರಿ? ನಮ್ಮ ಕಾಯಕಗಳನ್ನು ನಾವು ಮಾಡುತ್ತಾ ಸಾಗಿದರೆ ಉತ್ತಮ ಬದುಕು ನಮಗಾಗಿ ಕಾದಿರುತ್ತದೆ.

ಇರಲಿ ಬಿಡು ನಾಳೆಗಿದು ಎನ್ನದಿರು ನೀ ಮರೆತು
ಮಾಡು ಅಂದಿನ ಕೆಲಸ ಅಂದಂದೆ ನೀನು.
ಮುಂದೂಡಿದರೆ ನೋವು,ಮರೆಯದಿರೆ ಅದು ನಲಿವು
ನಾಳೆಯೆಂದರೆ ಹಾಳು! – ಮುದ್ದುರಾಮ

ಸೋಮಾರಿತನ ಮನುಷ್ಯನ ಅತಿ ದೊಡ್ಡ ಶತ್ರು. ನಮ್ಮ ಸಾಧನೆಗೆ ಅಡ್ಡಿ ಬರುವುದೇ ಮೊದಲಿಗೆ ಈ ಸೋಮಾರಿತನ. ಇಂತಹ ಸೋಮಾರಿತನವನ್ನು ಮೈಗೂಡಿಸಿಕೊಳ್ಳಬಾರದು ಎಂಬುದನ್ನು ತಿಳಿಸುವಂತಿದೆ ಈ ಮುಕ್ತಕ.

ಅಂದಂದಿನ ಕೆಲಸವನ್ನು ಅಂದೇ ಮಾಡಿ ಮುಗಿಸಬೇಕು. ನಾಳೆಗೆ ಮಾಡಿದರೆ ಆಯಿತು ಎಂದು ನಿರ್ಲಕ್ಷ್ಯ ಮಾಡಿದರೆ ಕೆಲಸವನ್ನು ಮುಂದೂಡಿದರೆ ಅದು ಮುಂದಕ್ಕೆ ಹೋಗುತ್ತದೆ. ಮರೆವು ಉಂಟಾಗುತ್ತದೆ. ಒಂದು ವೇಳೆ ನಾಳೆ ಅಂದುಕೊಂಡದ್ದು ಮರೆಯದಿದ್ದರೆ ಅದು ನಲಿವುಗಳನ್ನು ಕೊಡಬಹುದು ಆದರೆ ಹಾಗೆ ಆಗುವ ಸಾಧ್ಯತೆ ತೀರಾ ಕಡಿಮೆ ಅದಕ್ಕೆ ಶಿವಪ್ಪನವರು ನಾಳೆ ಎಂದರೆ ಹಾಳು ಎನ್ನುವ ಮೂಲಕ ಅಂದಂದಿನ ಕೆಲಸವನ್ನು ಅಂದೇ ಮಾಡಿ ಮುಗಿಸು ಎಂದು ಸೂಚನೆಯನ್ನು ನೀಡಿದ್ದಾರೆ. ಸೋಮಾರಿತನ ಎಂಬುದನ್ನು ಮೈಗೂಡಿಸಿಕೊಳ್ಳಬಾರದು ಎಂಬುದನ್ನು ಈ ಮುಕ್ತಕದ ಮುಖಾಂತರ ಸೂಚ್ಯವಾಗಿ ತಿಳಿಸಿದ್ದಾರೆ ಎನ್ನಬಹುದು.

ಇದು ಬೇಕು, ಅದು ಬೇಕು ಎಂದೆನುತ ಹಿರಿಯಾಸೆ
ಜಾಲದಲಿ ಸಿಲುಕಿದರೆ ಹೊರದಾರಿಂಎಲ್ಲಿ?
ಮಿತಗೊಳಿಸು ಬಯಕೆಗಳ.,ಬದುಕು ಪರಹಿತಕಾಗಿ
ಹಚ್ಚು ಸೇವೆಯ ಹಣತೆ – ಮುದ್ದುರಾಮ

ಆಸೆಯೇ ದುಃಖಕ್ಕೆ ಮೂಲ ಎಂಬ ಬುದ್ಧನ ನುಡಿಯಂತೆ ಮನುಷ್ಯನನ್ನು ಬಂಧನದಲ್ಲಿ ಹಿಡಿದಿಟ್ಟುಕೊಳ್ಳುವ ಕೆಲಸವನ್ನು ಈ ಆಸೆ ಮಾಡುತ್ತದೆ. ಆಸೆ ಎಂಬುದಕ್ಕೆ ಮಿತಿಯಾಗಲಿ ಅಂತ್ಯವಾಗಲಿ ಇಲ್ಲ. ಬೇಕು, ಬೇಕೆಂಬ ತುಡಿತವು ಹೆಚ್ಚಾಗಿರುತ್ತದೆ. ಈ ಸೆಳೆತಕ್ಕೆ ಸಿಕ್ಕಿದರೆ ಅದರಿಂದ ಹೊರಬರುವುದು ತುಂಬಾ ಕಷ್ಟ.

ಶಿವಪ್ಪನವರು ಈ ಮುಕ್ತಕದಲ್ಲಿ ಇದು ಬೇಕು ಅದು ಬೇಕು ಎನ್ನುವ ದೊಡ್ಡ ದೊಡ್ಡ ಆಸೆಗಳನ್ನು ಬಿಟ್ಟು ಬಯಕೆಗಳನ್ನು ಮಿತಗೊಳಿಸು, ಪರರ ಹಿತಕ್ಕಾಗಿ ಬದುಕು, ಸೇವೆ ಎಂಬ ಹಣತೆಯನ್ನು ಹಚ್ಚು ಎಂದು ತಿಳಿಸಿದ್ದಾರೆ. ಹೇಗೆ ಹಣತೆ ಚಿಕ್ಕದಾದರೂ ತನ್ನ ಕೈಲಾದಷ್ಟು ಬೆಳಕು ನೀಡಿ ಕತ್ತಲನ್ನು ಹೋಗಲಾಡಿಸುತ್ತದೆಯೋ ಆ ಮೂಲಕ ತನ್ನ ಜೀವನವನ್ನು ಸಾರ್ಥಕ ಪಡಿಸಿಕೊಳ್ಳುತ್ತದೆಯೋ ಹಾಗೆಯೇ ಮನುಷ್ಯನಾದವನು ಕೂಡ ತನ್ನ ಕೈಲಾದಷ್ಟು ಮಟ್ಟಿಗೆ ಪರರ ಸೇವೆಯನ್ನು ಮಾಡಬೇಕು ಎಂಬುದನ್ನು ಈ ಮುಕ್ತಕದ ಮೂಲಕ ತಿಳಿಸಿದ್ದಾರೆ.

ಮುದ್ದುರಾಮನ ಹೆಸರಿನಲ್ಲಿ ನಾಲ್ಕು ಭಾಗಗಳಲ್ಲಿ ಸುಮಾರು ನಾಲ್ಕು ಸಾವಿರ ಮುಕ್ತಕಗಳು ಪ್ರಕಟವಾಗಿದೆ. ಉಳಿದ ಭಾಗಗಳು ಪ್ರಕಟಗೊಳ್ಳುವ ಹಂತದಲ್ಲಿವೆ. ಪ್ರಕಟಗೊಂಡಿರುವ ಪುಸ್ತಕಗಳನ್ನು ಓದಿ ಅದರ ಆಳ–ಅಂತಸತ್ವಗಳನ್ನು ಅರ್ಥೈಸಿಕೊಂಡಿದ್ದೆ ಆದಲ್ಲಿ ನಿಜಕ್ಕೂ ಮುದ್ದುರಾಮ ಮತ್ತೆ ಮತ್ತೆ ಓದಲು ಪ್ರೇರೇಪಿಸಬಲ್ಲ ಕಾಡುವಂತನಾಗಬಲ್ಲನು. ಒಂದಂತು ಸತ್ಯ ನಾಲ್ಕು ಸಾಲಿನ ಚೌಪದಿಯ ಪದ್ಯಗಳು ಮೂರ್ತಿ ಚಿಕ್ಕದಾದರೂ ಕೀರ್ತಿ ಅಪಾರವಾದುದು, ಕರಿಯನ್ನು ಕನ್ನಡಿಯಲ್ಲಿ ಸೆರೆ ಹಿಡಿದಂತೆ, ಗಾತ್ರದಲ್ಲಿ ವಾಮನನಂತಿದ್ದರೂ ಅರ್ಥದಲ್ಲಿ ತ್ರಿವಿಕ್ರಮನ ಅವತಾರ ತಾಳಿ ಜೀವಂತಿಕೆಯ ಬೆಳಕನ್ನು ಕತ್ತಲ ಬಾಳಿಗೆ ನೀಡುತ್ತಿವೆ. ಅಂತೆಯೇ ಇವು ಜೀವನದ ಸಾರಸಂಗ್ರಹದಂತೆ, ಜೀವನದ ರಸಪಾಕದಂತೆ ಮೆಲ್ಲುತ್ತಿದ್ದರೆ ಕರಗದ ಪೆಪ್ಪರ್‌ಮೆಂಟಿನಂತೆ ಇನಿಸಿನಿಸು ತಿನಿಸು ನಾಲಿಗೆಗೆ ಸಿಕ್ಕಿದರೆ, ಮಸ್ತಕ ದಕ್ಕಿದರೆ, ಹೃದಯಕ್ಕೆ ನಾಟಿದರೆ ಆತ್ಮ ಪರಿಶುದ್ಧ, ಮನ ಪರಿಶುದ್ಧ, ತನು ಪರಿಶುದ್ಧವಾಗಿ ಬದುಕಿನ ನಿಜದ ಸಾರ್ಥಕತೆಗೆ ನೆರಳಾಗುವವು, ನೆರವಾಗುವವು ಎನ್ನುವ ಮಾತಿನಲ್ಲಿ ಉತ್ಪ್ರೇಕ್ಷೆ ಇರಲಾರದು.

ವಿವಿಧ ಬೇಡಿಕೆ ಈಡೇರಿಕೆಗಾಗಿ ಕೆಎಸ್‌ಆರ್‌ಟಿಸಿ ನೌಕರರ ಸತ್ಯಾಗ್ರಹ



ಕೆಎಸ್‌ಆರ್‌ಟಿಸಿ ಸಾರಿಗೆ ನೌಕರರು ಮೈಸೂರಿನ ವಿಭಾಗೀಯ ಕಚೇರಿ ಮುಂಭಾಗ ಜಂಟಿ ಕ್ರಿಯಾ ಸಮಿತಿ ವತಿಯಿಂದ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಫೆ.22(ಜಿಎ)–ರಾಜ್ಯ ಸರ್ಕಾರ, ಬಾಕಿ ಉಳಿಸಿಕೊಂಡಿರುವ 'ಶಕ್ತಿ ಯೋಜನೆ'ಯ ಸಂಪೂರ್ಣ ಅನುದಾನವನ್ನು ರಾಜ್ಯದ ನಾಲ್ಕು ಸಾರಿಗೆ ನಿಗಮಗಳಿಗೆ ಪಾವತಿಸಬೇಕು ಹಾಗೂ ನೌಕರರ ಇತರೆ ನಾಲ್ಕು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರಾಜ್ಯಾದ್ಯಂತ ಕೆಎಸ್‌ಆರ್‌ಟಿಸಿ ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿ ಹಮ್ಮಿಕೊಂಡಿದ್ದು, ಇದಕ್ಕೆ ಬೆಂಬಲವಾಗಿ ಮೈಸೂರಿನ ಬನ್ನಿಮಂಟಪದ ಕೆಎಸ್‌ಆರ್‌ಟಿಸಿ ವಿಭಾಗೀಯ ಕಚೇರಿ ಮುಂಭಾಗ ಜಂಟಿ ಕ್ರಿಯಾ ಸಮಿತಿ ಮೈಸೂರು ಘಟಕದ ಪದಾಧಿಕಾರಿಗಳು ಗುರುವಾರ ಉಪವಾಸ ಸತ್ಯಾಗ್ರಹ ನಡೆಸಿದರು.

2024ರ ಜನವರಿ 1ರಿಂದ ಕೆಎಸ್‌ಆರ್‌ಟಿಸಿ ನೌಕರರ ವೇತನ ಪರಿಷ್ಕರಣೆ ಮತ್ತಿತರ ಬೇಡಿಕೆಗಳನ್ನು ಜಂಟಿ ಕ್ರಿಯಾ ಸಮಿತಿ ಸದಸ್ಯರೊಂದಿಗೆ ರಾಜ್ಯ ಸರ್ಕಾರದ ಪ್ರತಿನಿಧಿಗಳು ಚರ್ಚಿಸಿ ನೌಕರರ ಬೇಡಿಕೆ ಈಡೇರಿಸಬೇಕು. 2020ರ ಜ.1 ರಿಂದ 2023ರ ಫೆ.28ರ ಅವಧಿಯಲ್ಲಿ ನಿವೃತ್ತರಾದ ಕೆಎಸ್‌ಆರ್‌ಟಿಸಿ ನೌಕರರಿಗೆ ಹಿಂದಿನ ವೇತನ ಪರಿಷ್ಕರಣೆ ಅಳವಡಿಸಿ ಕೂಡಲೇ ನಿವೃತ್ತಿ ಸೌಲಭ್ಯದ ಬಾಕಿ ಹಣ ಬಿಡುಗಡೆಗೊಳಿಸಬೇಕು. 2020ರ ಜನವರಿ1ರಿಂದ 38 ತಿಂಗಳ ಬಾಕಿ ಪರಿಷ್ಕರಣೆ ವೇತನ ಕೂಡಲೇ ಸಾರಿಗೆ ನಿಗಮಗಳಿಗೆ ಪಾವತಿಸುವಂತೆ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ವಿಭಾಗೀಯ ಮಟ್ಟದ ಕಾರ್ಯದರ್ಶಿ ಮಲ್ಲಯ್ಯ, ಕೆಎಸ್‌ಆರ್‌ಟಿಸಿ ಫೆಡರೇಷನ್‌ನ ರಾಷ್ಟ್ರೀಯ ಕಾರ್ಯಾಧ್ಯಕ್ಷ ಎಂ.ವಿಜಯಕುಮಾರ್, ರಾಜ್ಯ ಸಂಘಟನ ಕಾರ್ಯದರ್ಶಿ ಎಂ.ವಿ.ಶಿವಕುಮಾರ್, ಮೈಸೂರು ಗ್ರಾಮಾಂತರ ವಿಭಾಗದ ಪ್ರಧಾನ ಕಾರ್ಯದರ್ಶಿ ಎಸ್.ಟಿ. ಬಂಡಿ, ಮೈಸೂರು ಸಮಿತಿ ಅಧ್ಯಕ್ಷ ರೇವಣ್ಣ, ಪ್ರಧಾನ ಕಾರ್ಯದರ್ಶಿ ಮಧುಸೂದನ್ ಸೇರಿದಂತೆ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಕಣಿಯನಹುಂಡಿ ರೈತರ ಒಕ್ಕಲೆಬ್ಬಿಸುವ ಕೆಲಸ ಬಿಟ್ಟು ಉಳುವವನಿಗೆ ಹಕ್ಕುಪತ್ರ ನೀಡಿ

ಕರ್ನಾಟಕ ಪ್ರಜಾ ಪಾರ್ಟಿ ರೈತ ಪರ್ವ ಆಗ್ರಹ

ಮೈಸೂರು, ಫೆ.22(ಜಿಎ)– ಎಚ್.ಡಿ. ಕೋಟೆ ತಾಲೂಕಿನ ಹಂಪಾಪುರ ಹೋಬಳಿಯ ಕಣಿಯನಹುಂಡಿ ಗ್ರಾಮದ 1,149 ಎಕರೆ ಪ್ರದೇಶವನ್ನು ಮೀಸಲು ಅರಣ್ಯ ಪ್ರದೇಶವೆಂದು ಘೋಷಿಸಿ ರೈತರನ್ನು ಒಕ್ಕಲೆಬ್ಬಿಸುವ ಕೆಲಸ ಮಾಡುತ್ತಿದ್ದು, ಸರ್ಕಾರ ಇದನ್ನು ಕೈಬಿಟ್ಟು ಕೂಡಲೇ ವ್ಯವಸಾಯ ಮಾಡುತ್ತಿರುವ ರೈತರಿಗೆ ಹಕ್ಕು ಪತ್ರ ನೀಡಬೇಕು ಎಂದು ಕರ್ನಾಟಕ ಪ್ರಜಾ ಪಾರ್ಟಿ ರೈತಪರ್ವ ಅಧ್ಯಕ್ಷ ಡಾ.ಬಿ.ಶಿವಣ್ಣ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೂರಾರು ರೈತರು ಈ ಜಮೀನುಗಳಲ್ಲಿ ಸುಮಾರು 60 ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದಾರೆ. ಈಗಾಗಲೇ ಫಾರ್ಮ್ 50, 53, 57ರಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಕೆಲವರಿಗೆ ಭೂಮಿ ಮಂಜೂರಾಗಿದೆ. ಈ ಹೊತ್ತಿನಲ್ಲಿ ಮೀಸಲು ಅರಣ್ಯದ ನೆಪವೊಡ್ಡಿ ರೈತರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿರುವುದು ಸರಿಯಲ್ಲ. ಹಾಗಾದರೆ ಅವರಿಂದ ಅರ್ಜಿ ತೆಗೆದುಕೊಂಡಿದ್ದಾದರೂ ಏಕೆ ಎಂದು ಪ್ರಶ್ನಿಸಿದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ಪದಾಧಿಕಾರಿಗಳಾದ ನಾಗಸುಂದರ್, ಮೋಹನ್‌ದಾಸ್, ಪಿ.ಕುಮಾರಸ್ವಾಮಿ, ಶಿವು ಸಿಂಹಗೌಡ ಹಾಗೂ ಮಂಜುನಾಥ್ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಡಾ.ಬಿ.ಶಿವಣ್ಣ ಮಾತನಾಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಅಯೋಧ್ಯೆಯಿಂದ ಹಿಂತಿರುಗುತ್ತಿದ್ದ ರೈಲಿಗೆ ಬೆಂಕಿ ಹಚ್ಚುವ ಬೆದರಿಕೆ: ಮೂವರ ಬಂಧನ

ವಿಜಯಪುರ, ಫೆ22–ಅಯೋಧ್ಯೆಯಿಂದ ಹಿಂತಿರುಗುತ್ತಿದ್ದ ರೈಲಿಗೆ ಬೆಂಕಿ ಹಚ್ಚುವುದಾಗಿ ರೈಲು ಪ್ರಯಾಣಿಕರಿಗೆ ಧಮ್ಕಿ ಹಾಕಿದ ಮೂವರು ಯುವಕರನ್ನು ಪೊಲೀಸರು ಬಂಧಿಸಿದ್ದಾರೆ.

ವಿಜಯಪುರದ ಹೊಸಕೋಟೆ ರೈಲ್ವೆ ನಿಲ್ದಾಣದಲ್ಲಿ ಈ ಘಟನೆ ಸಂಭವಿಸಿದ್ದು, ಪೊಲೀಸರು ರೈಲು ಪ್ರಯಾಣಿಕರ ಪ್ರತಿಭಟನೆಗೆ ಮಣಿದು, ಈ ಮೂವರನ್ನು ಬಂಧಿಸಿದ್ದಾರೆ.

ಅಯೋಧ್ಯೆಯಿಂದ ಹಿಂತಿರುಗುತ್ತಿದ್ದ ರೈಲು ಹೊಸಕೋಟೆ ರೈಲ್ವೆ ನಿಲ್ದಾಣಕ್ಕೆ ಬಂದಾಗ ರೈಲು ಬೋಗಿ ಸಂಖ್ಯೆ 2 ಅನ್ನು ಮೂವರು ಅಪರಿಚಿತರು ಹತ್ತಲು ಪ್ರಯತ್ನಿಸುತ್ತಾರೆ. ಆಗ ಪ್ರಯಾಣಿಕರು ಇದು ಅಯೋಧ್ಯೆ ಪ್ರಯಾಣಿಕರಿಗೆ ಮೀಸಲಾದ ಬೋಗಿ. ಬೇರೆಯವರಿಗೆ ಅವಕಾಶವಿಲ್ಲ ಎಂದಾಗ ಅಪರಿಚಿತ ಯುವಕರು ಮತ್ತು ರೈಲು ಪ್ರಯಾಣಿಕರ ನಡುವೆ ಮಾತಿನ ಚಕಮಕಿ ನಡೆಯಿತು. ಆಗ ಅಪರಿಚಿತರು ಬೋಗಿಗೆ ಬೆಂಕಿ ಹಚ್ಚುವುದಾಗಿ ಬೆದರಿಕೆ ಹಾಕಿದ್ದಾರೆ.

ಇದರಿಂದ ಕೆರಳಿದ ಪ್ರಯಾಣಿಕರು ರೈಲ್ವೆ ಪೊಲೀಸರ ಗಮನಕ್ಕೆ ಈ ವಿಷಯವನ್ನು ತರುತ್ತಾರೆ. ಸ್ಥಳಕ್ಕೆ ಬಂದ ರೈಲ್ವೆ ಪೊಲೀಸರು, ಆ ಮೂವರು ಯುವಕರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸದೆ ಹಾಗೇ ಬಿಟ್ಟು ಕಳುಹಿಸಿದರು. ಈ ವಿಷಯ ತಿಳಿದು ರೈಲು ಪ್ರಯಾಣಿಕರು ರೈಲ್ವೆ ನಿಲ್ದಾಣದಲ್ಲೇ ಪ್ರತಿಭಟನೆ ನಡೆಸಿದ್ದಾರೆ. ಅಷ್ಟರಲ್ಲಿ ವಿಷಯ ತಿಳಿದ ಹೊಸಕೋಟೆಯ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರು ರೈಲ್ವೆ ನಿಲ್ದಾಣಕ್ಕೆ ಆಗಮಿಸಿ ಪ್ರತಿಭಟನೆಗೆ ಸಾಥ್ ನೀಡಿದ್ದಾರೆ.

ಇತ್ತ ರೈಲು ಪ್ರಯಾಣ ಆರಂಭಿಸಿದಾಗ ಒಳಗಿದ್ದ ಪ್ರಯಾಣಿಕರು ಚೈನ್ ಎಳೆದು ರೈಲು ನಿಲ್ಲಿಸಿದ್ದಾರೆ. ಆರೋಪಿಗಳನ್ನು ಬಂಧಿಸಿ ತಮಗೆ ನ್ಯಾಯ ಒದಗಿಸುವವರೆಗೂ ಪ್ರತಿಭಟನೆ ಕೈಬಿಡುವುದಿಲ್ಲ ಎಂದು ರೈಲು ಪ್ರಯಾಣಿಕರು ಪಟ್ಟು ಹಿಡಿದಿದ್ದಾರೆ. ಅಷ್ಟರಲ್ಲಿ ವಿಷಯ ತಿಳಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಮತ್ತು ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಮೂವರು ಅಪರಿಚಿತರನ್ನು ಬಂಧಿಸಿ ಅವರ ಮೇಲೆ ಪ್ರಕರಣ ದಾಖಲಿಸಿದ್ದಾರೆ.

ಮಹಿಳೆ ನಾಪತ್ತೆ



ಮೈಸೂರು, ಫೆ.22(ಎಂಕೆ)– ಮನೋವ್ಯಾದಿ ಖಾಯಿಲೆಯಿಂದ ಬಳಲುತ್ತಿದ್ದ, ಮೂಲತಃ ಆಂಧ್ರಪ್ರದೇಶದ ಮಹಿಳೆ, ಮೈಸೂರಿನ ಬೋಗಾದಿಯಲ್ಲಿ ನೆಲೆಸಿದ್ದ ಮಂಥೆನಾ ಅನುರಾಧ(45) ನಾಪತ್ತೆಯಾಗಿದ್ದಾರೆ. ಬುಧವಾರ ರಾತ್ರಿ ಮನೆಯಲ್ಲಿ ಮಲಗಿದ್ದ ಅವರು ಫೆ.22ರ ಬೆಳಗ್ಗೆ ನೋಡಿದಾಗ ನಾಪತ್ತೆಯಾಗಿದ್ದಾರೆ ಎಂದು ಅವರ ಪತಿ ಎಂ.ಶಿವರಾಮಕೃಷ್ಣರಾಜು ಸರಸ್ವತಿಪುರಂ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ಮೊ.ನಂ.9480802246, ದೂ.ಸಂ.0821–2418123ಗೆ ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ದೆಹಲಿ ಚಲೋ ರೈತರ ಮೇಲೆ ಅಶ್ರುವಾಯು ಪ್ರಯೋಗ: ಮೈಸೂರಲ್ಲಿ ರೈತರ ಪ್ರತಿಭಟನೆ



ಮೈಸೂರಿನ ಗನ್‌ಹೌಸ್ ವೃತ್ತದ ಬಳಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದಿಂದ ದೆಹಲಿ ಚಲೋ ವೇಳೆ ಪ್ರತಿಭಟನಾನಿರತ ರೈತರ ಮೇಲೆ ಅಶ್ರುವಾಯು ಸಿಡಿಸಿದ್ದನ್ನು ಖಂಡಿಸಿ ಗುರುವಾರ ಅಣಕು ಶವಯಾತ್ರೆ ಮಾಡಿದರು.

ಮೈಸೂರು,ಫೆ.22(ಜಿಎ)–ದೆಹಲಿ ಚಲೋ ವೇಳೆ ಪ್ರತಿಭಟನಾನಿರತ ರೈತರ ಮೇಲೆ ಅಶ್ರುವಾಯು ಸಿಡಿಸಿ ಓರ್ವ ರೈತನ ಸಾವಿಗೆ ಕಾರಣರಾದ ಪೊಲೀಸರು ಮತ್ತು ಕೇಂದ್ರ ಸರ್ಕಾರದ ವಿರುದ್ಧ ರಾಜ್ಯ ರೈತ ಸಂಘಟನೆಗಳ ಒಕ್ಕೂಟದಿಂದ ಮೈಸೂರಿನ ಗನ್‌ಹೌಸ್ ವೃತ್ತದಿಂದ ಸಂಸ್ಕೃತ ಪಾಠಶಾಲೆ ವೃತ್ತದವರೆಗೂ ಅಣಕು ಶವಯಾತ್ರೆ ನಡೆಸಲಾಯಿತು.

ಈ ವೇಳೆ ಶವದ ಪ್ರತಿಕೃತಿಯನ್ನು ಕಸಿದುಕೊಳ್ಳಲು ಪೊಲೀಸರು ಮುಂದಾದಾಗ ರೈತರು, ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ಆದರೂ ಪೊಲೀಸರು ಶವದ ಪ್ರತಿಕೃತಿಯನ್ನು ತಮ್ಮ ವಶಕ್ಕೆ ಪಡೆದುಕೊಂಡರು. ಈ ವೇಳೆ ಮಾತನಾಡಿದ ರೈತ ಮುಖಂಡ ಕುರುಬೂರು ಶಾಂತಕುಮಾರ್, ದೆಹಲಿಯಲ್ಲಿ ರೈತರು ಭಿಕ್ಷೆ ಬೇಡುತ್ತಿಲ್ಲ. ಸರ್ಕಾರವೇ ನಿಗದಿ ಮಾಡುವ ಬೆಂಬಲ ಬೆಲೆ ಖಾತರಿ ಕಾನೂನು ಕೇಳುತ್ತಿದ್ದೇವೆ. ದೇಶದ ರೈತರನ್ನು ಕತ್ತಲಲ್ಲಿಟ್ಟಿದ್ದಾರೆ. ಸರ್ಕಾರವೇ ನಿಗದಿ ಮಾಡುವ ಬೆಲೆಗೆ ಶಾಸನಬದ್ಧ ಖಾತರಿ ನೀಡಬೇಕು ಎಂದು ಹೋರಾಟ ಮಾಡಿದರೆ ರೈತರ ಮೇಲೆ ಅಶ್ರುವಾಯು ಸಿಡಿಸಿ ರೈತರನ್ನು ಕೊಲೆ ಮಾಡುತ್ತಿದ್ದಾರೆ. ರೈತ ಹೋರಾಟಗಾರರನ್ನು ಭಯೋತ್ಪಾದಕರು, ದೇಶದ್ರೋಹಿಗಳು, ಖಲಿಸ್ತಾನಿಗಳು ಎಂದು ಹೇಳಿ ಅವರ ಮೇಲೆ ದೌರ್ಜನ್ಯ ನಡೆಸಲಾಗುತ್ತಿದೆ ಎಂದು ಕಿಡಿಕಾರಿದರು.

ರೈತರ ಸಾಲ ಸಂಪೂರ್ಣ ಮನ್ನಾ, ಸ್ವಾಮಿನಾಥನ್ ವರದಿ ಜಾರಿ, ಬೆಂಬಲ ಬೆಲೆ, ಡಬ್ಲ್ಯೂಟಿಓ ಒಪ್ಪಂದದಿಂದ ಭಾರತ ಸರ್ಕಾರ ಹೊರಗೆ ಬರಬೇಕು, ರೈತರಿಗೆ ಪಿಂಚಣಿ ನೀಡುವ ಯೋಜನೆ, ಫಸಲ್ ಭೀಮಾ ಬೆಳೆ ವಿಮೆ ಪದ್ಧತಿ ಬದಲಾಗಬೇಕು, ಕಳೆದ ವರ್ಷ ದೆಹಲಿ ರೈತ ಹೋರಾಟದಲ್ಲಿ ಪ್ರಾಣತ್ಯಾಗ ಮಾಡಿದ 750 ರೈತ ಕುಟುಂಬಕ್ಕೆ ನೆರವು ನೀಡಬೇಕು. ಕುಟುಂಬದ ಒಬ್ಬರಿಗೆ ನೌಕರಿ ನೀಡಬೇಕು ಎಂಬ ಬೇಡಿಕೆ ಮುಂದಿಡಲಾಗಿದೆ. ಆದರೆ, ಕೇಂದ್ರ ಸರ್ಕಾರ ರೈತ ಚಳವಳಿಯ ದಿಕ್ಕು ತಪ್ಪಿಸಲು ವಾಮಮಾರ್ಗ ಬಳಸುತ್ತಿದೆ ಎಂದು ಆಕ್ರೋಶ ಹೊರಹಾಕಿದರು. ಕೇಂದ್ರ ಸರ್ಕಾರ ರೈತರೊಂದಿಗೆ 4ನೇ ಸುತ್ತಿನ ಮಾತುಕತೆ ನಡೆಸಿದೆ. ಮಾತುಕತೆ ನೆಪದಲ್ಲಿ ವಿಳಂಬ ಧೋರಣೆ ಅನುಸರಿಸುವುದನ್ನು ಬಿಟ್ಟು ಸಮಸ್ಯೆ ಬಗೆಹರಿಸಲಿ. ಪಂಜಾಬ್, ಹರಿಯಾಣ, ಉತ್ತರಪ್ರದೇಶ,

> ದೆಹಲಿ ಹೋರಾಟ ಬೆಂಬಲಿಸಿ ಫೆಬ್ರವರಿ 23ರಂದು ರಾಜ್ಯಾದ್ಯಂತ, ಜಿಲ್ಲಾಧಿಕಾರಿ ಕಚೇರಿ ಮುಂದೆ ವಿನೂತನ ಪ್ರತಿಭಟನೆ ಮಾಡಲಾಗುವುದು. ಲೋಕಸಭಾ ಸದಸ್ಯರ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿ ಕೇಂದ್ರ ಸರಕಾರಕ್ಕೆ ಬಿಸಿ ಮುಟ್ಟಿಸಲಾಗುವುದು ಮಾ.1ರಂದು ರಾಜ್ಯಾದ್ಯಂತ ರೈಲು ತಡೆ ಚಳುವಳಿ ನಡೆಸಲಾಗುವುದು.
>
> –ಕುರುಬೂರು ಶಾಂತಕುಮಾರ್, ರಾಜ್ಯ ಕಬ್ಬು ಬೆಳೆಗಾರರ ಸಂಘ

ರಾಜಸ್ಥಾನದ ಲಕ್ಷಾಂತರ ರೈತರು ಶಾಂತಿಯುತವಾಗಿ ದೆಹಲಿ ಚಲೋ ನಡೆಸುತ್ತಿದ್ದಾರೆ. ಸಮಸ್ಯೆ ಬಗೆಹರಿಯುವವರೆಗೂ ಚಳವಳಿಯಿಂದ ಹಿಂದೆ ಸರಿಯುವುದಿಲ್ಲ ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಹತ್ತಳ್ಳಿ ದೇವರಾಜ್, ಪಿ.ಸೋಮಶೇಖರ್, ಬರಡನಪುರ ನಾಗರಾಜ್, ಕಿರಗಸೂರು ಶಂಕರ, ವೆಂಕಟೇಶ್, ನೀಲಕಂಠಪ್ಪ ಕುರುಬೂರು ಸಿದ್ದೇಶ್, ದೇವನೂರು ವಿಜೇಂದ್ರ, ನಂಜದೇವನಪುರ ಸತೀಶ್, ಹೆಗ್ಗೂರು ರಂಗರಾಜ್, ಕುರುಬೂರು ಪ್ರದೀಪ್, ಉಡಿಗಾಲ ಸುಂದರಪ್ಪ ಕಾಟೂರು ಮಾದೇವಸ್ವಾಮಿ, ನಾಗೇಶ್, ಶ್ರೀಕಂಠ, ಪ್ರಸಾದ್ ನಾಯಕ್ ನಿಂಗರಾಜು, ಮಂಜುನಾಥ್, ಅಪ್ಪಣ್ಣ, ಕೋಟೆ ಸುನೀಲ್, ಬನ್ನೂರು ಸೂರಿ ಪಾಲ್ಗೊಂಡಿದ್ದರು.

ಸಣ್ಣಪುಟ್ಟ ಕಾಫಿ ಬೆಳೆಗಾರರು ಒತ್ತುವರಿ ಮಾಡಿಕೊಂಡಿರುವ 2–3 ಎಕರೆ ಅವರ ಹೆಸರಿಗೆ ಮಂಜೂರು ಮಾಡಿ

- ಸರ್ಕಾರಕ್ಕೆ ವಿರಾಜಪೇಟೆ ಶಾಸಕ ಪೊನ್ನಣ್ಣ ಆಗ್ರಹ
- ಹೆಚ್ಚಿನ ಒತ್ತುವರಿ ಗುತ್ತಿಗೆ ನೀಡಲು ಒತ್ತಾಯ
- ದೀರ್ಘ ಕಾಲಕ್ಕೆ ಗುತ್ತಿಗೆ ನೀಡಲು ಮಡಿಕೇರಿ ಶಾಸಕ ಮಂತರ್‌ಗೌಡ ಮನವಿ
- ಒತ್ತುವರಿದಾರರ ತೆರವು ಸಾಧ್ಯವಿಲ್ಲ; ಗುತ್ತಿಗೆ ನೀಡಿ: ಅರಕಲಗೂಡು ಶಾಸಕ ಎ.ಮಂಜು ಆಗ್ರಹ



ಪೊನ್ನಣ್ಣ



ಮಂತರ್‌ಗೌಡ



ಎ.ಮಂಜು

ಬೆಂಗಳೂರು, ಫೆ.22–ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಬೆಳೆ ಬೆಳೆಯುತ್ತಿರುವ ಸಣ್ಣಪುಟ್ಟ ಕಾಫಿ ಬೆಳೆಗಾರರಿಗೆ ಅವರು ಒತ್ತುವರಿ ಮಾಡಿಕೊಂಡಿರುವ ಭೂಮಿಯನ್ನು ಶಾಶ್ವತವಾಗಿ ಅವರ ಹೆಸರಿಗೆ ಮಂಜೂರು ಮಾಡಬೇಕೆಂದು ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಸರ್ಕಾರವನ್ನು ಒತ್ತಾಯಿಸಿದರು.

ವಿಧಾನಸಭೆಯಲ್ಲಿ ಈ ಸಂಬಂಧ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕೊಡಗಿನಲ್ಲಿ 2 ಇಲ್ಲವೇ 3 ಎಕರೆ ಒತ್ತುವರಿ ಮಾಡಿಕೊಂಡು ಬೆಳೆ ಬೆಳೆಯುತ್ತಿರುವ ಸಣ್ಣ ರೈತರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕೆಲವೆಡೆ ಸುತ್ತಲೂ ಖಾಸಗಿ ತೋಟವಿದ್ದು, ಅದರ ಮಧ್ಯೆ ಇರುವ ಸರ್ಕಾರಿ ಭೂಮಿ ಒತ್ತುವರಿಯಾಗಿದೆ. ಕಾನೂನಿನಂತೆ 25 ಎಕರೆವರೆಗೆ ಗುತ್ತಿಗೆ ನೀಡಬಹುದು. ಹಾಗೆ ದೊಡ್ಡ ಪ್ರಮಾಣದಲ್ಲಿ ಒತ್ತುವರಿ ಮಾಡಿಕೊಂಡಿರುವ ಬೆಳೆಗಾರರಿಗೆ ಬೇಕಾದರೆ ಸದರಿ ಭೂಮಿಯನ್ನು ಗುತ್ತಿಗೆಗೆ ನೀಡಿ. 2–3 ಎಕರೆಯಷ್ಟು ಒತ್ತುವರಿ ಮಾಡಿಕೊಂಡಿರುವ ಸಣ್ಣ ಬೆಳೆಗಾರರಿಗೆ ಸದರಿ ಜಮೀನನ್ನು ಸರ್ಕಾರದಿಂದ ಮಂಜೂರು ಮಾಡಿಕೊಡುವ ಮೂಲಕ ಅವರಿಗೆ ಶಾಶ್ವತ ಪರಿಹಾರ ಒದಗಿಸಿ ಎಂದು ಒತ್ತಾಯಿಸಿದರು.

ಇದಕ್ಕೂ ಮುನ್ನ ಸಕಲೇಶಪುರ ಶಾಸಕ ಸಿಮೆಂಟ್ ಮಂಜು, ಒತ್ತುವರಿ ಮಾಡಿಕೊಂಡಿರುವ ಕಾಫಿ ಬೆಳೆಗಾರರಿಗೆ ಆ ಭೂಮಿಯನ್ನು 30 ವರ್ಷ ಕಾಲ ಗುತ್ತಿಗೆ ನೀಡುವ ಬಗ್ಗೆ ಹಿಂದಿನ ಸರ್ಕಾರದಲ್ಲಿ ಕಂದಾಯ ಸಚಿವರಾಗಿದ್ದ ಆರ್.ಅಶೋಕ್ ನಿರ್ಧಾರ ಕೈಗೊಂಡಿದ್ದರು. ಅದು ಅನುಷ್ಠಾನಕ್ಕೆ ಬರುವುದರೊಳಗಾಗಿ ಸರ್ಕಾರ ಬದಲಾಯಿತು. ಹೀಗಾಗಿ ಒತ್ತುವರಿದಾರರಿಗೆ ಭೂಮಿಯನ್ನು 30 ವರ್ಷ ಗುತ್ತಿಗೆ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದರು.

ನಂತರ ಮಾತನಾಡಿದ ಮಡಿಕೇರಿ ಶಾಸಕ ಡಾ. ಮಂತರ್‌ಗೌಡ, 30 ವರ್ಷ ಗುತ್ತಿಗೆ ವಿಚಾರ ಅವರ (ಬಿಜೆಪಿ) ಸರ್ಕಾರದಲ್ಲಿ ಯಾಕೆ ಆಗಲಿಲ್ಲ ಎಂಬುದನ್ನು ಕೇಳಬೇಕಾಗುತ್ತದೆ. ಅದೇ ರೀತಿ 53ನೇ ಮತ್ತು 57ನೇ ಅರ್ಜಿ ಬಗ್ಗೆಯೂ ಮಾತನಾಡಬೇಕಾಗುತ್ತದೆ. ಈ ಅರ್ಜಿಗಳು 20–25 ವರ್ಷದಿಂದ ಪೆಂಡಿಂಗ್ ಇದೆ. ಒತ್ತುವರಿದಾರರಿಗೆ 30 ವರ್ಷ ಗುತ್ತಿಗೆ ಕೊಟ್ಟರೆ ಖುಷಿ. ಆದರೆ 53–57 ಅರ್ಜಿ ವಿಲೇವಾರಿ ಆದರೆ ಬೆಳೆಗಾರನಿಗೆ ಭೂಮಿ ಶಾಶ್ವತ ಆಸ್ತಿಯಾಗುತ್ತದೆ. ನಾವು 30 ವರ್ಷಕ್ಕೆ ಗುತ್ತಿಗೆ ನೀಡಿದರೆ ಮುಂದಿನ ದಿನಗಳಲ್ಲಿ ಬೆಳೆಗಾರರು ತೊಂದರೆ ಅನುಭವಿಸಬೇಕಾಗುತ್ತದೆ. ಹೀಗಾಗಿ 99 ವರ್ಷ ಗುತ್ತಿಗೆ ನೀಡುವ ಬಗ್ಗೆ ನಿರ್ಧರಿಸಬೇಕು ಎಂದಾಗ ಮಧ್ಯೆ ಪ್ರವೇಶಿಸಿದ ಸ್ಪೀಕರ್ ಯು.ಟಿ.ಖಾದರ್ ಅವರು, ಬಡವರಿಗೆ 3 ಎಕರೆವರೆಗೆ ಭೂಮಿಯನ್ನು ಮಂಜೂರು ಮಾಡುವ ಬಗ್ಗೆ ಮಾತನಾಡಿ, ಆಗ ಸಮಸ್ಯೆ ಶಾಶ್ವತವಾಗಿ ಪರಿಹಾರವಾಗುತ್ತದೆ ಎಂದು ಸಲಹೆ ನೀಡಿದರು. ಈ ವೇಳೆ ಮಧ್ಯೆ ಪ್ರವೇಶಿಸಿದ ಡಾ. ಮಂತರ್‌ಗೌಡರ ತಂದೆಯೂ ಆದ ಅರಕಲಗೂಡು ಜೆಡಿಎಸ್ ಶಾಸಕ ಎ.ಮಂಜು, ರೇಸ್‌ಕೋರ್ಸ್‌ಗೆ ಗುತ್ತಿಗೆಗೆ ಕೊಡುತ್ತೀರಿ, ಕ್ಲಬ್‌ಗಳಿಗೆ ಗುತ್ತಿಗೆ ಕೊಡುತ್ತೀರಿ. ಹೀಗಿರುವಾಗ ರೈತರಿಗೆ ಭೂಮಿ ಗುತ್ತಿಗೆ ಕೊಡಲು ತಡ ಮಾಡುತ್ತಿರುವುದು ಏಕೆ? 30 ವರ್ಷ ಮೇಲ್ಪಟ್ಟು ಗುತ್ತಿಗೆಗೆ ಕೊಡಲು ಸಾಧ್ಯವಿಲ್ಲ ಎಂದು ಕಾನೂನು ಹೇಳುತ್ತದೆ ಎಂದ ಅವರು, ಒತ್ತುವರಿ ಭೂಮಿಯನ್ನು ಅನುಭವದಾರರಿಂದ ಹಿಂತೆಗೆದುಕೊಳ್ಳಲು ನಿಮ್ಮಿಂದ (ಸರ್ಕಾರ) ಸಾಧ್ಯವೇ? ಎಂದು ಪ್ರಶ್ನಿಸಿದರಲ್ಲದೆ, ಅದು ಸಾಧ್ಯವಿಲ್ಲ ಎಂದು ಹೇಳಿ ದಂಡವಿಟ್ಟು ಒತ್ತುವರಿದಾರರಿಗೆ ಭೂಮಿಯನ್ನು ಗುತ್ತಿಗೆಗೆ ಕೊಡಿ. ಇದರಿಂದ ಸರ್ಕಾರಕ್ಕೂ ದುಡ್ಡು ಬರುತ್ತದೆ. ಅವರಿಗೂ ನೆಮ್ಮದಿ ಸಿಗುತ್ತದೆ. ಅವರು ಕಾಡನ್ನು ರಕ್ಷಿಸಿ ಸರ್ಕಾರಕ್ಕೆ ಉಳಿಸುತ್ತಾರೆ ಎಂದರು.

ನಂತರ ಮಾತನಾಡಿದ ಎ.ಎಸ್.ಪೊನ್ನಣ್ಣ, ಸಣ್ಣ ಬೆಳೆಗಾರರಿಗೆ ಒತ್ತುವರಿ ಭೂಮಿಯನ್ನು ಮಂಜೂರು ಮಾಡುವಂತೆಯೂ, ದೊಡ್ಡ ಬೆಳೆಗಾರರಿಗೆ ಗುತ್ತಿಗೆಗೆ ನೀಡುವಂತೆಯೂ ಒತ್ತಾಯಿಸಿದರು.

ಕೇರಳದಲ್ಲಿ 114 ವರ್ಷದ ತೇಗದ ಮರ 39.29 ಲಕ್ಷಕ್ಕೆ ಹರಾಜು

ಮಲಪುರಂ (ಕೇರಳ), ಫೆ.22–ಕೇರಳದಲ್ಲಿ 114 ವರ್ಷದ ತೇಗದ ಮರವೊಂದು ಬರೋಬ್ಬರಿ 39.29 ಲಕ್ಷ ರೂ.ಗಳಿಗೆ ಹರಾಜಾಗಿದೆ. ಈ ಮರವನ್ನು ತಿರುವನಂತಪುರಂ ಮೂಲದ ಅಜೀಶ್ ಎಂಬುವರು ಖರೀದಿಸಿದ್ದು, ಅರಣ್ಯ ಇಲಾಖೆ ಇತಿಹಾಸದಲ್ಲೇ ಅತ್ಯಧಿಕ ಬೆಲೆಗೆ ಮಾರಾಟವಾದ ಮರ ಎಂಬ ಸಾರ್ವಕಾಲಿಕ ದಾಖಲೆ ಎಂದು ಪರಿಗಣಿಸಲಾಗಿದೆ.

7ನೇ ವೇತನ ಆಯೋಗದ ಎಫೆಕ್ಟ್
ರಾಜ್ಯ ಸರ್ಕಾರಿ ನೌಕರರ ಸಂಬಳದ ವೆಚ್ಚ 24% ಏರಿಕೆ!

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ವೇತನಕ್ಕೆ ರಾಜ್ಯ ಸರ್ಕಾರ ವೆಚ್ಚ ಮಾಡುವ ಹಣದ ಪ್ರಮಾಣದಲ್ಲಿ ಬರೋಬ್ಬರಿ ಶೇ.24ರಷ್ಟು ಏರಿಕೆ ಆಗಲಿದೆ. ಒಟ್ಟಾರೆ 15,431 ಕೋಟಿ ರೂ. ಹೆಚ್ಚುವರಿ ಹೊರೆ ಸರ್ಕಾರದ ಮೇಲೆ ಬೀಳಲಿದೆ. ಸಿದ್ದರಾಮಯ್ಯ ಅವರು ಮಂಡಿಸಿದ್ದ ಕರ್ನಾಟಕ ಬಜೆಟ್‌ನಲ್ಲಿ ಸಂಬಳ ವೆಚ್ಚದಲ್ಲಿ ಈ ಏರಿಕೆ ದಾಖಲಾಗಿದೆ. ಮುಂಬರುವ 2024–25ರ ಆರ್ಥಿಕ ವರ್ಷಕ್ಕೆ ಈ ಹೆಚ್ಚುವರಿ ಹಣ ಹೊಂದಿಸಬೇಕಾದ ಅನಿವಾರ್ಯತೆ ಇದೆ.

ಸರ್ಕಾರ ಈಗಾಗಲೇ 7ನೇ ವೇತನ ಆಯೋಗ ರಚನೆ ಮಾಡಿದೆ. ಈ ಆಯೋಗ ತನ್ನ ಶಿಫಾರಸ್ಸನ್ನು ಇನ್ನೂ ನೀಡಿಲ್ಲ. ಆಯೋಗದ ಶಿಫಾರಸ್ಸನ್ನು ಅಂಗೀಕಾರ ಮಾಡಿದರೆ ಬಹುತೇಕ ಸರ್ಕಾರಿ ನೌಕರರ ಸಂಬಳ ಏರಿಕೆ ಮಾಡಬೇಕಾದ ಸಾಧ್ಯತೆಗಳೇ ದಟ್ಟವಾಗಿವೆ.

ಫೆ.12ರಂದು ಸಿಎಂ ಸಿದ್ದರಾಮಯ್ಯ ಹೇಳಿರುವ ಪ್ರಕಾರ 7ನೇ ವೇತನ ಆಯೋಗವು ತನ್ನ ವರದಿ ಸಲ್ಲಿಕೆ ಮಾಡಲು ಮಾ.15 ಕೊನೆಯ ದಿನ. ಸರ್ಕಾರದ ಅಂದಾಜಿನ ಪ್ರಕಾರ ಪರಿಷ್ಕೃತ ಸಂಬಳ ವೆಚ್ಚ 2023–24ರ ಸಾಲಿನಲ್ಲಿ 65,003 ಕೋಟಿ ರೂ.ಗೆ ಏರಿಕೆ ಆಗಿತ್ತು ಆದರೆ 2024–25ರ ಆರ್ಥಿಕ ವರ್ಷದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಬಳಕ್ಕಾಗಿಯೇ ಸರ್ಕಾರ 80,434 ಕೋಟಿ ರೂ. ಹಣವನ್ನು ತೆಗೆದಿಡಬೇಕಿದೆ.2022–23ರಲ್ಲಿ ಸರ್ಕಾರಿ ನೌಕರರ ಸಂಬಳದ ವೆಚ್ಚ 50,061 ಕೋಟಿ ರೂ. ಇತ್ತು. 2023–24ರ ಸಾಲಿಗೆ ಈ ವೆಚ್ಚ ಶೇ.17ರಷ್ಟು ಏರಿಕೆ ಕಂಡಿತ್ತು. ಇದೀಗ 2024–25ರ ಸಾಲಿಗೆ ಸಂಬಳದ ವೆಚ್ಚ ಮತ್ತೆ ಶೇ.24ರಷ್ಟು ಏರಿಕೆ ಕಾಣಲಿದೆ. ಇನ್ನು ಈ ವಿಚಾರವಾಗಿ ರಾಜ್ಯ ಸರ್ಕಾರ ಹಾಗೂ ಸಿಎಂ ವಿರುದ್ಧ ಹರಿಹಾಯ್ದಿರುವ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಈಗಾಗಲೇ 7ನೇ ವೇತನ ಆಯೋಗ ರಚನೆಯಾಗಿದೆ. ಇದರ ಜಾರಿಗೆ 20,000 ಕೋಟಿ ರೂ. ಹೆಚ್ಚುವರಿ ಹಣ ಬೇಕಾಗಲಿದೆ. ಜೊತೆಗೆ ಹಳೆ ಪಿಂಚಣಿ ಯೋಜನೆ ಅನುಷ್ಠಾನಕ್ಕೂ ಹಣದ ಅಗತ್ಯವಿದೆ. ಇಷ್ಟೆಲ್ಲಾ ಅಗತ್ಯತೆಗಳಿದ್ದರೂ ಬಜೆಟ್‌ನಲ್ಲಿ ಇದಕ್ಕೆಲ್ಲಾ ಹಣ ಮೀಸಲಿಟ್ಟಿಲ್ಲ ಎಂದು ಕಿಡಿಕಾರಿದ್ದಾರೆ.

ಇಂದು ಪ್ರೊ. ಶೇಷಗಿರಿರಾವ್ ಜನ್ಮ ಶತಾಬ್ಧಿ



ಮೈಸೂರು, ಫೆ.22 (ಬಿಎಲ್‌ಯು)– ಸಾಹಿತಿ ಪ್ರೊ. ಎಲ್.ಎಸ್.ಶೇಷಗಿರಿರಾವ್ ಅವರ ಜನ್ಮಶತಾಬ್ಧಿ ಕಾರ್ಯಕ್ರಮ ಇಂದು(ಫೆ.23) ಮೈಸೂರಿನಲ್ಲಿ ನಡೆಯಲಿದೆ. ಮೈಸೂರಿನ ನೃಪತುಂಗ ಶಾಲೆಯ ರಮಾಗೋವಿಂದ ರಂಗಮಂದಿರದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯುವ ಕಾರ್ಯಕ್ರಮವನ್ನು ಸಾಹಿತಿ ಡಾ.ಪ್ರಧಾನ್ ಗುರುದತ್ ಉದ್ಘಾಟಿಸಲಿದ್ದಾರೆ. ಬೆಂಗಳೂರು ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ.ಚಂದ್ರಶೇಖರ ಅವರು ಪ್ರೊ.ಶೇಷಗಿರಿರಾವ್ ಅವರ ಕನ್ನಡ ಕಾಯಕ ಕುರಿತು ಮಾತನಾಡಲಿದ್ದಾರೆ. ಜೆಎಸ್‌ಎಸ್ ಸ್ನಾತಕೋತ್ತರ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಡಾ.ಶಿವಕುಮಾರ ಅವರು ಪ್ರೊ.ಶೇಷಗಿರಿ ರಾವ್ ಅವರ ಬದುಕು–ಬರಹ(ಸಣ್ಣ ಕಥೆ) ಕುರಿತು ಮಾತನಾಡಲಿದ್ದಾರೆ.

ಕಾರ್ಯಕ್ರಮದಲ್ಲಿ ಶ್ರೀಮತಿ ಭಾರತಿ ಶೇಷಗಿರಿರಾವ್ ಉಪಸ್ಥಿತರಿರುವರು. ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆ ಅಧ್ಯಕ್ಷ ಡಾ.ಎಸ್.ಯತೀಂದ್ರ ಸಿದ್ದರಾಮಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ವಿ.ಸಹನಾಗೆ ಪಿಹೆಚ್.ಡಿ ಪದವಿ



ಮೈಸೂರು, ಫೆ. 22– ಡಾ.ಯು. ಅಜಿತ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ವಿ. ಸಹನಾ ಅವರು ಶ್ರವಣಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ದಿ. 13/02/20214 ಮಂಗಳವಾರ ನನ್ನ ನನ್ನ ಧರ್ಮಪತ್ನಿಯರಾದ ಶ್ರೀಮತಿ ಶಾಂತಮ್ಮ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಇದೇ 23/02/24ನೇ ಶುಕ್ರವಾರ ಮ. 12 ರಿಂದ 2ರವರೆಗೆ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ಯರಗನಹಳ್ಳಿ ಗ್ರಾಮದ ರುದ್ರಭೂಮಿಯಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ಶ್ರೀಮತಿ ಶಾಂತಮ್ಮ

ಆತ್ಮಕ್ಕೆ ಶಾಂತಿ ಕೋರುವ... ಮೃತರ ಪತಿ: ಮಹದೇವು ಹಾಗೂ ಕುಟುಂಬಸ್ಥರು ಮೈಸೂರು ಯರಗನಹಳ್ಳಿ ಹೊಸ ಬಡಾವಣೆ. ಮೊ: 8095136974

1ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ಶ್ರೀಮತಿ ಕೆ.ರಾಧ (ತಾಯಿ)

ದುಃಖತಪ್ತರು– ಪತಿ: ಕೆ.ಪದ್ಮನಾಭ, ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು

ಪ್ರಮಾಣ ಪತ್ರ

ದಿನಾಂಕ: 24/11/2023ರ ನೋಟರಿ ಆಧಾರದ ಮೇರೆಗೆ ನನ್ನ ಹೆಸರಿನ ಅಕ್ಷರದಲ್ಲಿ (From PRATHAP SIMHA to PRATAP SIMMHA) ಸಣ್ಣ ತಿದ್ದುಪಡಿ ಮಾಡಲಾಗಿತ್ತು. ಆದರೆ ಚುನಾವಣೆ ಸಮೀಪಿಸುತ್ತಿರುವ ಕಾರಣ ನನ್ನ ಎಲ್ಲಾ ದಾಖಲಾತಿಯನ್ನು ತುರ್ತಾಗಿ ತಿದ್ದುಪಡಿ ಮಾಡಿಕೊಳ್ಳಲು ಸಾಧ್ಯವಾಗದ ಕಾರಣ ನನ್ನ ಹೆಸರನ್ನು ಈ ಹಿಂದೆ ಕರೆಯಲ್ಪಡುವ ಹಾಗೆ ಮುಂದುವರಿಸಲಾಗುವುದು ಎಂದು (PRATHAP SIMHA) ನೋಟರಿ ಹಾಗೂ ಪತ್ರಿಕಾ ಪ್ರಕಟಣೆ ಮುಖಾಂತರ ತಿಳಿಸಲಾಗಿರುತ್ತದೆ.

ಶ್ರೀ ಪ್ರತಾಪ್ ಸಿಂಹ,
ಸಂಸದರು, ಮೈಸೂರು–ಕೊಡಗು

3ನೇ ವರ್ಷದ ಸವಿನೆನಪು


ಶ್ರೀಮತಿ ಪದ್ಮ ಶ್ರೀನಿವಾಸ್‌ರವರು (ನ್ಯಾಯಬೆಲೆ ಅಂಗಡಿ ಲೇಟ್ ಶ್ರೀನಿವಾಸ್‌ರವರ ಧರ್ಮಪತ್ನಿ)



ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚಹಸಿರಾಗಿದೆ. ಸದಾ ನಿಮ್ಮ ನೆನಪಿನಲ್ಲಿರುವ

ಎಸ್. ನಟರಾಜ್ ಮತ್ತು ಕುಟುಂಬ ವರ್ಗದವರು
ಹೆಣ್ಣು ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು

5ನೇ ವರ್ಷದ ಸವಿನೆನಪು



ಶ್ರೀಮತಿ ಲಕ್ಷ್ಮಮ್ಮ

ನಿಮ್ಮ ನೆನಪಿನಲ್ಲಿರುವ ಮದ್ದೂರಮ್ಮನ ಪೈ॥ ಸಣ್ಣಪ್ಪನವರ ಕುಟುಂಬ, ಕೆ.ಜಿ.ಕೊಪ್ಪಲು, ಮೈಸೂರು

SITE FOR SALE

Vishweshwaraiah Layout
30X40, South Facing
48 Lakhs

Brahmin's Layout, 'A' Block
30X40, South Facing
40 Ft Road, 30 Lakhs
Clear Documents

Call: 87625 15339
(Between 6 PM -10 PM)
Brokers Excuse

Apply Now

- Duty Doctors
- Nursing Staff
- Welcome girls
- Female Front office & Cashier
- Ambulance Driver
- House keeping Supervisor
- Typist

Walk in Interview 24.02.2024
AADITHYA ADHIKARI HOSPITAL
#417, Contour Road, Gokulam
WHATSAPP: 9845582841

SITES FOR SALE

At SAMRUDHI VANA LAYOUT, Main Road, Murudagalli,
DTCP Approved
Fully Developed at Rs. 1200/sq.ft.
Mob: 90363 56060
73495 27953

DTCP SITES FOR SALE

DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

ಸೈಟು ಬೇಕಾಗಿದೆ

1. ಲಾಲ್ ಬಹದ್ದೂರು ಶಾಸ್ತ್ರಿನಗರ
2. ಶಾಂತವೇರಿ ಗೋಪಾಲಗೌಡ ನಗರ
3. ವಸಂತನಗರ
4. ಲಲಿತಾದ್ರಿನಗರ
5. ಶ್ರೀ ಸಪ್ತಮಾತೃಕ ಲೇಔಟ್‌ಗಳಲ್ಲಿ

(ದಯಮಾಡಿ ಮಾಲೀಕರು ಸಂಪರ್ಕಿಸಿ)
9741624588 / 9686714571

ಜಮೀನು ಮಾರಾಟಕ್ಕಿದೆ

ಮೈಸೂರು ತಾ॥, ಜಯಪುರ ಹೋ॥, ಮಾದೂರು ಗ್ರಾಮದಲ್ಲಿ 32 ಗುಂಟೆ ಮಾದೂರು ಹುಂಡಿ ಗ್ರಾಮದಲ್ಲಿ 25 ಗುಂಟೆ ದೂರ ಗ್ರಾಮದಲ್ಲಿ 19 ಗುಂಟೆ ಗೋಪಾಲಪುರ ಗ್ರಾಮದಲ್ಲಿ 25 ಗುಂಟೆ ಮಾವಿನಹಳ್ಳಿಯಲ್ಲಿ 3 ಎಕರೆ, 7 ಗುಂಟೆ, ಮಾರಡಗಳ್ಳಿ ಗ್ರಾಮದಲ್ಲಿ 1 ಎಕರೆ, 4 ಗುಂಟೆ ಜಮೀನು ಮಾರಾಟಕ್ಕಿದೆ, ಸಂಪರ್ಕಿಸಿ:
9945661696, 9663793666

SITE FOR SALE

DTCP Approved Layout 30x40 Site @ Rs.16 Lakh, Bank Loan available next Marasettyhalli, behind chamundi hill 15 kms from mysore
9538583377




MUDA APPROVED

30'x40', East Face Site
@ Rs. 55 lakhs
Bank Loan Available
Ready for Construction
Adjacent to Lal Bahadur Shastri Nagar
Close to VTU Campus
Call: 95385-83377

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಭಾವಪೂರ್ಣ ಶ್ರದ್ಧಾಂಜಲಿ




ಇವರು ದಿನಾಂಕ: 22–02–2024 ರಂದು ದೈವಾಧೀನರಾಗಿದ್ದು, ಮೃತರ ಅಂತ್ಯಕ್ರಿಯೆಯನ್ನು ದಿನಾಂಕ: 23–02–2024 ಶುಕ್ರವಾರ ಬೆ.11 ಗಂಟೆಗೆ ಹಿನಕಲ್ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು

ಯ॥ ಶ್ರೀ ಡಬ್ಬಿ ಸಿದ್ದೇಗೌಡ್ರು
ಹುಂಡಿ ಬೀದಿ, ಹಿನಕಲ್

ದುಃಖತಪ್ತರು: ಕುಟುಂಬವರ್ಗ ಹಾಗೂ ಗ್ರಾಮಸ್ಥರು

ವೈಕುಂಠ ಸಮಾರಾಧನೆ



ಶ್ರೀ ಸತೀಶ್ ಎಂ.ಎಲ್

ಇವರು ದಿ: 14–2–2024 ಬುಧವಾರ ದೈವಾಧೀನರಾಗಿದ್ದು ತತ್ಸಂಬಂಧವಾಗಿ ಮೃತರ ವೈಕುಂಠ ಸಮಾರಾಧನೆಯನ್ನು ದಿ: 24–2–2024 ಶನಿವಾರ ಬೆ. 11–00 ಘಂಟೆಗೆ ಮೃತರ ಸ್ವಗೃಹ 7ನೇ ಕ್ರಾಸ್, ಶಾಂತಿಲಾಲ್ ಲೇಔಟ್, ಸೀಗಹಳ್ಳಿ ಗೇಟ್, ಮಾಗಡಿ ಮುಖ್ಯರಸ್ತೆ, ಬೆಂಗಳೂರು ಇಲ್ಲಿ ಏರ್ಪಡಿಸಿರುವುದರಿಂದ ತಾವೆಲ್ಲರೂ ಸಕಾಲಕ್ಕೆ ಆಗಮಿಸಿ ಮೃತರಿಗೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀಮತಿ ವೀಣಾ, ಮಕ್ಕಳು, ಮತ್ತು ಕುಟುಂಬವರ್ಗದವರು. ಭೋಜನ: 12.30ಕ್ಕೆ

ಪ್ರಕಟಣೆ
Ramesh M N
EX - CANARA BANK , AICBRF REGIONAL SECRETARY MYSURU

ಡಿ ಪೌಲ್ ಕಾಲೇಜ್

DE PAUL COLLEGE
ENLIGHTENING TO EMPOWER
Belagola P.0, Srirangapatna Taluk, Mandya Dist.
Mysore, Karnataka, India 571606

WALK-IN-INTERVIEW
Assistant Professor
Department of Commerce
Qualification: M.Com (KSET, NET, PhD, will be given preference)

Those who are interested, kindly send the resume within 2 days to the college mail id:
dpdcmysore@gmail.com

Call : 89713 97489 / 84316 53725
Web : www.depaulcollege.in

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಇಲಾಖೆ, ವನ್ಯಜೀವಿ ವಿಭಾಗ,
ಅರಣ್ಯ ಭವನ, ಅಶೋಕಪುರಂ, ಮೈಸೂರು
ದೂ: 0821–2481159, email:dcfwlmys@gmail.com


ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000 ಪ್ರಕಾರ 2023–24ನೇ ಸಾಲಿನಲ್ಲಿ ಮೈಸೂರು ವನ್ಯಜೀವಿ ವಿಭಾಗದ ವ್ಯಾಪ್ತಿಯ ರಂಗನತಿಟ್ಟು ಪಕ್ಷಿಧಾಮದಲ್ಲಿ Low Rope Course (Pillar Version) ನಿರ್ಮಾಣ/ಸರಬರಾಜು ಮಾಡಲು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಿದ್ದು, ಆಸಕ್ತಿವುಳ್ಳ ಸಂಸ್ಥೆ/ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿ ಟೆಂಡರ್ ದರಗಳನ್ನು ನಮೂದಿಸಬಹುದಾಗಿರುತ್ತದೆ. ಟೆಂಡರ್ ಸ್ವೀಕರಿಸುವ ದಿ: 27.02.2024 ರಂದು 16.00 ಗಂಟೆಯವರೆಗೆ, ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿ: 28.02.2024 ರಂದು 16.10 ಗಂಟೆಗೆ ಮತ್ತು ಆರ್ಥಿಕ ಬಿಡ್‌ಗಳನ್ನು ತೆರೆಯಲು 29.02.2024 ರಂದು 11.00ಕ್ಕೆ ನಿಗಧಿಪಡಿಸಲಾಗಿರುತ್ತದೆ ಹಾಗೂ ಟೆಂಡರ್‌ನಲ್ಲಿ ಯಾರೂ ಭಾಗವಹಿಸದೇ ಇದ್ದಲ್ಲಿ ಮರುಟೆಂಡರ್‌ನ್ನು 10 ದಿನಗಳವರೆಗೆ ವಿಸ್ತರಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಳನ್ನು ಹಾಗೂ ಷರತ್ತುಗಳನ್ನು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ http://kppp.karnataka.gov.in ರಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮೈಸೂರು
DIPR/DDMYS/KSMCA/1141/2023-24

ಕೋಟಿ ಕೊಟ್ಟರೆ, 25 ಕೋಟಿ ಕೊಡುವೆ ಎಂದು ಹಣ ದೋಚಿದ್ದವನ ಬಂಧನ

70 ಲಕ್ಷ ವಂಚನೆ ಪೈಕಿ, 43.88 ಲಕ್ಷ ರೂ ವಶ: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್



ಎಸ್‌ಪಿ ಎನ್.ಯತೀಶ್

ಮಂಡ್ಯ,ಫೆ.22– ಒಂದು ಕೋಟಿ ರೂ. ನೀಡಿದರೆ 25 ಕೋಟಿ ರೂ. ನೀಡುವೆ ಎಂದು 70 ಲಕ್ಷ ರೂ. ವಂಚಿಸಿ ಪರಾರಿಯಾಗಿದ್ದ ಆರೋಪಿಯನ್ನು ಬಂಧಿಸಲಾಗಿದ್ದು, ಬಂಧಿತನಿಂದ 43.88 ಲಕ್ಷ ರೂ. ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ತಿಳಿಸಿದ್ದಾರೆ.

ಆಂಧ್ರಪ್ರದೇಶದ ಕುಪ್ಪಂ ಮೂಲದ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಸಿಂಗಾನಲ್ಲೂರು ಗ್ರಾಮದ ಶಿವ.ಬಿ ಆಲಿಯಾಸ್ ಶಿವ ಬುಡ್ಡಪ್ಪ ಆಲಿಯಾಸ್ ಸೂರ್ಯ ಬಂಧಿತ ಆರೋಪಿ. ಈತನಿಂದ 43,88,500 ರೂ. ನಗದು ವಶಪಡಿಸಿಕೊಳ್ಳಲಾಗಿದೆ ಎಂದು ನಗರದ ತಮ್ಮ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ವಿವರಿಸಿದರು.

ಮಳವಳ್ಳಿ ತಾಲೂಕಿನ ಶಿಂಷಾಪುರ ಗ್ರಾಮದಲ್ಲಿರುವ ಶ್ಯಾಲೋಮ್ ಎಜುಕೇಷನಲ್ ಮತ್ತು ಚಾರಿಟೆಬಲ್ ಟ್ರಸ್ಟ್(ರಿ)ಗೆ ಸಹಾಯ ಮಾಡುವುದಾಗಿ ಶಂಭುಲಿಂಗಸ್ವಾಮಿ ಎಂಬ ಸ್ವಾಮೀಜಿಯವರು ಈತನನ್ನು ಪರಿಚಯ ಮಾಡಿಕೊಟ್ಟಿದ್ದರು. ಈತ 1 ಕೋಟಿ ರೂ. ಕೊಟ್ಟರೆ 25 ಕೋಟಿ ರೂ. ಕೊಡುವುದಾಗಿ ನಂಬಿಸಿ ಟ್ರಸ್ಟ್‌ನ ಕಾರ್ಯದರ್ಶಿ ಮೇರಿ ಅವರಿಗೆ ಆಮಿಷವೊಡ್ಡಿದ್ದ ಎಂದು ಅವರು ಹೇಳಿದರು.

ನಂತರ ಹಣ ಹೊಂದಿಸಿಕೊಂಡು ತಿಳಿಸಿದಾಗ ಕಳೆದ ಜ.26ರಂದು ಟ್ರಸ್ಟ್‌ನ ಕಚೇರಿಗೆ ಆಗಮಿಸಿದಾಗ ಆರೋಪಿಯು ಟ್ರಸ್ಟ್ ಅಧ್ಯಕ್ಷ ಹಾಗೂ ನನಗೆ ಸಿಹಿ ಪೊಂಗಲ್ ಹಾಗೂ ಜ್ಯೂಸ್‌ನಲ್ಲಿ ಪ್ರಜ್ಞೆ ತಪ್ಪಿಸುವ ಪೌಡರ್ ಬೆರೆಸಿ ಹಾಕಿದ್ದರಿಂದ ಆರೋಗ್ಯದಲ್ಲಿ ಏರುಪೇರಾಗಿದ್ದು, ಆತ ತಂದಿದ್ದ ನೋಟಿನ ಅಳತೆಗೆ ಕಟ್ಟು ಮಾಡಿದ್ದ ಬಿಳಿ ಹಾಳೆಗಳನ್ನು ತೋರಿಸಿ ನಮ್ಮಿಂದ 1.10 ಕೋಟಿ ರೂ. ದೋಚಿ ಪರಾರಿಯಾಗಿದ್ದ ಎಂದು ದೂರು ನೀಡಿದ್ದರು. ನಂತರ 70 ಲಕ್ಷ ರೂ. ಎಂದು ಮತ್ತೆ ಮರು ಹೇಳಿಕೆ ನೀಡಿದ್ದರು. ಅದರಂತೆ ಆತನನ್ನು ಬಂಧಿಸಿ ಆತನಿಂದ 43,88,500 ರೂ. ವಶಪಡಿಸಿಕೊಂಡು, ಉಳಿದ 26,11,500 ರೂ. ವಶಪಡಿಸಿಕೊಳ್ಳಲಾಗುವುದು ಎಂದರು.

ವಿಚಾರಣೆ ವೇಳೆ ಹೆಬ್ಬಣಿ ಗ್ರಾಮದ ಶ್ರೀ ನಿರ್ವಾಣೇಶ್ವರ ವಿರಕ್ತ ಮಠದ ಸ್ವಾಮೀಜಿ ಶ್ರೀಶಂಭುಲಿಂಗಸ್ವಾಮೀಜಿ ಭಾಗಿಯಾಗಿದ್ದಾರೆ ಎಂದು ತಿಳಿಸಿದನು. ಅದರಂತೆ ವಿಚಾರಣೆ ನಡೆಸಿದಾಗ ಇದರಲ್ಲಿ ಅವರು ಕೇವಲ ಪರಿಚಯ ಮಾಡಿಕೊಟ್ಟಿದ್ದರು ಎಂದು ತಿಳಿದು

ಇಬ್ಬರು ಮನೆಗಳ್ಳರ ಬಂಧನ: ಚಿನ್ನಾಭರಣ ವಶ

ಮಂಡ್ಯ,ಫೆ.22– ಯಾರೂ ಇಲ್ಲದ ಮನೆಗಳನ್ನು ಗುರಿಯಾಗಿಸಿಕೊಂಡು ಮನೆಗಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿರುವ ಹಲಗೂರು ಪೊಲೀಸರು ಒಟ್ಟು 6.70 ಲಕ್ಷ ರೂ. ಮೌಲ್ಯದ 122 ಗ್ರಾಂ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ ಎಂದು ಇದೇ ವೇಳೆ ಅವರು ತಿಳಿಸಿದರು.

ಮಳವಳ್ಳಿಯ ರಾಮಂದೂರು ಗ್ರಾಮದ ಅಲೋಕ್‌ಕುಮಾರ್, ಚಲುವರಾಜು ಬಂಧಿತ ಆರೋಪಿಗಳಾಗಿದ್ದಾರೆ. ಇವರ ವಿರುದ್ಧ ಹಲಗೂರು, ಮಳವಳ್ಳಿ ಗ್ರಾಮಾಂತರ ಹಾಗೂ ಟೌನ್ ಪೊಲೀಸ್ ಠಾಣೆ ಸೇರಿದಂತೆ ಮೂರು ಪ್ರಕರಣಗಳು ದಾಖಲಾಗಿರುವುದು ವಿಚಾರಣೆಯಿಂದ ತಿಳಿದು ಬಂದಿದೆ ಎಂದು ವಿವರಿಸಿದರು. ಆರೋಪಿಗಳು ಮನೆಯಲ್ಲಿ ಯಾರೂ ಇಲ್ಲದ್ದನ್ನು ಗಮನಿಸಿ ರಾತ್ರಿ ವೇಳೆಯಲ್ಲಿ ಮನೆಗೆ ಬಾಗಿಲನ್ನು ಮುರಿದು ಮನೆಯಲ್ಲಿದ್ದ ಚಿನ್ನಾಭರಣ ಹಾಗೂ ನಗದನ್ನು ಕಳ್ಳತನ ಮಾಡುತ್ತಿದ್ದರು. ಅದರಂತೆ ಮಳವಳ್ಳಿ ತಾಲೂಕಿನ ತೊರೆಕಾಡನಹಳ್ಳಿ ಗ್ರಾಮದ ಅರ್ಜುನ್ ಎಂಬುವರ ಮನೆಯಲ್ಲಿ ಕಳ್ಳತನ ಮಾಡಿದ್ದರು. ಅದರಂತೆ ದೂರು ಸ್ವೀಕರಿಸಿದ ಹಲಗೂರು ಪೊಲೀಸರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ತಿಳಿಸಿದರು.

ಬಂದಿದೆ ಎಂದು. ಪತ್ತೆಕಾರ್ಯದಲ್ಲಿ ಹಲಗೂರು ಸಿಪಿಐ ಬಿ.ಎಸ್.ಶ್ರೀಧರ್, ಇನ್ಸ್‌ಪೆಕ್ಟರ್ ಅಶೋಕ್, ಸಿಬ್ಬಂದಿಗಳಾದ ನಾಗೇಂದ್ರ, ರಿಯಾಜ್‌ಪಾಷ, ನಿಂಗರಾಜು, ಸಿದ್ದರಾಜು, ಮಹೇಶ, ಅವಿನಾಶ್, ಚೇತನ್.ಕೆ.ಪಿ, ರವಿಕಿರಣ್, ಲೋಕೇಶ್ ಅವರನ್ನು ಪ್ರಶಂಸಿಸಿದರು.

ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ ಮನೆಗಳ್ಳತನ ಮಾಡುತ್ತಿದ್ದ ಎಂಟು ಆರೋಪಿಗಳ ಬಂಧನ

ಚಿನ್ನ, ಬೆಳ್ಳಿ ಆಭರಣ, ನಗದು ವಶ

ಮಂಡ್ಯ,ಫೆ.22– ಮನೆಗಳ್ಳತನ ಮಾಡುತ್ತಿದ್ದ 8 ಮಂದಿ ಆರೋಪಿಗಳನ್ನು ಬಂಧಿಸುವಲ್ಲಿ ಮದ್ದೂರು ಪೊಲೀಸರು ಯಶಸ್ವಿಯಾಗಿದ್ದು, ಬಂಧಿತರಿಂದ ಒಟ್ಟು 83 ಲಕ್ಷ ರೂ. ಮೌಲ್ಯದ 1 ಕೆಜಿ 486 ಗ್ರಾಂ ಚಿನ್ನಾಭರಣ, 37 ಗ್ರಾಂ ಬೆಳ್ಳಿಯ ಆಭರಣ, 1.70 ಲಕ್ಷ ರೂ. ನಗದು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್ ಇದೇ ವೇಳೆ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಸಂತೆಸರಗೂರು ಗ್ರಾಮದ ಫಯಾಜ್ ಅಹಮದ್, ಆತನ ಮಗ ಮಹಮ್ಮದ್ ಸಾದತ್, ಮಹಮ್ಮದ್ ಮುನ್ನಾ, ಸೈಯದ್ ಆಯೂಬ್, ಪ್ರಸಾದ್.ಆರ್, ಜಿ.ಆರ್.ಗಿರೀಶ್ ಹಾಗೂ ಆರೋಪಿಗಳ ಕಳ್ಳತನಕ್ಕೆ ಸಹಕರಿಸುತ್ತಿದ್ದ ಶ್ರೀರಂಗಪಟ್ಟಣ ಪೊಲೀಸ್ ಠಾಣೆಯ ಪೇದೆ ಕೆಂಡಗಣ್ಣ ಬಂಧಿತ ಆರೋಪಿಗಳಾಗಿದ್ದಾರೆ ಎಂದರು.

ಇವರ ವಿರುದ್ಧ ಮದ್ದೂರು, ಶ್ರೀರಂಗಪಟ್ಟಣ, ಮೈಸೂರು ನಗರ ವಿವಿ ಪುರಂ, ಕೆ.ಆರ್.ನಗರ ಹಾಗೂ ಮೈಸೂರು ದಕ್ಷಿಣ ಪೊಲೀಸ್ ಠಾಣೆಗಳಲ್ಲಿ ಕಳ್ಳತನ ಪ್ರಕರಣಗಳು ದಾಖಲಾಗಿರುವುದು ವಿಚಾರಣೆಯಿಂದ ತಿಳಿದು ಬಂದಿದೆ. ಬಂಧಿತರೆಲ್ಲರೂ ಮನೆಗಳ್ಳತನ ಮಾಡುವ ಪ್ರವೃತ್ತಿ ಬೆಳೆಸಿಕೊಂಡಿದ್ದರು. ಮನೆಯಲ್ಲಿ ಯಾರೂ ಇಲ್ಲದ ಹಾಗೂ ಬೀಗ ಹಾಕಿರುವ ಮನೆಗಳನ್ನೇ ಗುರಿಯಾಗಿಸಿಕೊಂಡು ಕಳ್ಳತನ ಮಾಡುತ್ತಿದ್ದರು ಎಂದು ವಿವರಿಸಿದರು.

ಇವರ ಪತ್ತೆ ಕಾರ್ಯದಲ್ಲಿ ಭಾಗಿಯಾಗಿದ್ದ ಡಿವೈಎಸ್ಪಿ ಕೃಷ್ಣಪ್ಪ.ವಿ, ಪಿಐಗಳಾದ ಪ್ರಸಾದ್, ಶಿವಕುಮಾರ್, ಸಿಪಿಐ ವೆಂಕಟೇಗೌಡ, ಪಿಎಸ್‌ಐಗಳಾದ ಮಂಜುನಾಥ್, ರವಿ, ಮಲ್ಲಪ್ಪ, ಸಿಬ್ಬಂದಿಗಳಾದ ಗುರುಪ್ರಸಾದ್, ಕುಮಾರಸ್ವಾಮಿ, ಪ್ರಭುಸ್ವಾಮಿ, ಮಹೇಶ, ಚಿರಂಜೀವಿ ಪೂಜಾರ್, ವಿಷ್ಣುವರ್ಧನ, ಪುರುಷೋತ್ತಮ, ಓಂಕಾರಪ್ಪ, ಶರತ್, ಗಿರೀಶ, ರವಿಕಿರಣ್, ಲೋಕೇಶ್, ರಜಿತ್, ಚಲುವರಾಜು ಅವರ ತಂಡವನ್ನು ಪ್ರಶಂಸಿಸಿದರು. ಗೋಷ್ಠಿಯಲ್ಲಿ ಅಪರ ಪೊಲೀಸ್ ಅಧೀಕ್ಷಕ ತಿಮ್ಮಯ್ಯ, ಡಿವೈಎಸ್ಪಿ ಕೃಷ್ಣಪ್ಪ ಇದ್ದರು.

ಮೇಲುಕೋಟೆ ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಮೇಲುಕೋಟೆ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕಾಡೇನಹಳ್ಳಿ ರಾಮಚಂದ್ರು, ಉಪಾಧ್ಯಕ್ಷರಾಗಿ ಎಂ.ಎನ್.ಕುಮಾರ್ ಅವಿರೋಧವಾಗಿ ಆಯ್ಕೆಯಾದರು.

ಪಾಂಡವಪುರ, ಫೆ22– ಮೇಲುಕೋಟೆ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಕಾಂಗ್ರೆಸ್–ರೈತಸಂಘ ಬೆಂಬಲಿತ ಅಭ್ಯರ್ಥಿ ಕಾಡೇನಹಳ್ಳಿ ರಾಮಚಂದ್ರು, ಉಪಾಧ್ಯಕ್ಷರಾಗಿ ಎಂ.ಎನ್. ಕುಮಾರ್ ಅವಿರೋಧವಾಗಿ ಆಯ್ಕೆಯಾದರು.

ನಾಮಪತ್ರ ಸಲ್ಲಿಕೆ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್–ರೈತಸಂಘ ಬೆಂಬಲಿತ ಅಭ್ಯರ್ಥಿ ಕಾಡೇನಹಳ್ಳಿ ರಾಮಚಂದ್ರು ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಎಂ.ಎನ್. ಕುಮಾರ್ ಹೊರತುಪಡಿಸಿ ಯಾವೊಬ್ಬ ನಿರ್ದೇಶಕರು ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಸಂಘದ ನೂತನ ಅಧ್ಯಕ್ಷರಾಗಿ ಕಾಡೇನಹಳ್ಳಿ ರಾಮಚಂದ್ರು ಹಾಗೂ ಉಪಾಧ್ಯಕ್ಷರಾಗಿ ಎಂ.ಎನ್.ಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಆನಂದ್‌ನಾಯಕ್ ಘೋಷಿಸಿದರು.

ನೂತನ ಅಧ್ಯಕ್ಷ ಕಾಡೇನಹಳ್ಳಿ ರಾಮಚಂದ್ರು, ಉಪಾಧ್ಯಕ್ಷ ಎಂ.ಎನ್.ಕುಮಾರ್ ಅವರನ್ನು ಎಲ್ಲಾ ನಿರ್ದೇಶಕರು, ಮುಖಂಡರು ಅಭಿನಂದಿಸಿದರು.

ಸಂಘದ ನಿರ್ದೇಶಕರಾದ ಎಂ.ವೈ. ವೆಂಕಟೇಶ್, ಎಂ.ಎನ್.ರಾಮಪ್ರಿಯ, ಎಂ.ಎಸ್. ಈರೇಗೌಡ, ಮಂಜುಳ, ಲಲಿತ, ನಟರಾಜು, ಅಣ್ಣಯ್ಯ, ಬಲರಾಮು, ಕಾರ್ಯದರ್ಶಿ ಎಚ್.ವಿ.ಪುಟ್ಟರಾಜು, ಮುಖಂಡರಾದ ವಿ.ಎಸ್.ಎಸ್.ಎನ್.ಬಿ ಅಧ್ಯಕ್ಷ ಯೋಗನರಸಿಂಹೇಗೌಡ, ರಮೇಶ್, ಚೇತನ್, ರವಿ, ಗಿರೀಶ್, ಆನಂದ್, ಶ್ರೀನಿವಾಸ್, ಯೋಗೇಗೌಡ, ಕೋದಂಡರಾಮು, ಜಲಬೋರೇಗೌಡ, ಜಯರಾಮು ಸೇರಿದಂತೆ ಹಲವರು ಇದ್ದರು.

ಶ್ರೀ ನಿಮಿಷಾಂಬ ದೇವಾಲಯದಲ್ಲಿ ಹುಣ್ಣಿಮೆ ಪೂಜೆ

ಶ್ರೀರಂಗಪಟ್ಟಣ, ಫೆ.22– ಗಂಜಾಂನ ಪ್ರಸಿದ್ಧ ಅಧಿದೇವತೆ ಶ್ರೀ ನಿಮಿಷಾಂಬ ದೇವಾಲಯದ ಕಾವೇರಿ ನದಿಯಲ್ಲಿ ಫೆ24ರ ಶನಿವಾರ ಮಾಘ ಮಾಸದ ಶುದ್ಧ ಪೌರ್ಣಿಮೆಯ ಅಂಗವಾಗಿ ಪುಣ್ಯ ಸ್ನಾನಕ್ಕೆ ಒಂದು ಲಕ್ಷ ಮಂದಿ ಭಕ್ತರು ಆಗಮಿಸುವ ನಿರೀಕ್ಷೆ ಇದ್ದು, ಎಲ್ಲಾ ರೀತಿಯ ಮೂಲಸೌಕರ್ಯಗಳ ಮಾಡಿಕೊಳ್ಳಲಾಗಿದೆ ಎಂದು ದೇವಾಲಯದ ಇಒ ಸಿ.ಜಿ.ಕೃಷ್ಣ ತಿಳಿಸಿದ್ದಾರೆ.

ಫೆ23ರ ಶುಕ್ರವಾರ ಮಧ್ಯರಾತ್ರಿಯಿಂದಲೇ ಭಕ್ತರು ಆಗಮಿಸಿ ಇಲ್ಲಿನ ಕಾವೇರಿ ನದಿಯಲ್ಲಿ ಪುಣ್ಯ ಸ್ನಾನ ಮಾಡಿ ನಿಮಿಷಾಂಬ ದೇವಿಯ ದರ್ಶನ ಪಡೆಯಲಿದ್ದಾರೆ. ನಂತರ ಕಾವೇರಿ ನದಿಯಲ್ಲಿ ದೀಪಾರತಿ ಬೆಳಗಲಿದ್ದಾರೆ.

ದೇವಾಲಯ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಣ್ಣ ಬಣ್ಣದ ವಿದ್ಯುತ್ ದೀಪಾಲಂಕಾರ, ಬಗೆ ಬಗೆಯ ಹೂವಿನಿಂದ ದೇವಾಲಯವನ್ನು ಅಲಂಕಾರಗೊಳಿಸಿ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಮುಂಜಾನೆಯಿಂದಲೇ ದೇವಿಗೆ ವಿಶೇಷವಾಗಿ ಪಂಚಾಮೃತ ಅಭಿಷೇಕ, ಪೂರ್ವಕ ಮಹಾಭಿಷೇಕ, ಗಣ ಹೋಮ, ನಕ್ಷತ್ರ ಹೋಮ, ಪೂರ್ಣಹೋಮ ಮಾಡಿ ಹಾಲಿನ ಅಭಿಷೇಕ ಇತ್ಯಾದಿ ಹೋಮಗಳು ನಡೆಯಲಿವೆ.

ವೈಭವದ ಶ್ರೀ ಕಲ್ಯಾಣ ವೆಂಕಟರಮಣ ಸ್ವಾಮಿ ತೆಪ್ಪೋತ್ಸವ



ಕೆಆರ್.ಪೇಟೆ,ಫೆ22– ತಾಲೂಕಿನ ಹೇಮಗಿರಿ ಕ್ಷೇತ್ರದಲ್ಲಿ ಶ್ರೀ ಕಲ್ಯಾಣ ವೆಂಕಟರಮಣ ಸ್ವಾಮಿಯವರ ಭವ್ಯವಾದ ತೆಪ್ಪೋತ್ಸವವು ಹೇಮಾವತಿ ನದಿಯಲ್ಲಿ ಶಾಸಕ ಹೆಚ್.ಟಿ.ಮಂಜು ಅವರ ಅಧ್ಯಕ್ಷತೆಯಲ್ಲಿ ಮುಜರಾಯಿ ಇಲಾಖೆಯ ನೇತೃತ್ವದಲ್ಲಿ ಅದ್ದೂರಿಯಾಗಿ ನಡೆಯಿತು.

ಮರದ ಹಲಗೆಗಳು ಹಾಗೂ ಬೃಹತ್ ಡ್ರಮ್‌ಗಳಿಂದ ಸಿದ್ಧಪಡಿಸಿದ್ದ ತೆಪ್ಪದಲ್ಲಿ ಶ್ರೀ ಕಲ್ಯಾಣ ವೆಂಕಟರಮಣ ಸ್ವಾಮಿಯವರ ಉತ್ಸವ ಮೂರ್ತಿಯನ್ನು ಇಟ್ಟು ಅಲಂಕರಿಸಿ ಬಣ್ಣ ಬಣ್ಣದ ವಿದ್ಯುತ್ ದೀಪಗಳು ಹಾಗೂ ಹೂವುಗಳಿಂದ ಅಲಂಕರಿಸಿ ರಾತ್ರಿ 8.30ಕ್ಕೆ ತೆಪ್ಪೋತ್ಸವ ಕಾರ್ಯಕ್ರಮವನ್ನು ಸಡಗರ ಸಂಭ್ರಮದಿಂದ ನೆರವೇರಿಸಲಾಯಿತು.

ಶಾಸಕ ಹೆಚ್.ಟಿ.ಮಂಜು ಹಾಗೂ ತಹಶೀಲ್ದಾರ್ ನಿಸರ್ಗಪ್ರಿಯ ಅವರು ಶ್ರೀ ಕಲ್ಯಾಣ ವೆಂಕಟರಮಣ ಸ್ವಾಮಿಯವರ ಉತ್ಸವ ಮೂರ್ತಿಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ತೆಪ್ಪೋತ್ಸವಕ್ಕೆ ಚಾಲನೆ ನೀಡಿದರು. ಬಾಣಬಿರುಸುಗಳು, ಮದ್ದು ಗುಂಡುಗಳ ಸಿಡಿತವು ಭಕ್ತಾದಿಗಳು ಹಾಗೂ ಸಾರ್ವಜನಿಕರ ಮನಸೂರೆಗೊಂಡಿತು. ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಸಿಂಗಾರಗೊಂಡಿದ್ದ ಬೆಟ್ಟದ ಪಾದ ಹಾಗೂ ಶ್ರೀ ಕಲ್ಯಾಣ ವೆಂಕಟರಮಣ ಸ್ವಾಮಿಯವರ ಬೆಟ್ಟವು ಜಗಮಗಿಸುತ್ತಿದ್ದುದ್ದಲ್ಲದೆ, ದೀಪಾವಳಿ ಹಬ್ಬದ ಸಂಭ್ರಮವನ್ನು ಸ್ಮರಿಸುವಂತಿತ್ತು.

ಬಂಡಿಹೊಳೆ ಗ್ರಾಪಂ ಅಧ್ಯಕ್ಷೆ ಜಯಲಕ್ಷ್ಮಿ ಅಣ್ಣಪ್ಪ, ಕಸಬಾ ಹೋಬಳಿಯ ರಾಜಸ್ವ ನಿರೀಕ್ಷಕ ಜ್ಞಾನೇಶ್, ಗ್ರಾಮ ಲೆಕ್ಕಾಧಿಕಾರಿ ಪೂಜಾ ಗೌಡ, ಶಿರಸ್ತೆದಾರ್ ರವಿ, ಗ್ರಾಮಾಂತರ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರಾದ ಆನಂದೇಗೌಡ, ಹರಳಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಚ್.ಟಿ.ಲೋಕೇಶ್, ಟಿಎಪಿಸಿಎಂಎಸ್ ನಿರ್ದೇಶಕ ಬಲದೇವ್, ಬಂಡಿಹೊಳೆ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಕಾಯಿ ಮಂಜೇಗೌಡ, ಪಿ.ಎಲ್.ಡಿ.ಬ್ಯಾಂಕ್ ಮಾಜಿ ಅಧ್ಯಕ್ಷ ಬಂಡಿಹೊಳೆ ಅಶೋಕ್‌ಕುಮಾರ್ ಸೇರಿದಂತೆ ಜಿಲ್ಲೆಯ ನಾನಾ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಭಕ್ತಾದಿಗಳು ತೆಪ್ಪೋತ್ಸವದ ಸಂಭ್ರಮದಲ್ಲಿ ಭಾಗಿಯಾಗಿದ್ದರು.

ಶ್ರೀ ಕಲ್ಯಾಣ ವೆಂಕಟರಮಣ ಸ್ವಾಮಿಯ ಉತ್ಸವ ಮೂರ್ತಿಗಳಿಗೆ ಬೆಟ್ಟದ ಪಾದದಿಂದ ಪೂಜೆ ಸ್ವೀಕರಿಸಿ ಹೊರಟ ತೆಪ್ಪವು, ಹೇಮಾವತಿ ನದಿಯ ಮಧ್ಯದಲ್ಲಿರುವ ಬೃಗು ಶಿಲೆಗೆ ಪೂಜೆ ಸಲ್ಲಿಸಿ, ನಾಟನಹಳ್ಳಿ ಭಾಗಕ್ಕೆ ತೆರಳಿ ಅಲ್ಲಿಂದ ನೇರವಾಗಿ ಕುಪ್ಪಳ್ಳಿ ಭಾಗಕ್ಕೆ ಬಂದು ಪೂಜೆ ಸ್ವೀಕರಿಸಿ ಸ್ವಸ್ಥಾನಕ್ಕೆ ಮರಳಿತು. ತೆಪ್ಪೋತ್ಸವ ಅಂಗವಾಗಿ ವಿದ್ಯುತ್ ದೀಪಾಲಂಕಾರವು ಭಕ್ತರ ಮನಸೂರೆಗೊಂಡಿತು, ಬಾಣ ಬಿರುಸು ಹಾಗೂ ಮದ್ದು ಗುಂಡುಗಳ ಸಿಡಿತದ ಸದ್ದು ಸಾರ್ವಜನಿಕರಿಗೆ ಮುದ ನೀಡಿತು.

ಫೆ.26, 27 ರಂದು ಬೆಂಗಳೂರಲ್ಲಿ ಬೃಹತ್ ಉದ್ಯೋಗ ಮೇಳ

ಮಂಡ್ಯ,ಫೆ.22– ಬೆಂಗಳೂರು ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ ವತಿಯಿಂದ ಫೆ.26 ಮತ್ತು 27 ರಂದು ಬೆಳಿಗ್ಗೆ 9 ಗಂಟೆಗೆ ಬೃಹತ್ ಉದ್ಯೋಗ ಮೇಳವನ್ನು ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಲಾಗಿದೆ.

ಜಿಲ್ಲೆಯ ನಿರುದ್ಯೋಗಿ ವಿದ್ಯಾವಂತ ಅಭ್ಯರ್ಥಿಗಳು ಭಾಗವಹಿಸಬೇಕು ಎಂದು ಮಂಡ್ಯ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀ ರಾಮಕೃಷ್ಣ ಪರಮಹಂಸರ ಜನ್ಮದಿನೋತ್ಸವ–ಜಾತ್ರೋತ್ಸವ

ಸ್ವಾಮಿ ವಿವೇಕಾನಂದರ 'ಪ್ರಬುದ್ಧ ಭಾರತ' ನಿರ್ಮಿಸಲು ಪಣತೊಡಬೇಕು

ಚಿಂತಕ ಡಾ.ನಾ.ಸೋಮೇಶ್ವರ ಅಭಿಮತ



ಮೈಸೂರಿನ ರಾಮಕೃಷ್ಣ ಪರಮಹಂಸ ವೃತ್ತದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಶ್ರೀ ರಾಮಕೃಷ್ಣ ಪರಮಹಂಸರ ಜನ್ಮದಿನೋತ್ಸವದಲ್ಲಿ (ಎಡದಿಂದ) ಸಂಗೀತ ಕಲಾವಿದೆ ರಮಾಮಣಿ ಸತ್ಯನಾರಾಯಣರಾವ್, ಸಮಾಜ ಸೇವಕ ಎಂ.ಡಿ.ಕಿಣಿ, ಮಾಜಿ ಎಂಎಲ್‌ಸಿ ಡಿ.ಮಾದೇಗೌಡ ಅವರಿಗೆ 'ಶ್ರೀರಾಮಕೃಷ್ಣ ಪರಮಹಂಸ ಸೇವಾ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಮೈಸೂರು,ಫೆ.22(ಪಿಎಂ)– ಸ್ವಾಮಿ ವಿವೇಕಾನಂದರ ಕನಸಿನ 'ಪ್ರಬುದ್ಧ ಭಾರತ' ನಿರ್ಮಿಸಲು 21ನೇ ಶತಮಾನದಲ್ಲಿರುವ ನಾವು–ನೀವು ಪಣತೊಡಬೇಕಿದೆ ಎಂದು ವೈದ್ಯ ಸಾಹಿತಿ ಮತ್ತು ಚಿಂತಕರೂ ಆದ ಥಟ್ ಅಂತ ಹೇಳಿ ಕಾರ್ಯಕ್ರಮ ಖ್ಯಾತಿಯ ಡಾ.ನಾ. ಸೋಮೇಶ್ವರ ಅಭಿಪ್ರಾಯಪಟ್ಟರು.

ಮೈಸೂರಿನ ರಾಮಕೃಷ್ಣ ಪರಮಹಂಸ ವೃತ್ತದಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಶ್ರೀ ರಾಮಕೃಷ್ಣ ಪರಮಹಂಸರ ಜನ್ಮದಿನೋತ್ಸವ ಮತ್ತು ಶ್ರೀ ರಾಮಕೃಷ್ಣ ಪರಮಹಂಸರ ಜಾತ್ರೋತ್ಸವದಲ್ಲಿ 'ಪ್ರಸ್ತುತದಲ್ಲಿ ಸ್ವಾಮಿ ವಿವೇಕಾನಂದರ ಚಿಂತನೆಗಳ ಅವಶ್ಯಕತೆ' ಕುರಿತು ಅವರು ಮಾತನಾಡಿದರು.

ಸ್ವಾಮಿ ವಿವೇಕಾನಂದರು ತಮ್ಮ ಪ್ರಬುದ್ಧ ಭಾರತದ ಆಶಯ ಈಡೇರಿಸಲು 1893ರಲ್ಲಿ 'ಪ್ರಬುದ್ಧ ಭಾರತ' ಇಂಗ್ಲಿಷ್ ಮಾಸ ಪತ್ರಿಕೆ ಆರಂಭಿಸಿದರು. 128 ವರ್ಷಗಳಿಂದ ಈ ಪತ್ರಿಕೆ ನಿರಂತರವಾಗಿ ಪ್ರಕಟಗೊಳ್ಳುತ್ತಿದೆ. ಈವರೆಗೆ 37 ಮಂದಿ ಸಂಪಾದಕರು ಈ ಪತ್ರಿಕೆಗಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಸ್ವಾಮಿ ವೀರೇಶಾನಂದರು ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಧಾರ್ಮಿಕ, ಐತಿಹಾಸಿಕ, ಸಾಂಸ್ಕೃತಿಕ ಮತ್ತು ಮಾನಸಿಕವಾಗಿ ಶ್ರೀಮಂತ ಹೊಂದಿರುವ ಪ್ರಬುದ್ಧ ಭಾರತ ಕಟ್ಟಬೇಕೆಂಬ ಆಶಯದಿಂದ ಈ ಪತ್ರಿಕೆ ಪ್ರಾರಂಭಿಸಿದರು ಎಂದು ಹೇಳಿದರು. ಅವರ ಈ ಪತ್ರಿಕೆಯ ವಿಚಾರಧಾರೆಯಿಂದ ಇಡೀ ಜಗತ್ತೇ ಪ್ರಭಾವಗೊಂಡಿದೆ. ಮಹಾನ್ ಲೇಖಕರು, ಬುದ್ಧಿಜೀವಿಗಳು ಅಂದು ಪತ್ರಿಕೆಯ ಓದುಗರು ಹಾಗೂ ಅಂಕಣ ಬರಗಾರರೂ ಆಗಿದ್ದರು. ಪತ್ರಿಕೆಯ ಪ್ರಬುದ್ಧ ಭಾರತ ಆಶಯಕ್ಕೆ ಪೂರಕವಾಗಿ ಬರುತ್ತಿದ್ದ ಲೇಖನಗಳನ್ನು ಮಾತ್ರ ಪ್ರಕಟಿಸುತ್ತಿದ್ದ ಕಾರಣ, ಶೇ.80ರಷ್ಟು ಲೇಖನಗಳನ್ನು ಬರಹಗಾರರಿಗೆ ವಾಪಸ್ಸು ಕಳುಹಿಸಲಾಗುತ್ತಿತ್ತು. ಲಿಯೋ ಟಾಲ್‌ಸ್ಟಾಯ್, ರವೀಂದ್ರನಾಥ್ ಟಾಗೂರ್, ಬಾಲಗಂಗಾಧರನಾಥ ತಿಲಕ್, ಜಗದೀಶ್ ಚಂದ್ರ ಬೋಸ್ ಮೊದಲಾದ ಮಹನೀಯರು ಈ ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದರು. ಅಲ್ಲದೆ, ಗಾಂಧಿಯವರು ಈ ಪತ್ರಿಕೆ ಪ್ರಕಟಗೊಳ್ಳುವುದನ್ನೇ ಕಾದು ಓದುವಷ್ಟು ಪ್ರಭಾವಿತರಾಗಿದ್ದರು ಎಂದು ತಿಳಿಸಿದರು.

ಅನುವಾದಿಸಿ ಪ್ರಕಟಿಸಬೇಕು: 125 ವರ್ಷಗಳ ಅಷ್ಟು ಸಂಚಿಕೆಗಳನ್ನು ಕನ್ನಡವೂ ಸೇರಿದಂತೆ ಭಾರತೀಯ ಭಾಷೆಗಳಿಗೆ ಅನುವಾದಿಸಿ ಪ್ರಕಟಿಸಿದರೆ ವಿವೇಕಾನಂದರ ಸಮಕಾಲೀನ ವಿಚಾರಧಾರೆಗಳನ್ನು ಪಸರಿಸಬಹುದು. ವಿವೇಕಾನಂದರು ಭಾರತೀಯರಿಗೆ, ಅದರಲ್ಲೂ ದೇಶದ ಯುವ ಜನತೆಗೆ 'ಮತ್ತೊಮ್ಮೆ ಏದ್ದೇಳಿ' ಎಂಬ ಮಹತ್ವದ ಕರೆ ನೀಡಿದ್ದಾರೆ. 'ಮತ್ತೊಮ್ಮೆ ಏದ್ದೇಳಿ. ಅದು ನಿದ್ರೆ ಮಾತ್ರವಾಗಿತ್ತು. ಅದು ಸಾವಲ್ಲ. ಈ ನಿದ್ರೆಯು ನಿನ್ನ ಬದುಕಿಗೆ ನವಚೈತನ್ಯ ತುಂಬಿದೆ. ಪ್ರಬುದ್ಧ ಭಾರತದ ನನಸಾಗಿಸುವ ಕಾಲ ಈಗ ಬಂದಿದೆ' ಎಂದು ಭಾರತೀಯರನ್ನು ಜಾಗೃತಗೊಳಿಸಿದ್ದಾರೆ ಎಂದು ಡಾ.ನಾ.ಸೋಮೇಶ್ವರ ಹೇಳಿದರು.

ಭಾರತದ ಮೇಲೆ ಸಾವಿರ ವರ್ಷಗಳ ಕಾಲ ಪರಕೀಯರಿಂದ ದೌರ್ಜನ್ಯ ನಡೆದಿದೆ. ಈಗ ಪ್ರಬುದ್ಧ ಭಾರತ ಕಟ್ಟಬೇಕಿದೆ ಎಂಬ ಸಂದೇಶ ನೀಡಲು ಸ್ವಾಮಿ ವಿವೇಕಾನಂದರು ಈ ಸಾಲುಗಳನ್ನು ಹೇಳಿದ್ದಾರೆ. ಸುದೀರ್ಘ ಕಾಲ ಬ್ರಿಟೀಷರು, ಪೋರ್ಚುಗಿಸರು, ಫ್ರೆಂಚರು ದೌರ್ಜನ್ಯ ನಡೆಸಿದರು. ಅದರಲ್ಲೂ ಬ್ರಿಟಿಷರು ದೊಡ್ಡ ಮಟ್ಟದ ದೌರ್ಜನ್ಯ ನಡೆಸಿದರು ಎಂದು ಕಿಡಿಕಾರಿದರು.

ನಮ್ಮ ಶಿಕ್ಷಣ ಪದ್ಧತಿಯನ್ನು ಮಕಾಲೆ ವ್ಯವಸ್ಥೆಯಿಂದ ಸಂಪೂರ್ಣವಾಗಿ ನಿರ್ನಾಮ ಮಾಡಿ ಭಾರತೀಯತೆ, ನಮ್ಮ ಅಸ್ಮಿತೆ, ನಮ್ಮತನ ಎಲ್ಲವನ್ನೂ ನಾಶ ಮಾಡಿ ನಮ್ಮ ಚಿಂತನೆ–ಚೈತನ್ಯವನ್ನು ಬ್ರಿಟಿಷರು ತುಳಿದಿಟ್ಟಿದ್ದರು. ಹಾಗಾಗಿ ನಮ್ಮತನ ಅರಿಯದೇ ಹತಾಶರಾಗಿದ್ದೆವು. ಅದಕ್ಕಾಗಿಯೇ 'ಮತ್ತೊಮ್ಮೆ ಏದ್ದೇಳಿ, ಸಾವಿರ ವರ್ಷಗಳ ಹಿಂದೇ ಇದ್ದಂತಹ ಪ್ರಬುದ್ಧ ಭಾರತವನ್ನು ಮರು ಸ್ಥಾಪಿಸಿ' ಎಂದು ವಿವೇಕಾನಂದರು ಸಂದೇಶ ನೀಡಿದ್ದಾರೆ. ಪರಕೀಯರ ದೌರ್ಜನ್ಯಕ್ಕೆ ಸಿಲುಕಿ ಭಾರತ ಅದರಿಂದ ಮುಕ್ತವಾಗಿ ಬದಲಾವಣೆ ಕಂಡಿದೆ. ಆದರೆ ಇನ್ನೂ ಬದಲಾಗಬೇಕಿದ್ದು, ಪ್ರಬುದ್ಧ ಭಾರತ ಕಟ್ಟಬೇಕಿದೆ ಎಂದರು. ಇದಕ್ಕೂ ಮುನ್ನ ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಡಾ. ಎಸ್.ಪಿ.ಯೋಗಣ್ಣ ಪ್ರಸ್ತಾವಿಕವಾಗಿ ಮಾತನಾಡಿ, ಶ್ರೀ ರಾಮಕೃಷ್ಣ ಪರಮಹಂಸರು ಹಾಗೂ ವಿವೇಕಾನಂದರು ಆಧ್ಯಾತ್ಮಿಕ ಜಗತ್ತಿನ ಮಹಾನ್ ಚೇತನಗಳು. ಪ್ರತಿಷ್ಠಾನದ ಮೂಲಕ ವರ್ಷವಿಡೀ ಆಧ್ಯಾತ್ಮಿಕ ಚಿಂತನೆಗಳ ಕುರಿತ ಕಾರ್ಯಕ್ರಮಗಳನ್ನು ನಡೆಸಲು ತೀರ್ಮಾನಿಸಲಾಗಿದೆ. ಈ ವರ್ಷದಿಂದ ಜನ್ಮದಿನೋತ್ಸವದಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರಶಸ್ತಿಯನ್ನು ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ಕೊಡಮಾಡಲಾಗುತ್ತಿದೆ ಎಂದು ತಿಳಿಸಿದರು.

ಇದೇ ವೇಳೆ ಪ್ರತಿಷ್ಠಾನದ ಅಧ್ಯಕ್ಷರೂ ಆದ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಸಂಗೀತ ಕಲಾವಿದೆ ರಮಾಮಣಿ ಸತ್ಯನಾರಾಯಣರಾವ್ ಮತ್ತು ಸಮಾಜ ಸೇವಕ ಎಂ.ಡಿ.ಕಿಣಿ ಅವರಿಗೆ 'ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರಶಸ್ತಿ' ಪ್ರದಾನ ಮಾಡಿ ಗೌರವಿಸಲಾಯಿತು. ಅಲ್ಲದೆ, ಶ್ರೀರಾಮಕೃಷ್ಣ ಪರಮಹಂಸರ ರಥೋತ್ಸವವೂ ಜರುಗಿತು.

ಶ್ರೀ ರಾಮಕೃಷ್ಣ ವಿದ್ಯಾಶಾಲಾ ಕರೆಸ್ಪಾಂಡೆಂಟ್ ಸ್ವಾಮಿ ಯುಕ್ತೇಶಾನಂದ ಅವರು ಸಮಾರಂಭ ಉದ್ಘಾಟಿಸಿದರು. ಇದಕ್ಕೂ ಮುನ್ನ ಶ್ರೀ ರಾಮಕೃಷ್ಣ ಪರಮಹಂಸ ವೃತ್ತದಲ್ಲಿ ಶ್ರೀ ರಾಮಕೃಷ್ಣ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಂಸದ ಪ್ರತಾಪ್ ಸಿಂಹ ಉಪಸ್ಥಿತರಿದ್ದರು. ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಸರ್ವಜಯಾನಂದ, ಮೈಸೂರು ಮಹಾನಗರ ಪಾಲಿಕೆ ವಲಯ 3ರ ಎಸಿ ಸತ್ಯಮೂರ್ತಿ, ಸಮಾಜ ಸೇವಕ ರಘುರಾಮ ವಾಜಪೇಯಿ, ನಗರಪಾಲಿಕೆ ಮಾಜಿ ಸದಸ್ಯೆ ಲಕ್ಷ್ಮಿಕಿರಣ್, ಮುಖಂಡ ಕೆಜಿ ಕೊಪ್ಪಲು ರಾಜಣ್ಣ ಮತ್ತಿತರರು ಹಾಜರಿದ್ದರು.

ಶ್ರೀ ರಾಮಕೃಷ್ಣ ಪರಮಹಂಸರ ಭಕ್ತಿ ಭಾವದ ರಥೋತ್ಸವ



ಮೈಸೂರಿನ ರಾಮಕೃಷ್ಣನಗರದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ರಥೋತ್ಸವ ಭಕ್ತಿ–ಭಾವದಿಂದ ನೆರವೇರಿತು. ರಾಮಕೃಷ್ಣ ವಿದ್ಯಾಶಾಲಾ ಕರೆಸ್ಪಾಂಡೆಂಟ್ ಸ್ವಾಮಿ ಯುಕ್ತೇಶಾನಂದಜೀ, ಸ್ವಾಮಿ ಪವಿತ್ರ ಚೈನತ್ಯ, ಸ್ವಾಮಿ ವಿಜಯರಾಮನ್, ಶ್ರೀ ರಾಮಕೃಷ್ಣ ಪರಮಹಂಸರ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಡಿ.ಮಾದೇಗೌಡ ಮತ್ತಿತರರಿದ್ದರು.

ಮೈಸೂರು, ಫೆ.22(ಎಂಕೆ)–ಮೈಸೂರಿನ ರಾಮಕೃಷ್ಣನಗರದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ರಥೋತ್ಸವ ಭಕ್ತಿ–ಭಾವದಿಂದ ಗುರುವಾರ ನೆರವೇರಿತು. ಶ್ರೀ ರಾಮಕೃಷ್ಣ ಪರಮಹಂಸರ ಸೇವಾ ಪ್ರತಿಷ್ಠಾನದ ವತಿಯಿಂದ ಶ್ರೀ ರಾಮಕೃಷ್ಣ ಪರಮಹಂಸರ ಜನ್ಮದಿನೋತ್ಸವದ ಅಂಗವಾಗಿ ರಾಮಕೃಷ್ಣ ವೃತ್ತಿದಲ್ಲಿ ಹಮ್ಮಿಕೊಂಡಿದ್ದ ರಥೋ ತ್ಸವಕ್ಕೆ ರಾಮಕೃಷ್ಣ ವಿದ್ಯಾಶಾಲಾ ಕರೆಸ್ಪಾಂಡೆಂಟ್ ಸ್ವಾಮಿ ಯುಕ್ತೇಶಾನಂದಜೀ ಶ್ರೀ ರಾಮಕೃಷ್ಣ ಪರಮಹಂಸರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ರಾಮಕೃಷ್ಣ ವೃತ್ತದಿಂದ ಆರಂಭವಾದ ರಥೋತ್ಸವ ಮಂಗಳ ವಾದ್ಯ, ಬ್ಯಾಂಡ್ ಮೇಳ, ತಮಟೆ, ನಗಾರಿ, ಜನಪದ ಮೇಳಗಳು, ರಾಮಕೃಷ್ಣ ವಿದ್ಯಾಕೇಂದ್ರದ ವಿದ್ಯಾರ್ಥಿಗಳು ಹಾಗೂ ಸುಯೋಗ್ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳೊಡಗೂಡಿ ರಾಮಕೃಷ್ಣನಗರದ ಐ ಬ್ಲಾಕ್‌ನ ಪ್ರಮುಖ ಬೀದಿಗಳು, ಗದಾಧರ ವೃತ್ತದ ಮಾರ್ಗವಾಗಿ ವಾಪಸ್ ರಾಮಕೃಷ್ಣ ವೃತ್ತಕ್ಕೆ ತಲುಪಿ ಸಂಪನ್ನಗೊಂಡಿತು.

ಮುಂಜಾನೆ ಆರತಿ: ಇದಕ್ಕೂ ಮೊದಲು ಮುಂಜಾನೆ ರಾಮಕೃಷ್ಣ ಪರಮಹಂಸರ ಪ್ರತಿಮೆಗೆ ರಾಮಕೃಷ್ಣ ಆಶ್ರಮದ ಸ್ವಾಮಿ ಪ್ರಮಥಾದಿಪಾನಂದ ಅವರು ಆರತಿ ಮಾಡಿದರು. ಭಜನಾ ಕಾರ್ಯಕ್ರಮ ನಡೆಯಿತು. ರಥೋತ್ಸವದಲ್ಲಿ ಸ್ವಾಮಿ ಪವಿತ್ರ ಚೈನತ್ಯ, ಸ್ವಾಮಿ ವಿಜಯರಾಮನ್, ಶ್ರೀ ರಾಮಕೃಷ್ಣ ಪರಮಹಂಸರ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಡಿ.ಮಾದೇಗೌಡ, ಉಪಾಧ್ಯಕ್ಷರಾದ ಎಂ.ಬಸವಣ್ಣ, ಜಿ.ಚಂದ್ರಶೇಖರ, ಕಾರ್ಯದರ್ಶಿ ಕೆ. ಕೆಂಪಲಿಂಗರಾಜು, ಶ್ರೀ ರಾಮಕೃಷ್ಣ ಪರಮಹಂಸರ ಸೇವಾ ಸಂಘದ ಅಧ್ಯಕ್ಷ ಪಾಪೇಗೌಡ, ಕಾರ್ಯದರ್ಶಿ ಎಂ.ದೊರೆರಾಜು, ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಚಂದ್ರಶೇಖರ್, ಎಸ್.ಪುರುಷೋತ್ತಮ, ಎಚ್.ಜೆ.ಬಸವಲಿಂಗಪ್ಪ, ಡಾ.ವಿಷಕಂಠ, ಮತ್ತಿತರರು ಭಾಗವಹಿಸಿದ್ದರು.

ಮುದ್ದಹನುಮೇಗೌಡ ಕಾಂಗ್ರೆಸ್‌ಗೆ ಅಧಿಕೃತ ಸೇರ್ಪಡೆ



ಬೆಂಗಳೂರು, ಫೆ.22– ಮಾಜಿ ಸಂಸದ ಮುದ್ದಹನುಮೇಗೌಡ ಕೊನೆಗೂ ಕಾಂಗ್ರೆಸ್ ಪಕ್ಷಕ್ಕೆ ಅಧಿಕೃತವಾಗಿ ಸೇರ್ಪಡೆಯಾಗಿದ್ದಾರೆ. ಗುರುವಾರ ಕೆಪಿಸಿಸಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮರಳಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ ಗೊಂಡ ಅವರನ್ನು ಪಕ್ಷದ ಬಾವುಟ ನೀಡಿ ಸಿಎಂ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಬರಮಾಡಿಕೊಂಡರು.

ಬಳಿಕ ಮಾತನಾಡಿದ ಮುದ್ದಹನುಮೇಗೌಡ, ನಾನು ಪಕ್ಷಾಂತರ ಆಗಿದ್ದಕ್ಕೆ ನನಗೆ ಮುಜುಗರ ಆಗಿದೆ. ಚುನಾವಣೆಯಲ್ಲಿ ಸ್ಪರ್ಧೆ ಮಾಡುವ ಉದ್ದೇಶದಿಂದ ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರ್ಪಡೆಗೊಂಡಿದ್ದೆ. ತಪ್ಪಿನ ಅರಿವಾಗಿ, ಯಾವ ಪಕ್ಷ ನನಗೆ ರಾಜಕೀಯ ಜೀವ ಕೊಟ್ಟಿದೆ ಆ ಪಕ್ಷದಲ್ಲಿ ಸೇವೆ ಸಲ್ಲಿಸಬೇಕು ಎಂದು ಕಾಂಗ್ರೆಸ್‌ಗೆ ಮರಳಿ ಸೇರ್ಪಡೆ ಆಗುತ್ತಿದ್ದೇನೆ.

ಸಾರ್ವಜನಿಕ ಬದುಕಿನಲ್ಲಿ ಸ್ವಲ್ಪ ಹೆಸರು ಉಳಿಸಿಕೊಳ್ಳಬೇಕು. ನಾನು ಕಾಂಗ್ರೆಸ್ ಪಕ್ಷಕ್ಕೆ ಅಭಾರಿಯಾಗಿದ್ದೇನೆ. ಕಾಂಗ್ರೆಸ್ ಪಕ್ಷದಲ್ಲಿ ಮುಂದಿನ ಸಾರ್ವಜನಿಕ ಬದುಕು ನಡೆಸುತ್ತೇನೆ ಎಂದರು.

ರಾಜಕೀಯಕ್ಕೆ ಬರಲು ನನಗೆ ಭಯವೇನಿಲ್ಲ!

ಡಾ.ಸಿ.ಎನ್.ಮಂಜುನಾಥ್ ಅಭಿಮತ



ಮೈಸೂರು, ಫೆ.22(ಎಂಕೆ)– ರಾಜಕೀಯಕ್ಕೆ ಬರಲು ಭಯವೇನಿಲ್ಲ, ಕುಟುಂಬದೊಂದಿಗೆ ಚರ್ಚಿಸಿ ಇನ್ನೂ ತೀರ್ಮಾನಿಸಿಲ್ಲ ಎಂದು ಹೃದ್ರೋಗ ತಜ್ಞ ಡಾ.ಸಿ.ಎನ್. ಮಂಜುನಾಥ್ ಹೇಳಿದರು.

ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದ ವೇಳೆ ಲೋಕಸಭಾ ಚುನಾವಣೆಗೆ ಸ್ಪರ್ಧೆ ಸಂಬಂಧ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಅವರು, ರಾಜಕೀಯಕ್ಕೆ ಬರುವ ವಿಚಾರದಲ್ಲಿ ನನ್ನಲ್ಲಿ ಇನ್ನೂ ಗೊಂದಲಗಳಿವೆ. ಪತ್ನಿ, ಮಕ್ಕಳು ಹಾಗೂ ಕುಟುಂಬದ ಎಲ್ಲರೊಂದಿಗೆ ಇನ್ನೂ ಚರ್ಚಿಸಬೇಕಿದೆ. ಸದ್ಯಕ್ಕೆ ಯಾವುದೇ ತೀರ್ಮಾನವನ್ನೂ ಮಾಡಿಲ್ಲ ಎಂದು ತಿಳಿಸಿದರು.

ಜನರು ಹಾಗೂ ಮಾಧ್ಯಮದವರು ನನ್ನ ಮೇಲಿನ ಪ್ರೀತಿಯಿಂದ ನನ್ನ ರಾಜಕೀಯ ಪ್ರವೇಶದ ಬಗ್ಗೆ ಮಾತನಾಡುತ್ತಿದ್ದಾರೆ. ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಮಾಡಿದ ಒಳ್ಳೆಯ ಕೆಲಸದ ನಿರೀಕೆಯಲ್ಲೇ ಈ ಒತ್ತಾಯಗಳು ಕೇಳಿಬರುತ್ತಿವೆ. ನನಗೆ ಬೀದಿ ರಾಜಕೀಯ ಇಷ್ಟವಿಲ್ಲ. ಅಭಿವೃದ್ಧಿಯ ರಾಜಕೀಯದ ಬಗ್ಗೆ ಆಸಕ್ತಿ ಇದೆ. ಆದರೆ, ರಾಜಕಾರಣಕ್ಕೆ ಬರಬೇಕೋ, ಬೇಡವೋ ಎನ್ನುವ ಗೊಂದಲದಲ್ಲಿದ್ದೇನೆ. ಹಾಗೆಂದ ಮಾತ್ರಕ್ಕೆ ನಾನು ಭಯ ಪಡುತ್ತಿದ್ದೇನೆ ಎಂದರ್ಥವಲ್ಲ ಎಂದು ಪ್ರತಿಕ್ರಿಯಿಸಿದರು.

ದೇವೇಗೌಡರಲ್ಲ, ವಿಶ್ವನಾಥ್‌ರದ್ದು ಚಮಚಾಗಿರಿ

ಬಿಜೆಪಿಯಿಂದ ಪರಿಷತ್ ಸ್ಥಾನ ಪಡೆದು ಕಾಂಗ್ರೆಸ್ ಹೊಗಳುತ್ತಿರುವ ವಿಶ್ವನಾಥ್ ನಡೆ ಚಮಚಾಗಿರಿ



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಎನ್.ಆರ್.ರವಿಚಂದ್ರೇಗೌಡ.

ಮೈಸೂರು, ಫೆ.22(ಜಿಎ)–ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಚಮಚಾಗಿರಿ ಮಾಡುತ್ತಿದ್ದಾರೆ ಎಂದಿರುವ ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಬಿಜೆಪಿಯಿಂದ ಪರಿಷತ್ ಸ್ಥಾನ ಪಡೆದು ಕಾಂಗ್ರೆಸ್ ಪಕ್ಷವನ್ನು ಹೊಗಳುವ ಮೂಲಕ ಚಮಚಾಗಿರಿ ಮಾಡುತ್ತಿದ್ದಾರೆ ಎಂದು ಜೆಡಿಎಸ್ ರಾಜ್ಯ ವಕ್ತಾರ ಎನ್.ಆರ್. ರವಿಚಂದ್ರೇಗೌಡ ವಾಗ್ದಾಳಿ ನಡೆಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಚ್.ಡಿ.ದೇವೇಗೌಡರು ನನಗೆ ರಾಜಕೀಯ ಪುನರ್ಜನ್ಮ ನೀಡಿದರು ಎಂದು ಹೇಳಿಕೆ ನೀಡಿದ್ದ ವಿಶ್ವನಾಥ್ ನಿಯತ್ತಿಲ್ಲದ ರಾಜಕಾರಣಿ ಎಂಬುದನ್ನು ಸಾಬೀತುಪಡಿಸಿದ್ದಾರೆ ಎಂದರು.

ಎಲ್ಲಾ ಪಕ್ಷಗಳಿಂದ ತಿರಸ್ಕೃತಗೊಂಡಿರುವ ಅವರು ತಮ್ಮ ಕೊಳಕು ಮನಸ್ಥಿತಿಯನ್ನು ಪ್ರದರ್ಶಿಸಿದ್ದಾರೆ. ಬಿಜೆಪಿಯಿಂದ ಪರಿಷತ್ ಸ್ಥಾನ ಪಡೆದು ಕಾಂಗ್ರೆಸ್ ಅನ್ನು ಹೊಗಳುತ್ತಿರುವ ಅವರ ನಡೆಯೇ ಚಮಚಾಗಿರಿ ಎಂದು ಅವರು ಕಿಡಿಕಾರಿದರು.

ಮಂಡ್ಯ ಲೋಕಸಭೆಯಲ್ಲಿ ಸ್ಪರ್ಧೆ ಮಾಡಬಹುದು ಎಂಬ ಕಾರಣಕ್ಕೆ ಡಾ.ಸಿ.ಎನ್. ಮಂಜುನಾಥ್ ಅವರು ನಿರ್ಮಿಸಿದ ಜಯದೇವ ಆಸ್ಪತ್ರೆ ಕಾಮಗಾರಿ ತನಿಖೆ ಮಾಡುತ್ತೇವೆ ಎನ್ನುತ್ತಿರುವ ಕಾಂಗ್ರೆಸ್ ಪಕ್ಷದ ನಿಲುವು ನಾಚಿಕೆಗೇಡಿನ ಸಂಗತಿಯಾಗಿದೆ. ಪಕ್ಷವು ಮೈಸೂರು, ಹಾಸನ, ಮಂಡ್ಯ, ತುಮಕೂರು ಮತ್ತು ಕೋಲಾರದಲ್ಲಿ ಸ್ಪರ್ಧಿಸುವ ಉದ್ದೇಶ ಹೊಂದಿದ್ದು, ಪ್ರಯತ್ನ ನಡೆಸಿದ್ದೇವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಮುಖಂಡರಾದ ಜಯರಾಮ್, ಉಮೇಶ್, ಮಂಜುನಾಥ್, ಎಂ.ಎನ್. ರಾಮು, ಮುದ್ದುರಾಜ್ ಉಪಸ್ಥಿತರಿದ್ದರು.

ನಾಳೆ ಕನ್ನಡ ಗೀತೋತ್ಸವ, ಮಹಾರತ್ನ ಪ್ರಶಸ್ತಿ ಪ್ರದಾನ ಸಮಾರಂಭ



ಸುದ್ದಿಗೋಷ್ಠಿಯಲ್ಲಿ ಮೈಸೂರು ಮಹಾಲಿಂಗು ಮಾತನಾಡಿದರು.

ಮೈಸೂರು, ಫೆ.22(ಜಿಎ)–ಮೈಸೂರಿನ ಮಹಾರತ್ನ ಟ್ರಸ್ಟ್‌ನ ಎರಡನೇ ವಾರ್ಷಿಕೋತ್ಸವದ ಅಂಗವಾಗಿ ಕನ್ನಡ ಗೀತೋತ್ಸವ ಮತ್ತು ಮಹಾರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಫೆ24ರಂದು ಜಗನ್ಮೋಹನ ಅರಮನೆಯಲ್ಲಿ ಅಯೋಜಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಮೈಸೂರು ಮಹಾಲಿಂಗು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ರಾಜ್ಯ ಮಟ್ಟದ ಭಜನಾ ಸ್ಪರ್ಧೆ ಆಯೋಜಿಸಿದ್ದು, ಸ್ಪರ್ಧೆಗೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಚಾಲನೆ ನೀಡಲಿದ್ದಾರೆ. ಅಧ್ಯಕ್ಷತೆಯನ್ನು ಟ್ರಸ್ಟ್‌ನ ಗೌರವಾಧ್ಯಕ್ಷ ಸಿ.ವಿ.ಪಾರ್ಥಸಾರಥಿ ವಹಿಸಲಿದ್ದಾರೆ. ಆಕಾಶವಾಣಿ ಹಿರಿಯ ಉದ್ಘೋಷಕ ಡಾ.ಮೈಸೂರು ಉಮೇಶ್ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದಾರೆ. ಆರ್.ಮಹೇಂದ್ರ, ವಿದುಷಿ ಇಂದ್ರಾಣಿ ಅನಂತರಾಮ್ ಮತ್ತು ರಾಜೇಶ್ ಪಡಿಯಾರ್ ಸ್ಪರ್ಧೆಯ ತೀರ್ಪುಗಾರರಾಗಿದ್ದಾರೆ ಎಂದು ತಿಳಿಸಿದರು.

ನಂತರ ಸಂಜೆ 6ಗಂಟೆಗೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಲಿದ್ದಾರೆ. ಹಿರಿಯ ಸಾಹಿತಿ ಪ್ರೊ.ಮೈಸೂರು ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ನಟ ಶಂಕರ್ ಅಶ್ವಥ್, ಸಾಹಿತಿ ಮ.ನ.ಲತಾ ಮೋಹನ್ ಆಗಮಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಭಜನಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ನೀಡಲಾಗುತ್ತದೆ. ಹಾಗೇ ಖ್ಯಾತ ಹಿಂದೂಸ್ಥಾನಿ ಗಾಯಕ ಪಂಡಿತ್ ವೀರಭದ್ರಯ್ಯ ಹಿರೇಮಠ್ ಮತ್ತು ಸಾಹಿತಿ ಡಾ.ಜಯಪ್ಪ ಹೊನ್ನಾಳಿ ಅವರುಗಳಿಗೆ ಮಹಾರತ್ನ ಪ್ರಶಸ್ತಿ ನೀಡಿ ಅಭಿನಂದಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಮಹಾರತ್ನ ಟಸ್ಟ್‌ನ ಕೌಸಲ್ಯ, ರೂಪ, ಮಂಜುಳ, ಅಂಡಾಳ್ ಗೋಪಾಲ್, ಸಿ.ವಿ.ಪಾರ್ಥಸಾರಥಿ ಉಪಸ್ಥಿತರಿದ್ದರು.

ಫೆ.25ರಂದು ಮೈಸೂರಲ್ಲಿ ಈಡಿಗ ಸಮಾಜದ 26 ಒಳಪಂಗಡಗಳ ಸಹಕಾರ ಸಂಘಗಳ ಪ್ರಮುಖರ ಸಮಾವೇಶ



ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿರುವ ಸಂಘದ ಪದಾಧಿಕಾರಿಗಳನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಫೆ.22(ಜಿಎ)–ಬ್ರಹ್ಮಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಸಂಘದ ವತಿಯಿಂದ ಜೆ.ಪಿ.ನಾರಾಯಣಸ್ವಾಮಿ ಜಯಂತ್ಯುತ್ಸವದ ಅಂಗವಾಗಿ ಈಡಿಗ, ಬಿಲ್ಲವ, ನಾಮಧಾರಿ, ದೀವರು, ತೀಯ, ಇಳವ, ನಾಡರ್, ಜೈಸ್ವಾಲ್ ಮತ್ತು ಗೌಡ್ ಸಮಾಜದ 26 ಒಳಪಂಗಡಗಳ ಸಹಕಾರ ಸಂಘಗಳ ಪ್ರಮುಖರ ಸಮಾವೇಶವನ್ನು ಫೆ.25ರಂದು ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಸೈದಪ್ಪ ಕೆ.ಗುತ್ತೇದಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11 ಗಂಟೆಗೆ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳಿ ಅಧ್ಯಕ್ಷ ವಿ.ರಾಜು ಸಮಾವೇಶವನ್ನು ಉದ್ಘಾಟಿಸಲಿದ್ದಾರೆ.

ಕುಳಾಯಿ ಫೌಂಡೇಷನ್‌ನ ಅಧ್ಯಕ್ಷೆ ಪ್ರತಿಭಾ ಕುಳಾಯಿ, ಜೆ.ಪಿ.ನಾರಾಯಣ್ ಪ್ರತಿಷ್ಠಾನದ ಸಂಸ್ಥಾಪಕ ಜೆ.ಪಿ.ಸುಧಾ ಕರ್ ನಾರಾಯಣಸ್ವಾಮಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವರು ಎಂದರು. ಸಮಾವೇಶದಲ್ಲಿ ಭಾರತ್ ಕೋ ಆಪರೇಟಿವ್ ಬ್ಯಾಂಕ್, ಸುಧಾ ಕೋ ಆಪರೇಟಿವ್ ಬ್ಯಾಂಕ್, ಆತ್ಮಶಕ್ತಿ ವಿವಿಧೋದ್ದೇಶ ಸಹಕಾರ ಸಂಘ, ಸಹಕಾರಿ ಕ್ಷೇತ್ರದ ಪ್ರಮುಖರಾದ ಎನ್.ವಿ.ಕುಮಾರ್ ಮತ್ತು ಅಶೋಕ್ ಪೂಜಾರ್ ಅವರಿಗೆ ಜೆ.ಪಿ.ನಾರಾಯಣಸ್ವಾಮಿ ಸಹಕಾರ ರತ್ನ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ರಂಗಕರ್ಮಿ ರಾಜಶೇಖರ ಕದಂಬ, ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂತರಾಜ್ ಆರ್ಯ ಉಪಸ್ಥಿತರಿದ್ದರು.



ಪ್ರಧಾನಮಂತ್ರಿ ಶಕ್ತಿ ನಿರ್ಮಾಣ್–ಮಧ್ಯಾಹ್ನ ಉಪಾಹಾರ ಯೋಜನೆಯ–ಅಕ್ಷರ ದಾಸೋಹ ಕಾರ್ಯಕ್ರಮದಡಿ ರಾಜ್ಯ ಸರ್ಕಾರದ ನೂತನ ಕಾರ್ಯಕ್ರಮವಾದ ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷದ ಅಂಗವಾಗಿ ಶಾಲಾ ಶಿಕ್ಷಣ ಇಲಾಖೆ, ಶ್ರೀ ಸತ್ಯಸಾಯಿ ಅನ್ನಪೂರ್ಣ ಟ್ರಸ್ಟ್ ಮತ್ತು ಕೆಎಂಎಫ್ ಸಂಸ್ಥೆ ಸಹಭಾಗಿತ್ವದಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1ರಿಂದ10ನೇ ತರಗತಿಯ ವಿದ್ಯಾರ್ಥಿಗಳಿಗೆ ಸಾಯಿ ಶ್ಯೂರ್ ರಾಗಿ ಹೆಲ್ತ್ ಮಿಕ್ಸ್ ವಿತರಣಾ–ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ಜಿಪಂ ಉಪ ಕಾರ್ಯದರ್ಶಿ ಸವಿತಾ ಉದ್ಘಾಟಿಸಿದರು. ಈ ವೇಳೆ ಶಾಲಾ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಡಾ.ಪಾಂಡುರಂಗ, ಸಿಟಿಇ ಪ್ರಾಂಶುಪಾಲರಾದ ಗೀತಾಂಬ, ಜಿಲ್ಲಾ ಉಪ ನಿರ್ದೇಶಕ ಹೆಚ್.ಕೆ.ಪಾಂಡು, ಜಿಲ್ಲಾ ಅಕ್ಷರ ದಾಸೋಹ ಅಧಿಕಾರಿ ರೇವಣ್ಣ, ಉತ್ತರ ವಲಯದ ಶಿಕ್ಷಣಾಧಿಕಾರಿ ಕೃಷ್ಣ, ಸಹಾಯಕ ನಿರ್ದೇಶಕ ಲಿಂಗರಾಜು, ಬಿಆರ್‌ಪಿ, ಸಿಆರ್‌ಪಿ, ಶಿಕ್ಷಕರು, ಎಸ್‌ಡಿಎಂಸಿ ಅಧ್ಯಕ್ಷ ಪಂಚಲಿಂಗು, ಸದಸ್ಯರು, ಪೋಷಕರು ಇದ್ದರು.

ಸಿದ್ದರಾಮಯ್ಯ ಲೇಬರ್ ವಾರ್ಡ್‌ನಲ್ಲಿ ಹೀಗೆ ಕಿರುಚಾಡಿದರೆ ಹೆರಿಗೆಯೇ ಆಗಿ ಬಿಡುತ್ತದೆ...!

ಸಿದ್ದರಾಮಯ್ಯ ಭಾಷಣದ ಬಗ್ಗೆ ಸಂಸದ ಶ್ರೀನಿವಾಸ ಪ್ರಸಾದ್ ಲೇವಡಿ

- ಜಮೀರ್ ಅಹಮದ್‌ಗೂ ಸಿದ್ದರಾಮಯ್ಯಗೂ ವ್ಯತ್ಯಾಸವಿಲ್ಲ; ಅವರು ಬಾವಿಯಲ್ಲಿರುವ ಕಪ್ಪೆ
- ಗ್ಯಾರಂಟಿ ಬಿಟ್ಟು ಬೇರೇನೂ ಸಾಧನೆ ಇಲ್ಲ; ಮೋದಿ ಸಾಗರವಿದ್ದಂತೆ, ಜಾಗತಿಕ ನಾಯಕ

ಮೈಸೂರು, ಫೆ.22(ಬಿಎಲ್‌ಯು)–ಮುಖ್ಯಮಂತ್ರಿ ಸಿದ್ದರಾಮಯ್ಯ ಬರೀ ಗ್ಯಾರಂಟಿ ಹೇಳಿಕೊಂಡು ಕಿರುಚಾಡುತ್ತಿದ್ದು, ಲೇಬರ್ ವಾರ್ಡ್ ಬಳಿ ಹೀಗೆ ಕಿರುಚಾಡಿದರೆ ಹೆರಿಗೆಯೇ ಆಗಿ ಬಿಡುತ್ತದೆ ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಲೇವಡಿ ಮಾಡಿದರು.

ಮೈಸೂರಿನ ಜಯಲಕ್ಷ್ಮಿಪುರಂನ ತಮ್ಮ ನಿವಾಸದಲ್ಲಿ ಗುರುವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಸಿದ್ದರಾಮಯ್ಯ ಹೀಗೆ ಕಿರುಚಾಡಿದರೆ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಒಂದು ಸ್ಥಾನ ಕೂಡ ಗೆಲ್ಲುವುದಿಲ್ಲ ಎಂದು ಎಚ್ಚರಿಸಿದರು.

ಮುಖ್ಯಮಂತ್ರಿ ಆದವರಿಗೆ ಏನು ಮಾತನಾಡುತ್ತಿದ್ದೇನೆ ಎಂಬ ಅರಿವು ಇರಬೇಕು. ಯಾವುದೇ ವಿಚಾರ ಮಾತನಾಡಬೇಕಿದ್ದರೂ ಅದಕ್ಕೆ ಒಂದು ವಿಧಾನ ಇರುತ್ತದೆ. ಅದು ಬಿಟ್ಟು ಕಿರುಚಾಡುವುದಲ್ಲ. ಸಿದ್ದರಾಮಯ್ಯ ಮಾತುಗಳನ್ನು ಕೇಳುತ್ತಿದ್ದರೆ ಆ ಮಿನಿಸ್ಟರ್ ಜಮೀರ್ ಅಹಮ್ಮದ್‌ಗೂ ಸಿದ್ದರಾಮಯ್ಯಗೂ ಯಾವುದೇ ವ್ಯತ್ಯಾಸ ಇಲ್ಲ ಅನ್ನಿಸುತ್ತದೆ ಎಂದರು.

ಸಿದ್ದರಾಮಯ್ಯ ಬಾವಿಯಲ್ಲಿರುವ ಕಪ್ಪೆ. ಗ್ಯಾರಂಟಿ ಯೋಜನೆಗಳೇ ಇವರ ಸಾಧನೆ. ಅಕ್ಕಿ ಕೊಟ್ಟೆ, ಬಸ್ ಹತ್ತಿ ಅಂತ ಎಲ್ಲೆ ಹೋದರೂ ಹೇಳುತ್ತಾರೆ. ಆದರೆ ಪ್ರಧಾನಮಂತ್ರಿ ನರೇಂದ್ರ ಮೋದಿ ಜಾಗತಿಕ ನಾಯಕ. ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿರುವ ನಾಯಕ. ನರೇಂದ್ರ ಮೋದಿಗೆ ಸಿದ್ದರಾಮಯ್ಯ ಸರಿಸಮನಾದ ನಾಯಕನಲ್ಲ. ಇಂತಹವರು ಮೋದಿ ಬಗ್ಗೆ ಟೀಕೆ ಮಾಡುತ್ತಾರೆ ಎಂದು ಶ್ರೀನಿವಾಸ ಪ್ರಸಾದ್ ಆಕ್ರೋಶ ವ್ಯಕ್ತಪಡಿಸಿದರು.

ನರೇಂದ್ರ ಮೋದಿ ಜೊತೆಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮ್ ಬಗ್ಗೆ ಕೂಡ ಇಲ್ಲಸಲ್ಲದ ಆರೋಪ ಮಾಡಿದ್ದಾರೆ. ಜಿಎಸ್‌ಟಿ ಪಾಲನ್ನು ಕೇಂದ್ರ ಸರ್ಕಾರ ಸಮರ್ಪಕವಾಗಿ ಹಂಚಿಕೆ ಮಾಡುತ್ತಿಲ್ಲ ಎಂದು ನಿರಾಧಾರ ಆಪಾದನೆ ಮಾಡುತ್ತಿದ್ದಾರೆ. ಇಂತಹ ಹೇಳಿಕೆಗಳನ್ನು ಜನರು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಇವರೇನೆ ಹೇಳಿದರೂ ಜನಾದೇಶವೇ ಅಂತಿಮ ಎಂದು ಹೇಳಿದರು.

ಡಾ.ಮಹದೇವಪ್ಪ ನಮ್ಮ ವಿರೋಧಿ: ಚಾಮರಾಜನಗರದಲ್ಲಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸ್ಪರ್ಧೆ ಬಗ್ಗೆ ಪ್ರತಿಕ್ರಿಯೆ ನೀಡಿದ ಶ್ರೀನಿವಾಸ ಪ್ರಸಾದ್, ಅವರು ನಮ್ಮ ವಿರೋಧಿಗಳು, ಅವರ ಬಗ್ಗೆ ನಾನು ಏನೂ ಮಾತನಾಡುವುದಿಲ್ಲ ಎಂದು ಶ್ರೀನಿವಾಸಪ್ರಸಾದ್ ಹೇಳಿದರು.



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಗುರುವಾರ ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಸಂಸದ ಶ್ರೀನಿವಾಸಪ್ರಸಾದ್ ಮನೆಗೆ ಭೇಟಿ ನೀಡಿ, ಲೋಕಸಭಾ ಚುನಾವಣೆ ಸಂಬಂಧ ಚರ್ಚೆ ನಡೆಸಿದರು. ಮಾಜಿ ಶಾಸಕ ಹರ್ಷವರ್ಧನ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಅವರನ್ನು ಚಿತ್ರದಲ್ಲಿ ಕಾಣಬಹುದು.

ಯಾರಿಗೆ ಟಿಕೆಟ್ ಕೊಟ್ಟರೂ ಹೊಂದಾಣಿಕೆಯಿಂದ ಕೆಲಸ ಮಾಡುತ್ತಾರೆ

ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ನನ್ನ ಇಬ್ಬರು ಅಳಿಯಂದಿರು ಆಕಾಂಕ್ಷಿಗಳಾಗಿದ್ದು, ಯಾರಿಗೆ ಟಿಕೆಟ್ ಕೊಟ್ಟರೂ ಹೊಂದಾಣಿಕೆಯಿಂದ ಕೆಲಸ ಮಾಡುತ್ತಾರೆ ಎಂದು ಸಂಸದ ಶ್ರೀನಿವಾಸ ಪ್ರಸಾದ್ ಸ್ಪಷ್ಟಪಡಿಸಿದರು.

ಅಲ್ಲಿ ನನ್ನ ಇಬ್ಬರು ಅಳಿಯಂದಿರು ಸೇರಿದಂತೆ ಹತ್ತು ಆಕಾಂಕ್ಷಿಗಳಿದ್ದಾರೆ. ಆದರೆ ಬಿಜೆಪಿ ಹೈಕಮಾಂಡ್ ಯಾರನ್ನು ಆಯ್ಕೆ ಮಾಡುತ್ತದೆ ಎಂಬುವುದನ್ನು ನೋಡಬೇಕು. ಆದರೆ ಟಿಕೆಟ್ ವಿಚಾರದಲ್ಲಿ ನನ್ನ ವೈಯಕ್ತಿಕ ಅಭಿಪ್ರಾಯವನ್ನು ವಿಜಯೇಂದ್ರರಿಗೆ ತಿಳಿಸಿದ್ದೇನೆ ಎಂದರು. ನಾನು ಚುನಾವಣೆಯಿಂದ ಮಾತ್ರವಲ್ಲದೆ ರಾಜಕೀಯದಿಂದಲೇ ನಿವೃತ್ತಿ ಘೋಷಿಸಿದ್ದೇನೆ. ಲೋಕಸಭಾ ಚುನಾವಣೆಯಲ್ಲಿ ನನ್ನ ಕುಟುಂಬಸ್ಥರೇ ಸ್ಪರ್ಧೆ ಮಾಡಿದರೂ ನಾನು ಪ್ರಚಾರಕ್ಕೆ ಹೋಗುವುದಿಲ್ಲ. ಆದರೆ ಬಿಜೆಪಿ ಬೆಂಬಲಿಸುವಂತೆ ಕರೆ ನೀಡುತ್ತೇನೆ ಎಂದು ಶ್ರೀನಿವಾಸಪ್ರಸಾದ್ ತಿಳಿಸಿದರು.

ನಾನು ರಾಜಕೀಯಕ್ಕೆ ಪಾದಾರ್ಪಣೆ ಮಾಡಿ 50 ವರ್ಷವಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಮಾರ್ಚ್ 17ರಂದು ಸಮಾರಂಭ ಆಯೋಜನೆ ಮಾಡಲಾಗಿದೆ. ಕ್ಷೇತ್ರಕ್ಕೆ ನಾನು ಮಾಡಿರುವ ಸ್ಮರಣೀಯ ಕೆಲಸ ಕಾರ್ಯಗಳನ್ನು ತಿಳಿಸುವ 'ನೆನಪು' ಪುಸ್ತಕವನ್ನು ಅಂದು ಬಿಡುಗಡೆ ಮಾಡಲಾಗುವುದು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ.ಚಂದ್ರಶೇಖರ ಕಂಬಾರ ಸೇರಿದಂತೆ ಹಲವು ಗಣ್ಯರು ಅಂದಿನ ಸಮಾರಂಭದಲ್ಲಿ ಭಾಗವಹಿಸುವರು. –ಶ್ರೀನಿವಾಸ ಪ್ರಸಾದ್.

ಜನ ಸೇವೆಗಾಗಿ ಟಿಕೆಟ್ ಕೇಳುತ್ತಿದ್ದೇನೆ

ಮೈಸೂರು, ಫೆ.22(ಬಿಎಲ್‌ಯು)–ಚಾಮರಾಜನಗರ ಕ್ಷೇತ್ರದಲ್ಲಿ ಮಾಡುತ್ತಿರುವ ಜನಸೇವೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಮಾಡಲು ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ಕೇಳುತ್ತಿದ್ದೇನೆ ಎಂದು ಶ್ರೀನಿವಾಸಪ್ರಸಾದ್ ಅಳಿಯ ಡಾ.ಮೋಹನ್ ತಿಳಿಸಿದರು.

ಕಳೆದ ಬಾರಿಯೇ ನಾನು ಟಿಕೆಟ್ ಕೇಳಿದ್ದೆ. ಆದರೆ ಅಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಸ್ಪರ್ಧೆ ಮಾಡಲು ಆಗಲಿಲ್ಲ. ಆದರೆ ಈಗಿನ ರಾಜಕೀಯ ಪರಿಸ್ಥಿತಿ ಬೇರೆ. ಈಗ ಟಿಕೆಟ್ ನೀಡುವಂತೆ ನಾನು ಸೇರಿದಂತೆ ಹತ್ತು ಅಭ್ಯರ್ಥಿಗಳು ಮನವಿ ಮಾಡಿದ್ದೇವೆ. ಬಿಜೆಪಿ ಹೈಕಮಾಂಡ್ ನನ್ನ ಮನವಿ ಪರಿಗಣಿಸುವ ವಿಶ್ವಾಸವಿದೆ ಎಂದರು.

ಕಳೆದ 7 ವರ್ಷದ ಅವಧಿಯಲ್ಲಿ ಚಾಮರಾಜನಗರ ಕ್ಷೇತ್ರದ ಜನರ ಕಷ್ಟಗಳಿಗೆ ನಾನು ಸ್ಪಂದಿಸಿದ್ದೇನೆ. ಕೋವಿಡ್ ಸಮಯದಲ್ಲಿ ಶಕ್ತಿ ಮೀರಿ ಕೆಲಸ ಮಾಡಿದ್ದೇನೆ. ಇದನ್ನು ಮನಗಂಡಿರುವ ಕ್ಷೇತ್ರದ ಜನರು ನನ್ನನ್ನು ಗೆಲ್ಲಿಸುತ್ತಾರೆ ಎಂಬ ವಿಶ್ವಾಸವಿದೆ ಎಂದು ಹೇಳಿದರು.

ದೇವಾಲಯಕ್ಕೆ ಕನ್ನ ಹಾಕುವ ಬದಲು ವಿಧಾನಸೌಧದಲ್ಲಿ ಹುಂಡಿ ಇಡಿ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವ್ಯಂಗ್ಯ

ಮೈಸೂರು, ಫೆ.22(ಬಿಎಲ್‌ಯು)– ದೇವಾಲಯಗಳಿಗೆ ಕನ್ನ ಹಾಕುವ ಬದಲು ವಿಧಾನಸೌಧದ ಮುಂದೆ ಒಂದು ಹುಂಡಿ ಇಟ್ಟು ಬಿಡಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ರಾಜ್ಯ ಕಾಂಗ್ರೆಸ್ ಸರ್ಕಾರದ ನಡೆ ಬಗ್ಗೆ ವ್ಯಂಗ್ಯವಾಡಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ವಿಧಾನಸೌಧದ ಮುಂದೆ ಹುಂಡಿ ಇಟ್ಟರೆ ದಾನಿಗಳು ಅಲ್ಲೇ ಬಂದು ದಾನ ಮಾಡುತ್ತಾರೆ ಎಂದು ಟೀಕಿಸಿದರು.

ರಾಜ್ಯ ಸರ್ಕಾರಿ ನೌಕರರಿಗೆ ಸಂಬಳ ಕೊಡಲು ಕಷ್ಟಪಡುವ ಪರಿಸ್ಥಿತಿ ಎದುರಾಗಿದೆ. ಇದರಿಂದ ಶ್ರೀಮಂತ ದೇವಾಲಯಗಳಿಗೆ ಕನ್ನ ಹಾಕಲು ರಾಜ್ಯ ಸರ್ಕಾರ ಮುಂದಾಗಿದೆ ಎಂದು ವಿಜಯೇಂದ್ರ ದೂರಿದರು.

ರಾಜ್ಯದ 224 ಕ್ಷೇತ್ರಗಳಿಗೆ ಒಂದೇ ಒಂದು ರೂಪಾಯಿ ಅನುದಾನವನ್ನು ಸರ್ಕಾರ ಕೊಡುತ್ತಿಲ್ಲ. ಇದರಿಂದ ಯಾವುದೇ ಪಕ್ಷದ ಶಾಸಕರಿಗೆ ವಿಧಾನಸಭಾ ಅಧಿವೇಶನದಲ್ಲಿ ಭಾಗಿಯಾಗಲು ಆಸಕ್ತಿ ಇಲ್ಲ. ಇದು ಕರ್ನಾಟಕದ ಹಣೆಬರಹವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

1.25 ಕೋಟಿ ಕುಟುಂಬ ಬಡತನ ರೇಖೆಯಿಂದ ಹೊರಗೆ ಬಂದಿದೆ ಎಂದು ಸುಳ್ಳು ವಿವರವನ್ನು ಬಜೆಟ್‌ನಲ್ಲಿ ಹೇಳಿದ್ದಾರೆ. ಇಂತಹ ಹಲವು ಸುಳ್ಳುಗಳನ್ನು ಹೇಳಿ ಜನರನ್ನು ನಂಬಿಸಲು ಮುಂದಾಗಿದ್ದಾರೆ. ಆದರೆ ರಾಜ್ಯದ ಜನತೆಗೆ ವಾಸ್ತವತೆಯ ಅರಿವಾಗಿದೆ ಎಂದು ಹೇಳಿದರು.

ನಾಡಗೀತೆ ವಿವಾದದಿಂದ ಸರ್ಕಾರದ ಅಜೆಂಡಾ ಏನು ಎಂಬುವುದು ಸ್ಪಷ್ಟವಾಗುತ್ತದೆ. ಈ ಮೂಲಕ ಸಿದ್ದರಾಮಯ್ಯ ಕನ್ನಡ ನಾಡು ನುಡಿಗೆ ಧಕ್ಕೆ ತರುತ್ತಿದ್ದಾರೆ ಎಂದು ವಿಜಯೇಂದ್ರ ಆಪಾದಿಸಿದರು.

ಮೈಸೂರಿಗೆ ಆಗಮಿಸಿದ ರಾಮಯಾತ್ರೆ



ದೆಹಲಿಯಿಂದ ಹೊರಟಿರುವ ರಾಮಯಾತ್ರೆ ಮೈಸೂರಿಗೆ ಆಗಮಿಸಿತ್ತು.

ಮೈಸೂರು, ಫೆ.22 (ಬಿಎಲ್‌ಯು)– ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವಾಗಿರುವ ಹಿನ್ನೆಲೆ ದೇಶದಾದ್ಯಂತ ಪ್ರಚಾರ ಮಾಡಲು ದೆಹಲಿಯಿಂದ ಹೊರಟಿರುವ ರಾಮಯಾತ್ರೆ ಗುರುವಾರ ಮೈಸೂರಿಗೆ ಆಗಮಿಸಿತು. ಡಾ.ಸಚಿನ್ ಸನಾತಿನಿ ನೇತೃತ್ವದಲ್ಲಿ 20ಕ್ಕೂ ಹೆಚ್ಚು ಮಂದಿ ಮೈಸೂರಿಗೆ ಆಗಮಿಸಿ ಇಂದು ರಾಮಮಂದಿರದ ಪೌರಾಣಿಕ ಮಹತ್ವವನ್ನು ಪ್ರಚಾರ ಮಾಡಿದರು.

ಈಗಾಗಲೇ 15 ಸಾವಿರ ಕಿಲೋಮೀಟರ್ ಕ್ರಮಿಸಿ ಮೈಸೂರಿಗೆ ಆಗಮಿಸಿರುವ ಯಾತ್ರೆ ಗುರುವಾರ ತಮಿಳುನಾಡಿನ ತಿರುಚ್ಚಿಯತ್ತ ಪ್ರಯಾಣ ಬೆಳೆಸಿತು. ತಿರುಚಿಯಿಂದ ಕನ್ಯಾಕುಮಾರಿಗೆ ತೆರಳಿ, ಶ್ರೀಲಂಕಾದಲ್ಲಿ ಕೂಡ ರಾಮಮಂದಿರದ ಬಗ್ಗೆ ಪ್ರಚಾರ ಮಾಡಲಿದ್ದಾರೆ.

ಮೈಸೂರಲ್ಲಿ ನಾಳೆ ಅಪ್ಪು ನಮನ

ಮೈಸೂರು, ಫೆ.22(ಬಿಎಲ್ ಯು)– ಕರ್ನಾಟಕ ಪವರ್ ಇಂಜಿನಿಯರ್ಸ್ ಅಕಾಡೆಮಿಯು ನಾಳೆ(ಫೆಬ್ರವರಿ 24) ಮೈಸೂರಿನಲ್ಲಿ ಅಪ್ಪು ನಮನ ಕಾರ್ಯಕ್ರಮ ಆಯೋಜಿಸಿದೆ. ಅಂದು ಮೈಸೂರಿನ ಕಲಾಮಂದಿರದಲ್ಲಿ ನಾಳೆ ಸಂಜೆ 6 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಹಾಗೂ ಗೀತಾ ಶಿವರಾಜ್‌ಕುಮಾರ್ ಅತಿಥಿಗಳಾಗಿ ಆಗಮಿಸಲಿದ್ದಾರೆ.



ಆ ವೇಳೆ ಅಯೋಧ್ಯೆಯಲ್ಲಿ ಬಾಲರಾಮನ ಪ್ರತಿಮೆ ಕೆತ್ತನೆ ಮಾಡಿರುವ ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ಸನ್ಮಾನಿಸಲಿದ್ದು, ಅದೇ ಸಂದರ್ಭದಲ್ಲಿ ಅಕಾಡೆಮಿ ವತಿಯಿಂದ ಶಕ್ತಿಧಾಮಕ್ಕೆ ದೇಣಿಗೆ ನೀಡಲಾಗುವುದು.

ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ ಹಾಗೂ ಅಕಾಡೆಮಿ ಅಧ್ಯಕ್ಷ ಕೆ.ಮುನಿಗೋಪಾಲರಾಜು, ಕಾರ್ಯದರ್ಶಿ ಎಂ.ಹೆಚ್.ಜಗದೀಶ್ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ತರುವಾಯ ಗಾಯಕರಾದ ಶ್ರೀಹರ್ಷ, ಅಶ್ವಿನ್ ಶರ್ಮ, ದಿವ್ಯಾ ರಾಘವನ್ ಹಾಗೂ ದಿವ್ಯ ರಾಮಚಂದ್ರ ಅವರಿಂದ ಸಂಗೀತ ರಸಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ.



ಮೈಸೂರು ಅರಮನೆ ಉತ್ತರ ದ್ವಾರದಲ್ಲಿರುವ 10ನೇ ಚಾಮರಾಜ ಒಡೆಯರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಗುರುವಾರ ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಕರ್ನಾಟಕ ರಾಜ್ಯ ಒಕ್ಕಲಿಗ ವಿಕಾಸ ವೇದಿಕೆ ಈ ಕಾರ್ಯಕ್ರಮ ಆಯೋಜಿಸಿತ್ತು.

ಶೇಷಾದ್ರಿಪುರಂ ಕಾಲೇಜಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರ

ಶಿಕ್ಷಣ, ಆರೋಗ್ಯ ಇರುವಲ್ಲಿ ಎಂದಿಗೂ ಗೆಲುವು, ಸಮೃದ್ಧಿ: ಕೆಬಿಜಿ

ಮೈಸೂರು, ಫೆ. 22– ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜು, ಆಂತರಿಕ ಗುಣಮಟ್ಟ ಭರವಸೆ ಕೋಶ, ರೆಡ್‌ಕ್ರಾಸ್ ಘಟಕ, ರಾಷ್ಟ್ರೀಯ ಸೇವಾ ಯೋಜನೆ ಘಟಕ, ಎನ್.ಸಿ.ಸಿ., ಭಾರತೀಯ ರೆಡ್‌ಕ್ರಾಸ್ ಸೊಸೈಟಿ, ಕರ್ನಾಟಕ ರಾಜ್ಯ ಶಾಖೆ ಹಾಗೂ ರೋಟರಿ ಕ್ಲಬ್ ಆಫ್ ಮೈಸೂರು ಮಿಡ್‌ಟೌನ್ ಸಹಯೋಗದಲ್ಲಿ 7ನೇ ಸ್ವಯಂಪ್ರೇರಿತ ರಕ್ತದಾನ ಶಿಬಿರವನ್ನು ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಶಿಬಿರದಲ್ಲಿ ಕಾಲೇಜಿನ ವಿದ್ಯಾರ್ಥಿಗಳು, ಬೋಧಕರು, ಹಳೆಯ ವಿದ್ಯಾರ್ಥಿಗಳು, ಪೋಷಕರು ಮತ್ತು ಸಾರ್ವಜನಿಕರು ಒಟ್ಟು 106 ಯೂನಿಟ್ ರಕ್ತ ಸಂಗ್ರಹವಾಯಿತು.

ದಿವಂಗತ ಕೆ.ಎಂ.ನಂಜಪ್ಪ, ಮಾಜಿ ಮೇಯರ್ ಹಾಗೂ ಮಾಜಿ ಅಧ್ಯಕ್ಷರು, ಶೇಷಾದ್ರಿಪುರಂ ಶಿಕ್ಷಣ ದತ್ತಿ ಸ್ಮರಣಾರ್ಥವಾಗಿ ಸ್ವಯಂಪ್ರೇರಿತ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿತ್ತು.

ಶಿಬಿರವನ್ನು ಕೆ.ಎಂ.ನಂಜಪ್ಪ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಲಾಯಿತು.

ಮುಖ್ಯ ಅತಿಥಿಗಳಾಗಿದ್ದ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ. ಗಣಪತಿ (ಕೆಬಿಜಿ) ಅವರು ಮಾತನಾಡಿ, ಸಮಾಜಕ್ಕೆ ಉಪಯುಕ್ತವಾದ ರಕ್ತದಾನ ಶಿಬಿರವನ್ನು ಆಯೋಜಿಸಿರುವ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯನ್ನು ಅಭಿನಂದಿಸಿದರು. ಪ್ರಖ್ಯಾತ ವ್ಯಕ್ತಿಗಳ ನೆನಪಿನಲ್ಲಿ ಇಂತಹ ಶಿಬಿರಗಳನ್ನು ಆಯೋಜಿಸುವುದು, ರಕ್ತದಾನ ಮಾಡುವುದು ಮರುಜೀವ ನೀಡುವಷ್ಟು ಪುಣ್ಯದ ಕೆಲಸ. ಇಂತಹ ನಿಸ್ವಾರ್ಥ ಸೇವೆಗಳಿಂದ ಕೆಲಸ ಮಾಡುವ ವ್ಯಕ್ತಿಗಳು ಇತಿಹಾಸದಲ್ಲಿ ಗುರುತಿಸಿಕೊಳ್ಳುತ್ತಾರೆ. ಸೇವೆ, ತ್ಯಾಗ ಮತ್ತು ಪ್ರೀತಿ ಎಂಬ ಮೌಲ್ಯಗಳು ಇಂತಹ ಉತ್ತಮ ಕೆಲಸಗಳಿಗೆ ಪ್ರೇರಣೆ ನೀಡುತ್ತವೆ. ರಕ್ತದಾನ ಮಾಡುವವರು ಈ ರೀತಿ ಮಾನವೀಯತೆ ಮೆರೆಯುತ್ತಾರೆ. ಹಳೆಯ ವಿದ್ಯಾರ್ಥಿಗಳು ಬಂದು ರಕ್ತದಾನ ಮಾಡುತ್ತಿರುವುದು ಹೆಮ್ಮೆಯ ವಿಷಯ. ನಾವು ನೀಡುವ ರಕ್ತ ನಮಗೆ ತಿಳಿಯದ ಯಾರಿಗೋ ಜೀವ ನೀಡುತ್ತದೆ. ನಾಳೆ ನಮಗೆ ಅಥವಾ ನಮ್ಮವರಿಗೆ ಇಂತಹ ಸಂದರ್ಭದಲ್ಲಿ ಇನ್ಯಾರೋ ಜೀವ ನೀಡುತ್ತಾರೆ. ರಕ್ತದಾನದಿಂದ ಆರೋಗ್ಯ ವೃದ್ಧಿಸುತ್ತದೆ. ಶಿಕ್ಷಣ ಮತ್ತು ಆರೋಗ್ಯ ಇರುವಲ್ಲಿ ಎಂದಿಗೂ ಗೆಲುವು ಮತ್ತು ಸಮೃದ್ಧಿ ಇದ್ದೇ ಇರುತ್ತದೆ ಎಂದು ಹೇಳಿದರು.

ಭಾರತೀಯ ರೆಡ್‌ಕ್ರಾಸ್ ಸೊಸೈಟಿ, ರಾಜ್ಯ ಸಮನ್ವಯಾಧಿಕಾರಿ ರಾಜು ಚಂದ್ರಶೇಖರ್ ಮಾತನಾಡಿ, ನಮ್ಮನ್ನು ನಾವು ಉದಾತ್ತ ಕಾರ್ಯದಲ್ಲಿ ತೊಡಗುವ ಉತ್ತಮ ಸಂಸ್ಥೆಗಳೊಂದಿಗೆ ತೊಡಗಿಸಿಕೊಳ್ಳಬೇಕು. ಇಲ್ಲವೇ ಉದಾತ್ತ ವ್ಯಕ್ತಿಯ ಪ್ರಭಾವಕ್ಕೊಳಗಾಗಬೇಕು. ಇದರಿಂದ ನಾವು ಇಂತಹ ಸಾಮಾಜಿಕ ಸೇವಾ ಕಾರ್ಯಗಳನ್ನು ಮಾಡಲು ಸಾಧ್ಯ. ಶೇಷಾದ್ರಿಪುರಂ ಶಿಕ್ಷಣ ದತ್ತಿಯಿಂದ ಪ್ರತಿ ವರ್ಷ 2500 ಯೂನಿಟ್‌ಗಳಿಗಿಂತಲೂ ಹೆಚ್ಚಿನ ಸಂಗ್ರಹವಾಗುತ್ತಿದೆ. ಇದು ಮಹತ್ವದ ವಿಷಯ. ಇದು ಈ ಸಂಸ್ಥೆಯಿಂದ ಸಮಾಜಕ್ಕೆ ಮಹತ್ವದ ಕೊಡುಗೆಯಾಗಿದೆ ಎಂದರು.

ರೋಟೇರಿಯನ್ ಮೋಹನ್ ಗುರುಮೂರ್ತಿ, ನಿರ್ದೇಶಕರು, ಯುವಜನ ಸೇವೆಗಳು, ಮೈಸೂರು ಮಿಡ್‌ಟೌನ್ ರೋಟರಿ ಕ್ಲಬ್ ಹಾಗೂ ರೋಟೇರಿಯನ್ ಶ್ರೀನಿವಾಸನ್ ಡಿ., ಅಧ್ಯಕ್ಷರು, ಮೈಸೂರು ಮಿಡ್‌ಟೌನ್ ರೋಟರಿ ಕ್ಲಬ್ ಅವರು ರಕ್ತದಾನ ಕಾರ್ಯದ ಮಹತ್ವದ ಕುರಿತು ಮಾತನಾಡಿದರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಉಪ ಕಾರ್ಯದರ್ಶಿ ನಟರಾಜ್ ಅಧ್ಯಕ್ಷತೆ ವಹಿಸಿದ್ದರು. ಭಾರತೀಯ ರೆಡ್ ಕ್ರಾಸ್ ಸಂಸ್ಥೆಯಿಂದ ಶೇಷಾದ್ರಿಪುರಂ ಪದವಿ ಕಾಲೇಜಿಗೆ ಸೇವಾ ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ಶೇಷಾದ್ರಿಪುರಂ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಬಿ.ಎ.ಅನಂತರಾಮ್, ರೋಟರಿ ಕ್ಲಬ್ ಆಫ್ ಮೈಸೂರು ಮಿಡ್‌ಟೌನ್‌ನ ಕಾರ್ಯದರ್ಶಿ ರೋಟೇರಿಯನ್ ಸತ್ಯೇಂದ್ರ ಕಾಶ್ಯಪ್, ಮಾಜಿ ಅಧ್ಯಕ್ಷ ಸುಂದರ್, ಅರ್ಚನಾ ಸ್ವಾಮಿ, ಪ್ರಾಂಶುಪಾಲರು, ಎಸ್.ಐ.ಪಿಯು ಕಾಲೇಜು ಮತ್ತು ಶೇಷಾದ್ರಿಪುರಂ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಸೌಮ್ಯ ಈರಪ್ಪ ರೆಡ್‌ಕ್ರಾಸ್ ಘಟಕ ಮತ್ತು ರೋಟರಿ ಕ್ಲಬ್ ಸಂಯೋಜಕ ವಿನಯ್, ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಡಾ.ರಾಘವೇಂದ್ರ ಆರ್., ಎನ್‌ಸಿಸಿ ಅಧಿಕಾರಿ ಲ್ಯೂಟಿನೆಂಟ್ ಕುಮಾರ್ ಆರ್., ವಿದ್ಯಾರ್ಥಿಗಳು, ಬೋಧಕ–ಬೋಧಕೇತರರು ಉಪಸ್ಥಿತರಿದ್ದರು.



ದಿವಂಗತ ಕೆ.ಎಂ.ನಂಜಪ್ಪ, ಮಾಜಿ ಮೇಯರ್ ಹಾಗೂ ಮಾಜಿ ಅಧ್ಯಕ್ಷರು, ಶೇಷಾದ್ರಿಪುರಂ ಶಿಕ್ಷಣ ದತ್ತಿ ಸ್ಮರಣಾರ್ಥವಾಗಿ ಶೇಷಾದ್ರಿಪುರಂ ಪದವಿ ಕಾಲೇಜಲ್ಲಿ ಏರ್ಪಡಿಸಿದ್ದ ಸ್ವಯಂಪ್ರೇರಿತ ರಕ್ತದಾನ ಶಿಬಿರದಲ್ಲಿ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ (ಕೆಬಿಜಿ), ಭಾರತೀಯ ರೆಡ್‌ಕ್ರಾಸ್ ಸೊಸೈಟಿ, ರಾಜ್ಯ ಸಮನ್ವಯಾಧಿಕಾರಿ ರಾಜು ಚಂದ್ರಶೇಖರ್, ರೋಟೇರಿಯನ್ ಮೋಹನ್ ಗುರುಮೂರ್ತಿ, ರೋಟೇರಿಯನ್ ಶ್ರೀನಿವಾಸನ್ ಡಿ., ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಉಪ ಕಾರ್ಯದರ್ಶಿ ನಟರಾಜ್, ಪ್ರಾಂಶುಪಾಲರಾದ ಡಾ. ಸೌಮ್ಯ ಈರಪ್ಪ ಭಾಗವಹಿಸಿದ್ದರು.

ರಾಗಿ ಮಾಲ್ಟ್ ವಿತರಣೆಗೆ ಚಾಲನೆ

• ಜಿಲ್ಲೆಯ 29,584 ವಿದ್ಯಾರ್ಥಿಗಳಿಗೆ ಉಪಯೋಗ • ಅಕ್ಷರ ದಾಸೋಹ ಶಿಕ್ಷಣಾಧಿಕಾರಿ ಶಶಿಕಲಾ ಮಾಹಿತಿ

ಮಡಿಕೇರಿ, ಫೆ.22–ಜಿಲ್ಲೆಯ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳ ರಾಗಿ ಮಾಲ್ಟ್ ವಿತರಣೆ ಕಾರ್ಯಕ್ರಮಕ್ಕೆ ಗುರುವಾರ ಚಾಲನೆ ನೀಡಲಾಯಿತು.

ನಗರದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ದೊಡ್ಡೇಗೌಡ, ಶಿಕ್ಷಣ ಇಲಾಖೆ ಅಧಿಕಾರಿ ಸೌಮ್ಯ ಪೊನ್ನಪ್ಪ ಹಾಗೂ ಅಕ್ಷರ ದಾಸೋಹ ಶಿಕ್ಷಣಾಧಿಕಾರಿ ಶಶಿಕಲಾ ರಾಗಿ ಮಾಲ್ಟ್ ವಿತರಿಸಿದರು.

ಅಕ್ಷರ ದಾಸೋಹ ಶಿಕ್ಷಣಾಧಿಕಾರಿ ಶಶಿಕಲಾ ಮಾತನಾಡಿ, ಜಿಲ್ಲೆಯಲ್ಲಿ ಸರ್ಕಾರಿ ಮತ್ತು ಅನುದಾನಿತ ಒಟ್ಟು 474 ಶಾಲೆಯ 29,584 ವಿದ್ಯಾರ್ಥಿಗಳಿಗೆ ರಾಗಿ ಮಾಲ್ಟ್ ವಿತರಿಸಲಾಗುತ್ತಿದೆ. ಬೆಳಗ್ಗೆ ಸಕ್ಕರೆ ಹಾಕಿದ ಕೆನೆಭರಿತ ಹಾಲು, ಪೂರಕ ಪೌಷ್ಟಿಕ ಆಹಾರವಾಗಿ ಮೊಟ್ಟೆ, ಬಾಳೆಹಣ್ಣು, ಚಿಕ್ಕಿ ಹಾಗೂ ಸಕ್ಕರೆ ಮಿಶ್ರಿತ ಹಾಲಿಗೆ ರಾಗಿ ಮಾಲ್ಟ್ ಅನ್ನು ವಿತರಿಸಲಾಗುವುದು. ಜೊತೆಗೆ ಮಧ್ಯಾಹ್ನದ ಬಿಸಿಊಟ ನೀಡಲಾಗುತ್ತದೆ ಎಂದರು.

2023 ಅನ್ನು ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷವೆಂದು ಘೋಷಿಸಿರುವ ಹಿನ್ನೆಲೆಯಲ್ಲಿ ಸರ್ಕಾರ ಶಾಲಾ ಮಕ್ಕಳಿಗೆ ಅಪೌಷ್ಟಿಕತೆ ನಿವಾರಿಸಲು, ಅನೀಮಿಯ ತಡೆಗಟ್ಟಲು ಉತ್ತಮ ಆರೋಗ್ಯಕರ ಬೆಳವಣಿಗೆಯೊಂದಿಗೆ ಶಾಲೆಯ ನಿರಂತರ ಕಲಿಕೆ ಪ್ರೋತ್ಸಾಹಿಸಲು ಸರ್ಕಾರ ರಾಗಿ ಮಾಲ್ಟ್ ವಿತರಿಸಲು ಮುಂದಾಗಿದೆ ಎಂದರು.

ಸಿರಿಧಾನ್ಯ ಆಹಾರ ಬಳಕೆಯ ಉಪಯುಕ್ತತೆ ಮತ್ತು ಸಿರಿಧಾನ್ಯಗಳಲ್ಲಿ ದೊರೆಯುವ ಬಹುಪೌಷ್ಟಿಕಾಂಶಗಳ ಕುರಿತು ಶಾಲಾ ಮಕ್ಕಳಲ್ಲಿ ಜಾಗೃತಿ ಮೂಡಿಸಲು ಬೆಳಗ್ಗಿನ ಪ್ರಾರ್ಥನಾ ಸಂದರ್ಭದಲ್ಲಿ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಕ್ಷೀರಭಾಗ್ಯ ಯೋಜನೆಯಡಿ ಬಿಸಿ ಹಾಲು ತಯಾರಿಸಿ ರಾಗಿ ಮಾಲ್ಟ್ ವಿತರಿಸಲಾಗುವುದು. ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯ ಸತ್ಯಸಾಯಿ ಅನ್ನಪೂರ್ಣ ಸಂಸ್ಥೆ ಬಹುಪೌಷ್ಟಿಕಾಂಶವುಳ್ಳ, ಸಾಯಿ ಶ್ಯೂರ್ ರಾಗಿ ಹೆಲ್ತ್ ಮಿಕ್ಸ್ ಮಿಶ್ರಣ ಉಚಿತವಾಗಿ ನೀಡಲು ಮುಂದೆ ಬಂದಿದ್ದಾರೆ ಎಂದು ತಿಳಿಸಿದರು.

ಬಿಇಓ ದೊಡ್ಡೇಗೌಡ ಮಾತನಾಡಿ, ಹಿಂದೆ ಮನೆಗಳಲ್ಲಿ ಸಿರಿಧಾನ್ಯಗಳನ್ನು ಹೆಚ್ಚು ಬಳಸಲಾಗುತ್ತಿತ್ತು. ಹುರುಳಿ, ಅವರೆ, ತೊಗರಿ, ಅಲಸಂದೆ ಇಂತಹ ಕಾಳುಗಳ ಆಹಾರವನ್ನು ಉಪಯೋಗಿಸುತ್ತಿದ್ದರು. ಇತ್ತೀಚೆಗೆ ಬಳಕೆ ಕಡಿಮೆಯಾಗುತ್ತಿದೆ. ಮಕ್ಕಳಲ್ಲಿ ಅಪೌಷ್ಟಿಕತೆ ಹೋಗಲಾಡಿಸಲು ರಾಗಿ ಮಾಲ್ಟ್ ನೀಡಲಾಗುತ್ತಿದೆ ಎಂದರು. ಶಿಕ್ಷಣ ಇಲಾಖೆ ಅಧಿಕಾರಿ ಸೌಮ್ಯ ಪೊನ್ನಪ್ಪ ಮಾತನಾಡಿ, ಸರ್ಕಾರ ಬಿಸಿಯೂಟ, ಬಿಸಿ ಹಾಲು ಸೇರಿದಂತೆ ಹಲವು ಸೌಲಭ್ಯಗಳನ್ನು ಕಲ್ಪಿಸುತ್ತಿದೆ. ಈ ನಿಟ್ಟಿನಲ್ಲಿ ಇವುಗಳನ್ನು ಸರಿಯಾಗಿ ಬಳಸಿಕೊಂಡು ಓದಿನ ಕಡೆಗೆ ಗಮನಹರಿಸಬೇಕು ಎಂದರು.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕಿ ಎಚ್.ಕೆ.ಸುಶೀಲಾ, ನಗರದ ಸರ್ಕಾರಿ ಪ್ರೌಢಶಾಲೆ ಮುಖ್ಯಶಿಕ್ಷಕ ಗುರುರಾಜ್, ಶಿಕ್ಷಕಿ ಮಂಜುಳಾ ಮಾತನಾಡಿದರು. ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಹೇಮಂತ್ ಕುಮಾರ್, ಎಸ್‌ಡಿಎಂಸಿ ಉಪಾಧ್ಯಕ್ಷರಾದ ರೇಷ್ಮಾ ತೇಜ, ಜಗದೀಶ್ ಇತರರು ಇದ್ದರು.



ಮಡಿಕೇರಿಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಬಿಇಓ ದೊಡ್ಡೇಗೌಡ, ಶಿಕ್ಷಣ ಇಲಾಖೆ ಅಧಿಕಾರಿ ಸೌಮ್ಯ ಪೊನ್ನಪ್ಪ, ಅಕ್ಷರ ದಾಸೋಹ ಶಿಕ್ಷಣಾಧಿಕಾರಿ ಶಶಿಕಲಾ ರಾಗಿ ಮಾಲ್ಟ್ ವಿತರಿಸಿದರು.

ಕಲ್ಯಾಟಂಡ ಐನ್‌ಮನೆ ಅಭಿವೃದ್ಧಿ ಸಂಘದ ಪದಾಧಿಕಾರಿಗಳ ಆಯ್ಕೆ

ಮಡಿಕೇರಿ, ಫೆ.22–ನಾಪೋಕ್ಲು ಕುಂಜಿಲ ಗ್ರಾಮದ ಕಲ್ಯಾಟಂಡ ಐನ್‌ಮನೆ ಅಭಿವೃದ್ಧಿ ಸಂಘಕ್ಕೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಫೆ.18ರಂದು ಐನ್‌ಮನೆಯಲ್ಲಿ ನಡೆದ ಸಭೆಯಲ್ಲಿ ಸಂಘದ ಅಧ್ಯಕ್ಷರಾಗಿ ಕಲ್ಯಾಟಂಡ ಮುತ್ತಪ್ಪ, ಉಪಾಧ್ಯಕ್ಷರಾಗಿ ರಾಜಾ ಅಪ್ಪಣ್ಣ, ಕೋಶಾಧಿಕಾರಿಯಾಗಿ ಕಲ್ಯಾಟಂಡ ಗಣೇಶ್ ಮುತ್ತಪ್ಪ, ಕಾರ್ಯದರ್ಶಿಯಾಗಿ ಕಲ್ಯಾಟಂಡ ಎಸ್.ಚಂಗಪ್ಪ, ಸಹ ಕಾರ್ಯದರ್ಶಿಯಾಗಿ ಕಲ್ಯಾಟಂಡ ಪ್ರಿನ್ಸ್ ಗಣಪತಿ, ಸಲಹಾ ಸಮಿತಿ ಸದಸ್ಯರಾಗಿ ಕಲ್ಯಾಟಂಡ ಬಿ.ಚಿಣ್ಣಪ್ಪ, ಪ್ರೊ.ಕಲ್ಯಾಟಂಡ ಎಂ.ಪೂಣಚ್ಚ, ಸಮಿತಿ ಸದಸ್ಯರಾಗಿ ಕಲ್ಯಾಟಂಡ ಕುಟುಂಬ ಸದಸ್ಯರಾದ ಕೆ.ಟಿ.ಅರುಣ, ಕೆ.ಕೆ.ಸುಧಾ ಗಣಪತಿ, ಕೆ.ಎಂ.ಯತೀಶ್ ಬೋಪಣ್ಣ, ಕೆ.ಪಿ.ಸಂದೇಶ್, ಕೆ.ಪಿ.ಮೇದಪ್ಪ, ಕೆ.ಎಂ.ಸುಭಾಷ್ ಅವರನ್ನು ಆಯ್ಕೆ ಮಾಡಲಾಯಿತು. ಇದೇ ವೇಳೆ ಸಂಘದ ಅಭಿವೃದ್ಧಿಗೆ ತಮ್ಮದೇ ಸೇವೆ ಸಲ್ಲಿಸಿದ ನಿರ್ಗಮಿತ ಅಧ್ಯಕ್ಷ ಡಾ.ಕಲ್ಯಾಟಂಡ ಚಿಣ್ಣಪ್ಪ, ನೂತನ ಅಧ್ಯಕ್ಷರಿಗೆ ಅಧಿಕಾರ ಹಸ್ತಾಂತರಿಸಿ ಶುಭ ಹಾರೈಸಿದರು.

ಪ್ರಧಾನಿ ಮೋದಿಯಿಂದ ಅಂಚೆ ಕಚೇರಿಗೆ ಮರುಜೀವ



ಪೊನ್ನಂಪೇಟೆಯಲ್ಲಿ ಅಂಚೆ ಕಚೇರಿ ನಿರ್ಮಾಣ ಕಾಮಗಾರಿಯನ್ನು ಸಂಸದ ಪ್ರತಾಪ್ ಸಿಂಹ ಪರಿಶೀಲಿಸಿದರು. ಮಾಚಿಮಂಡ ಸುವಿನ್ ಗಣಪತಿ,ಯಮುನಾ ಚೆಂಗಪ್ಪ ಇತರರಿದ್ದರು.

ಗೋಣಿಕೊಪ್ಪ ಫೆ22–ನರೇಂದ್ರ ಮೋದಿ ಪ್ರಧಾನಿ ಆದ ಬಳಿಕ ಅಂಚೆ ಕಚೇರಿಗೆ ಮರುಜೀವ ಬಂದಿದೆ ಎಂದು ಸಂಸದ ಪ್ರತಾಪ್ ಸಿಂಹ ಹೇಳಿದರು.

ಪೊನ್ನಂಪೇಟೆಯಲ್ಲಿ ಕೇಂದ್ರ ಸರ್ಕಾರದ ಅನುದಾನದ ಅಂಚೆ ಕಚೇರಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಗುರುವಾರ ಪರಿಶೀಲಿಸಿ ಮಾತನಾಡಿದ ಅವರು, ಅಂಚೆ ಕಚೇರಿ ಮೇಲೆ ಸಾರ್ವಜನಿಕರ ಅವಲಂಬನೆ ಹೆಚ್ಚಾಗುತ್ತಿದೆ. ಬ್ಯಾಂಕ್ ವ್ಯವಸ್ಥೆ ಹಣ ಸಂದಾಯ ಹೆಚ್ಚಾಗುತ್ತಿದೆ. ಸುಕನ್ಯ ಸಮೃದ್ಧಿ ಯೋಜನೆ ಕೂಡ ದೇಶದ ಜನರಿಗೆ ನೆರವಾಗುತ್ತಿದೆ. ಈ ನಿಟ್ಟಿನಲ್ಲಿ ಸಂಸದರ ನಿಧಿಯಿಂದ 30 ಲಕ್ಷ ರೂ. ಹಾಗೂ ಸಂಸದರ ಕ್ಷೇತ್ರಾಭಿವೃದ್ಧಿ ಯೋಜನೆಯಡಿ 10 ಲಕ್ಷ ರೂ. ವೆಚ್ಚದಲ್ಲಿ ಅಂಚೆ ಕಚೇರಿ ನಿರ್ಮಿಸಲಾಗುತ್ತಿದೆ. ಹಿಂದೆ ಶಾಸಕರಾಗಿದ್ದ ಕೆ.ಜಿ. ಬೋಪಯ್ಯ ಅವರು ಅಂಚೆ ಕಚೇರಿಗೆ ಜಾಗ ಗುರುತಿಸಿ ಅಭಿವೃದ್ಧಿಗೆ ಮುಂದಾಗಿದ್ದರು ಎಂದರು.

ಈ ಸಂದರ್ಭ ಮಾಜಿ ಸ್ಪೀಕರ್ ಕೆ.ಜಿ. ಬೋಪಯ್ಯ, ವಿರಾಜಪೇಟೆಯ ಬಿಜೆಪಿ ಮಂಡಲ ಅಧ್ಯಕ್ಷ ಮಾಚಿಮಂಡ ಸುವಿನ್ ಗಣಪತಿ, ಮಾಜಿ ಬಿಜೆಪಿ ಜಿಲ್ಲಾಧ್ಯಕ್ಷ ಮಾಚಿಮಾಡ ಎಂ.ರವೀಂದ್ರ ಯಮುನಾ ಚೆಂಗಪ್ಪ ಕಿರುಗೂರು ಗ್ರಾಪಂ ಅಧ್ಯಕ್ಷ ಚೆಪ್ಪುಡೀರ ರಾಕೇಶ್ ದೇವಯ್ಯ, ಸದಸ್ಯೆ ಬೊಟ್ಟಂಗಡ ದಶಮಿ ಸದಾ, ಪ್ರಮುಖರಾದ ಚೋಟುಮಾಡ ಶ್ಯಾಮ್ ಪೂಣಚ್ಚ ಕೋಟೇರ ಕಿಶನ್, ಕಗ್ಗಟ್ ನಾಡ್ ಹಿರಿಯ ನಾಗರಿಕ ವೇದಿಕೆಯ ಗೌರವಾಧ್ಯಕ್ಷ ಕಾಟಿಮಾಡ ಜಿಮ್ಮಿ ಅಣ್ಣಯ್ಯ, ಅಧ್ಯಕ್ಷ ಚೊಟ್ಟೆಯಂಡಮಾಡ ವಿಶ್ವನಾಥ್ ಇದ್ದರು.

6.40 ಲಕ್ಷ ರೂ.ಗೆ ಮಳಿಗೆ ಹರಾಜು



ವಿರಾಜಪೇಟೆ ಪುರಸಭೆ ಮಳಿಗೆಗಳ ವಾರ್ಷಿಕ ಬಹಿರಂಗ ಹರಾಜು ಪ್ರಕ್ರಿಯೆ ಗುರುವಾರ ಮುಖ್ಯಾಧಿಕಾರಿ ಚಂದ್ರಕುಮಾರ್ ಸಮ್ಮುಖದಲ್ಲಿ ನಡೆಯಿತು.

ವಿರಾಜಪೇಟೆ, ಫೆ.22–ವಿರಾಜಪೇಟೆ ಪುರಸಭೆ ಮಳಿಗೆಗಳ ವಾರ್ಷಿಕ ಬಹಿರಂಗ ಹರಾಜು ಪ್ರಕ್ರಿಯೆ ಗುರುವಾರ ನಡೆಯಿತು.

ಪುರಸಭೆಯ 2024–25ನೇ ಸಾಲಿನ ವಾರ್ಷಿಕ ಬಹಿರಂಗ ಹರಾಜಿನಲ್ಲಿ ಹಂದಿ ಮಾಂಸ ಮಾರಾಟ ಮಳಿಗೆ 78 ಸಾವಿರ ರೂ., ವಾಹನಗಳ ಸುಂಕ 1.60 ಲಕ್ಷ ರೂ., ಸಂತೆ ಸುಂಕ 4.2 ಲಕ್ಷ ರೂ. ಸೇರಿದಂತೆ ಒಟ್ಟು 6.40 ಲಕ್ಷ ರೂ. ಬಂದಿದೆ.

ಕಳೆದ ಸಾಲಿಗಿಂತ ಈ ಬಾರಿ 3 ಲಕ್ಷದ 11 ಸಾವಿರ ರೂ. ಹೆಚ್ಚು ಹರಾಜಿನಲ್ಲಿ ಬಂದಿದೆ. ಉಳಿದಿರುವ ಮಳಿಗೆಗಳ ಹರಾಜು ಪ್ರಕ್ರಿಯೆಯನ್ನು ಮುಂದಿನ ದಿನದಲ್ಲಿ ನಡೆಸಲಾಗುವುದು. ಈ ಮಳಿಗೆಗಳಲ್ಲೂ ಹೆಚ್ಚಿನ ಆದಾಯ ಬರಲಿದೆ ಎಂದು ಮುಖ್ಯಾಧಿಕಾರಿ ಚಂದ್ರಕುಮಾರ್ ತಿಳಿಸಿದರು.

ಹರಾಜು ಪ್ರಕ್ರಿಯೆಯಲ್ಲಿ ಪುರಸಭೆ ಸದಸ್ಯರಾದ ಸುನಿತಾ ಜೂನಾ, ಫಸಿಯಾ ತಬಸಮ್, ಮಹ್ಮದ್ ರಫಿ, ಮಹದೇವ್ ಸುಭಾಷ್, ರಜನಿಕಾಂತ್, ಅನಿತಾ, ಅಬ್ದುಲ್ ಜಲೀಲ್, ಸಿಬ್ಬಂದಿ ಮತ್ತು ಬಿಡ್‌ದಾರರು ಭಾಗವಹಿಸಿದ್ದರು.

ಅನ್ನಭಾಗ್ಯ ಅಕ್ಕಿಯಲ್ಲಿ ಹುಳು ಪತ್ತೆ

ಗೋಣಿಕೊಪ್ಪ, ಫೆ.22– ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅನ್ನಭಾಗ್ಯ ಯೋಜನೆಯಡಿ ವಿತರಿಸಿರುವ ಅಕ್ಕಿಯಲ್ಲಿ ಹುಳುಗಳು ಪತ್ತೆಯಾಗಿವೆ.

ಪೊನ್ನಂಪೇಟೆ ಹಾಗೂ ನಲ್ಲೂರು ನ್ಯಾಯಬೆಲೆ ಅಂಗಡಿಗಳಲ್ಲಿ ಕಿರುಗೂರು, ನಲ್ಲೂರು, ಮತ್ತೂರು ಗ್ರಾಮದ ಪಡಿತರ ಚೀಟಿದಾರರಿಗೆ ವಿತರಿಸಿದ ಅಕ್ಕಿಯಲ್ಲಿ ಹುಳುಗಳು ಪತ್ತೆಯಾಗಿವೆ.

ಫೆಬ್ರವರಿ ತಿಂಗಳಿನಲ್ಲಿ ನ್ಯಾಯಬೆಲೆ ಅಂಗಡಿಗೆ ಸುಮಾರು 65 ಚೀಲ ಅಕ್ಕಿಯನ್ನು ಸರಬರಾಜು ಮಾಡಲಾಗಿದ್ದು, ಎಲ್ಲಾ ಚೀಲಗಳಲ್ಲೂ ಹುಳುಹಿಡಿದ ಅಕ್ಕಿ ಕಂಡುಬಂದಿದೆ. ಅಲ್ಲದೇ, ಪೊನ್ನಂಪೇಟೆ ನ್ಯಾಯಬೆಲೆ ಅಂಗಡಿಗೆ ಸುಮಾರು 234 ಚೀಲ ಅಕ್ಕಿ ಪೂರೈಕೆಯಾಗಿದ್ದು, ಈ ಅಕ್ಕಿಯಲ್ಲೂ ಹುಳುಗಳಿವೆ.



ಅನ್ನಭಾಗ್ಯ ಅಕ್ಕಿಯಲ್ಲಿ ಪತ್ತೆಯಾದ ಹುಳುಗಳು.

> ಭಾರತ್ ಆಹಾರ ನಿಗಮದಿಂದ ಅಕ್ಕಿಯನ್ನು ಪೂರೈಕೆ ಮಾಡಲಾಗುತ್ತಿದ್ದು, ಕೆ.ಆರ್.ನಗರ ಮತ್ತು ಕುಶಾಲನಗರದಿಂದ ಪೊನ್ನಂಪೇಟೆ ತಾಲೂಕಿನ 44 ನ್ಯಾಯಬೆಲೆ ಅಂಗಡಿಗಳಿಗೆ ಸುಮಾರು 2600 ಕ್ವಿಂಟಾಲ್ ಅಕ್ಕಿಯನ್ನು ಪೂರೈಸಲಾಗುತ್ತಿದೆ. ಹುಳುಗಳಿರುವ ಅಕ್ಕಿ ಚೀಲಗಳನ್ನು ಪ್ರತ್ಯೇಕವಾಗಿಟ್ಟು ಮಾಹಿತಿ ನೀಡಿದ್ದಲ್ಲಿ ಬದಲಿ ಅಕ್ಕಿ ವಿತರಿಸಲಾಗುವುದು.
> –ನಿಶಾಂತ್, ಆಹಾರ ನಿರೀಕ್ಷಕ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ.

ಸೆಸ್ಕ್ ಕಚೇರಿ ಎದುರು ರೈತರ ಧರಣಿ

ಮಡಿಕೇರಿ, ಫೆ.22–ರೈತರು ಮತ್ತು ಕಾಫಿ ಬೆಳೆಗಾರರ 10 ಹೆಚ್‌ಪಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುತ್ತಿದೆ ಎಂದು ಆರೋಪಿಸಿ ರೈತ ಸಂಘದ ಕಾರ್ಯಕರ್ತರು ಗುರುವಾರ ನಗರದ ಸೆಸ್ಕ್ ಕಚೇರಿ ಎದುರು ಧರಣಿ ನಡೆಸಿದರು.

ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸದೆ ಉಚಿತವಾಗಿ ನೀಡಬೇಕು. ಸೆಸ್ಕ್‌ನಿಂದ ಸಕಾರಾತ್ಮಕ ಸ್ಪಂದನೆ ದೊರಕುವವರೆಗೂ ಸ್ಥಳದಿಂದ ಕದಲುವುದಿಲ್ಲ ಎಂದು ಪಟ್ಟುಹಿಡಿದ ಪ್ರತಿಭಟನಾಕಾರರು ಧರಣಿ ನಡೆಸಿದರು.

ರೈತಸಂಘದ ಜಿಲ್ಲಾಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ಮಾತನಾಡಿ, ಜಿಲ್ಲೆಯ 5 ತಾಲೂಕುಗಳಲ್ಲಿ ಬರ ಘೋಷಿಸಲಾಗಿದೆ. ರಾಜ್ಯದ ಜನ ಕೇಳದಿದ್ದರೂ ಸರ್ಕಾರ 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡುತ್ತಿದೆ. ಆದರೆ, ರೈತರ 10 ಹೆಚ್‌ಪಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಬೇಕೆಂದು ಕಳೆದ 20 ವರ್ಷಗಳಿಂದ ರೈತ ಸಂಘ ಹೋರಾಡುತ್ತಿದ್ದರೂ ಸರ್ಕಾರ ಸ್ಪಂದಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಿಂದಿನ ಬಿಜೆಪಿ ಸರ್ಕಾರ ಓಬಿಟಿ ಯೋಜನೆಯನ್ನು ಜಾರಿಗೆ ತಂದ ಹಿನ್ನೆಲೆಯಲ್ಲಿ ಅದನ್ನು ವಿರೋಧಿಸಿ ರೈತಸಂಘದಿಂದ ಪ್ರತಿಭಟನೆ ನಡೆಸಲಾಗಿತ್ತು. ಇದೀಗ ರಾಜ್ಯ ಸರ್ಕಾರ ರೈತರ ಬೇಡಿಕೆಗೆ ಸ್ಪಂದಿಸದಿದ್ದಲ್ಲಿ ಬಿಜೆಪಿ ಸರ್ಕಾರವನ್ನು ಬದಲಾವಣೆ ಮಾಡಿದ ಹಾಗೆ ಕಾಂಗ್ರೆಸ್ ಸರ್ಕಾರವನ್ನು ರೈತರು ಬದಲಾವಣೆ ಮಾಡಲಿದ್ದಾರೆ ಎಂದು ಎಚ್ಚರಿಸಿದರು.

ನಂತರ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಮಡಿಕೇರಿ ವಿಭಾಗದ ಸೆಸ್ಕ್ ಕಾರ್ಯನಿರ್ವಾಹಕ ಇಂಜಿನಿಯರ್ ಅನಿತಾ ಬಾಯಿ ಮಾತನಾಡಿ, ಪಂಪ್‌ಸೆಟ್‌ಗಳ ವಿದ್ಯುತ್ ಸರಬರಾಜಿನಲ್ಲಿ ಸುಮಾರು 29 ಕೋಟಿ ರೂ.ಗಳಷ್ಟು ಬಾಕಿ ಬರಬೇಕಿದೆ. ನಿಗಮದ ನಿಯಮಾನುಸಾರ ಕ್ರಮವಹಿಸಲಾಗಿದ್ದು, ಮೇಲಧಿಕಾರಿಗಳ ನಿರ್ದೇಶನದಂತೆ ವಿದ್ಯುತ್ ಮರುಸಂಪರ್ಕ ನೀಡಲಾಗುವುದು ಎಂದು ಭರವಸೆ ನೀಡಿದರು. ನಂತರ ರೈತರು ಪ್ರತಿಭಟನೆಯನ್ನು ಹಿಂಪಡೆದರು.



10 ಹೆಚ್‌ಪಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುತ್ತಿದೆ ಎಂದು ಆರೋಪಿಸಿ ರೈತ ಸಂಘದ ಕಾರ್ಯಕರ್ತರು ಮಡಿಕೇರಿಯ ಸೆಸ್ಕ್ ಕಚೇರಿ ಎದುರು ಧರಣಿ ನಡೆಸಿದರು.

ಮಂಡೇಂಡ ಎ.ಅಹಮದ್ ನಿಧನ

ಪೊನ್ನಂಪೇಟೆ: ವಿರಾಜಪೇಟೆ ಸಮೀಪದ ಗುಂಡಿಕೆರೆ (ಬೇಟೋಳಿ) ಗ್ರಾಮದ ನಿವಾಸಿ ಮಂಡೇಂಡ ಎ.ಅಹಮದ್(78) ಗುರುವಾರ ಮುಂಜಾನೆ ನಿಧನರಾದರು.



ಮೃತರು ಪತ್ನಿ, ಕೊಡವ ಮುಸ್ಲಿಂ ಅಸೋಸಿಯೇಷನ್ (ಕೆಎಂಎ) ನಿರ್ದೇಶಕ ಮತ್ತು ಬೇಟೋಳಿ ಗ್ರಾಪಂ ಮಾಜಿ ಉಪಾಧ್ಯಕ್ಷ ಮಂಡೇಂಡ ಎ.ಮೊಯ್ದು ಸೇರಿದಂತೆ ಮೂವರು ಪುತ್ರರು ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ. ಗುಂಡಿಕೆರೆಯ ಜುಮಾ ಮಸೀದಿಯ ಖಬರ್‌ಸ್ತಾನ್‌ನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಪೌಷ್ಟಿಕ ಆಹಾರ ಸೇವಿಸಿ ಕಲಿಕೆಗೆ ಒತ್ತು ನೀಡಿ

ಶಾಲಾ ಮಕ್ಕಳಿಗೆ ತಾಲೂಕು ಪಂಚಾಯಿತಿ ಇಓ ಪೂರ್ಣಿಮಾ ಸಲಹೆ



ಚಾಮರಾಜನಗರದ ಸಂತೆಮರಳ್ಳಿ ರಸ್ತೆಯ ಉಪ್ಪಾರಬೀದಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಗುರುವಾರ ರಾಗಿ ಹೆಲ್ತ್ ಮಿಕ್ಸ್ ವಿತರಣೆಗೆ ತಾಪಂ ಇಓ ಪೂರ್ಣಿಮಾ ಚಾಲನೆ ನೀಡಿದರು.

ಚಾಮರಾಜನಗರ, ಫೆ22–ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರ ಕೊಡುವ ಉದ್ದೇಶದಿಂದ ರಾಜ್ಯ ಸರ್ಕಾರ ಪ್ರತಿದಿನ ರಾಗಿ ಮಾಲ್ಟ್ ನೀಡಲು ಮುಂದಾಗಿದೆ ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಹಕಾಧಿಕಾರಿ ಪೂರ್ಣಿಮಾ ತಿಳಿಸಿದರು.

ನಗರದ ಸಂತೆಮರಳ್ಳಿ ರಸ್ತೆಯ ಉಪ್ಪಾರಬೀದಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಗುರುವಾರ ಶಾಲಾ ಶಿಕ್ಷಣ ಇಲಾಖೆ, ಸತ್ಯ ಸಾಯಿ ಅನ್ನಪೂರ್ಣ ಟ್ರಸ್ಟ್ ಮತ್ತು ಕೆಎಂಎಫ್ ಸಂಸ್ಥೆಗಳ ಸಹಯೋಗದಲ್ಲಿ ಬಿಸಿ ಹಾಲಿನೊಂದಿಗೆ ಮಿಶ್ರಣಗೊಳಿಸಿ ರಾಗಿ ಹೆಲ್ತ್ ಮಿಕ್ಸ್ ವಿತರಣೆಗೆ ಚಾಲನೆ ನೀಡಿ ಮಾತನಾಡಿದ ಅವರು, ಮಕ್ಕಳ ವಿದ್ಯಾಭ್ಯಾಸವನ್ನು ಉತ್ತಮಗೊಳಿಸಲು ಸರ್ಕಾರ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಮಕ್ಕಳು ಶಾಲೆಗಳಲ್ಲಿ ನೀಡುವ ಪೌಷ್ಟಿಕ ಆಹಾರವನ್ನು ಸೇವಿಸಿ ಕಲಿಕೆಗೆ ಹೆಚ್ಚು ಒತ್ತು ನೀಡಿ, ಉತ್ತಮ ಪ್ರಜೆಗಳಾಗಬೇಕು ಎಂದರು.

ಡಯಟ್ ಪ್ರಾಂಶುಪಾಲ ಕಾಶಿನಾಥ್ ಮಾತನಾಡಿ, ದೇಶದ ಮುಂದಿನ ಪ್ರಜೆಗಳಾದ ಮಕ್ಕಳಿಗೆ ಜ್ಞಾನ ತುಂಬುವ ಕೆಲಸವನ್ನು ಶಿಕ್ಷಕರು ಮಾಡುತ್ತಿದ್ದಾರೆ. ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ಮುಂದೆ ಸಾಗಬೇಕು. ಶಾಲಾ ಮಕ್ಕಳು ಹಸಿವಿನಿಂದ ಇರಬಾರದು ಎಂದು ಮಧ್ಯಾಹ್ನದ ಊಟ, ಜೊತೆಗೆ ಸರ್ಕಾರ ಮೊಟ್ಟೆ, ರಾಗಿ ಹೆಲ್ತ್ ಮಿಕ್ಸ್ ನೀಡುತ್ತಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಣ್ಣೇಗೌಡ ಮಾತನಾಡಿ, ಚಾಮರಾಜನಗರ ಜಿಲ್ಲಾದ್ಯಂತ ಸರ್ಕಾರಿ ಶಾಲೆಗಳಲ್ಲಿ ಗುರುವಾರ ಮಕ್ಕಳಿಗೆ ರಾಗಿ ಮಾಲ್ಟ್ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಮಕ್ಕಳು ಶಕ್ತಿಹೀನರಾಗಬಾರದು, ಸರ್ಕಾರ ನೀಡುವ ಪೌಷ್ಟಿಕ ಆಹಾರದೊಂದಿಗೆ ಶಕ್ತಿವಂತರಾಗಬೇಕು ಎಂದು ಹೇಳಿದರು.

ನಗರಸಭೆ ಸದಸ್ಯ ಬಸವಣ್ಣ ಮಾತನಾಡಿದರು. ಜಿಲ್ಲಾ ಅಕ್ಷರ ದಾಸೋಹ ಅಧಿಕಾರಿ ಗುರುಲಿಂಗಯ್ಯ, ತಾಲೂಕು ಅಕ್ಷರ ದಾಸೋಹ ಅಧಿಕಾರಿ ವೆಂಕಟೇಶ್, ತಾಲೂಕು ದೈಹಿಕ ಶಿಕ್ಷಣಾಧಿಕಾರಿ ಬಸವರಾಜು, ಸಿಆರ್‌ಪಿ ಗಂಗಾಂಬಿಕೆ, ಎಸ್‌ಡಿಎಂಸಿ ಸದಸ್ಯ ಮಹದೇವಸ್ವಾಮಿ, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿಕಟಪೂರ್ವ ಅಧ್ಯಕ್ಷ ಪ್ರಕಾಶ್, ದೈಹಿಕ ಶಿಕ್ಷಣ ಶಿಕ್ಷಕ ಚಿಕ್ಕಬಸವಯ್ಯ, ಶಿಕ್ಷಕರು ಹಾಜರಿದ್ದರು.

ಕೊಳ್ಳೇಗಾಲದಲ್ಲಿ ರಾಗಿಮಾಲ್ಟ್ ವಿತರಣೆಗೆ ಚಾಲನೆ

ಕೊಳ್ಳೇಗಾಲ, ಫೆ.22– ಪಟ್ಟಣದ ವಸಂತ ಕುಮಾರಿ ಸರ್ಕಾರಿ ಪ್ರೌಢಶಾಲೆಯಲ್ಲಿ ಗುರುವಾರ ಮಕ್ಕಳಿಗೆ ರಾಗಿಮಾಲ್ಟ್ ನೀಡುವ ಯೋಜನೆಗೆ ಚಾಲನೆ ನೀಡಲಾಯಿತು.

ರಾಗಿ ಮಾಲ್ಟ್ ವಿತರಣೆಗೆ ಚಾಲನೆ ನೀಡಿ ಮಾತನಾಡಿದ ತಹಶೀಲ್ದಾರ್ ಮಂಜುಳಾ, ರಾಜ್ಯ ಸರ್ಕಾರ ಉಚಿತ ಕಡ್ಡಾಯ ಶಿಕ್ಷಣ ಜೊತೆಗೆ ಮಕ್ಕಳನ್ನು ಆರೋಗ್ಯವಂತರಾಗಿ ಸದೃಢಗೊಳಿಸಲು ಜಾರಿಗೆ ತಂದಿರುವ ಮಧ್ಯಾಹ್ನದ ಬಿಸಿಯೂಟ ಜೊತೆಗೆ ಪೌಷ್ಟಿಕ ಆಹಾರ ಒದಗಿಸುವ ಈ ಕಾರ್ಯಕ್ರಮಗಳ ಮಕ್ಕಳ ಪ್ರಗತಿಗೆ ಸಹಕಾರಿಯಾಗಿದೆ. ಮಕ್ಕಳಿಗೆ ಪೌಷ್ಟಿಕಾಂಶದ ಕೊರತೆಯಾಗದಂತೆ ತಡೆಗಟ್ಟಲು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಬಿಇಓ ಮಂಜುಳಾ ಮಾತನಾಡಿ, ಸರ್ಕಾರದ ಈ ಯೋಜನೆ ನಿಜಕ್ಕೂ ಉಪಯೋಗವಾಗಲಿದೆ. ರಾಗಿ ಮಾಲ್ಟ್ ನೀಡುವುದರಿಂದ ರುಚಿ ಹಾಗೂ ಪೌಷ್ಟಿಕಾಂಶ ಕೊರತೆಯನ್ನು ನಿಗಿಸುತ್ತದೆ ಎಂದರು.

ತಾಪಂ ಇಓ ಶ್ರೀನಿವಾಸ್ ಮಾತನಾಡಿ, ಮಕ್ಕಳು ಸರ್ಕಾರದ ಸವಲತ್ತು ಪಡೆಯುವ ಮೂಲಕ ಉನ್ನತ ಶಿಕ್ಷಣ ಪಡೆದು ಮಾನಸಿಕ ಹಾಗೂ ಶೈಕ್ಷಣಿಕ ಬೆಳವಣಿಗೆಯಿಂದ ಸಾಧನೆ ಮಾಡಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಂಗಸ್ವಾಮಿ, ಬಿಆರ್‌ಸಿ ಮಹದೇವ ಕುಮಾರ್, ಮುಖ್ಯ ಶಿಕ್ಷಕ ವಿಶ್ವನಾಥ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಜೋಸೆಫ್ ಅಲೆಕ್ಸಾಂಡರ್, ನಗರಸಭೆ ಸದಸ್ಯ ನಾಸಿರ್ ಷರೀಫ್, ಎಸ್‌ಡಿಎಂಸಿ ಅಧ್ಯಕ್ಷೆ ಪವಿತ್ರ, ಇಸಿಓ ಚಾಮರಾಜು, ಸಿ.ಆರ್.ಪಿ. ಸಮೀರಾ, ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಶಿವರಾಜು, ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಕ್ಬರ್, ಡಾ. ಉಮಾಶಂಕರ್ ಇದ್ದರು.



ಕೊಳ್ಳೇಗಾಲದ ವಸಂತ ಕುಮಾರಿ ಸರ್ಕಾರಿ ಪ್ರೌಢಶಾಲೆಯಲ್ಲಿ ಮಕ್ಕಳಿಗೆ ರಾಗಿಮಾಲ್ಟ್ ನೀಡುವ ಯೋಜನೆಗೆ ಚಾಲನೆ ನೀಡಲಾಯಿತು.

ಮ್ಯಾನ್ಯುವಲ್ ಸ್ಕ್ಯಾವೆಂಜರ್ ಜಾಗೃತಿ ಸಮಿತಿ ಸಭೆ ಮುಂದೂಡಿಕೆಗೆ ವಿರೋಧ



ಮ್ಯಾನ್ಯುವಲ್ ಸ್ಕ್ಯಾವೆಂಜರ್ ಜಾಗೃತಿ ಸಮಿತಿ ಸಭೆಯನ್ನು ಶೀಘ್ರ ಕರೆಯುವಂತೆ ಒತ್ತಾಯಿಸಿ ಸಫಾಯಿ ಕರ್ಮಚಾರಿ ಮೇಲುಸ್ತುವಾರಿ ಸಮಿತಿ ರಾಜ್ಯ ಸದಸ್ಯ ಡಿ.ಆರ್.ರಾಜು ನೇತೃತ್ವದಲ್ಲಿ ಚಾಮರಾಜನಗರ ಜಿಲ್ಲಾಡಳಿತ ಭವನದ ಮುಂಭಾಗ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಬಿ.ಮಲ್ಲಿಕಾರ್ಜುನ ಅವರಿಗೆ ಮನವಿ ಸಲ್ಲಿಸಲಾಯಿತು.

ಚಾಮರಾಜನಗರ, ಫೆ.22–ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಗುರುವಾರ ಆಯೋಜಿಸಿದ್ದ ಜಿಲ್ಲಾ ಮಟ್ಟದ ಮ್ಯಾನ್ಯುಯೆಲ್ ಸ್ಕ್ಯಾವೆಂಜಿಂಗ್ ನಿಷೇಧ ಮತ್ತು ಪುನರ್ವಸತಿ ಕಾಯ್ದೆ ಅನುಷ್ಠಾನ ಜಿಲ್ಲಾ ಜಾಗೃತಿ ಸಮಿತಿ ಸಭೆಯ ಮುಂದೂಡಿಕೆ ವಿರೋಧಿಸಿ ಸಫಾಯಿ ಕರ್ಮಚಾರಿ ಮೇಲುಸ್ತುವಾರಿ ಸಮಿತಿಯ ರಾಜ್ಯ ಸದಸ್ಯರು ಮುಂದಾದರು.

ಸದ್ಯದಲ್ಲೇ ಮ್ಯಾನ್ಯುವಲ್ ಸ್ಕ್ಯಾವೆಂಜರ್ ಜಾಗೃತಿ ಸಮಿತಿ ಸಭೆ ಕರೆಯದಿದ್ದರೆ ಜಿಲ್ಲಾಡಳಿತ ಭವನದ ಮುಂದೆ ಪ್ರತಿಭಟನೆ ನಡೆಸುದಾಗಿ ಎಂದು ಸಫಾಯಿ ಕರ್ಮಚಾರಿ ಮೇಲುಸ್ತುವಾರಿ ಸಮಿತಿ ರಾಜ್ಯ ಸದಸ್ಯ ಡಿ.ಆರ್. ರಾಜು ಎಚ್ಚರಿಸಿದರು. ಇದೇ ವೇಳೆ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಬಿ. ಮಲ್ಲಿಕಾರ್ಜುನಯ್ಯ ಮಾತನಾಡಿ, ಕಾರಣಾಂತರಗಳಿಂದ ಇಂದಿನ ಸಭೆಯನ್ನು ಮುಂದೂಡಲಾಗಿದೆ. ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ, ಒಂದೆರಡು ದಿನದಲ್ಲಿ ಸಭೆ ಕರೆಯುವುದಾಗಿ ಭರವಸೆ ನೀಡಿದರು.


ಗುರುವಾರ ಮುಂದೂಡಿರುವ ಸಭೆಯನ್ನು ವಾರದೊಳಗೆ ಕರೆದು ಜಿಲ್ಲಾಧಿಕಾರಿ ಕಚೇರಿ, ಜಿಲ್ಲಾ ನಗರ ಅಭಿವೃದ್ಧಿ ಕೋಶ, ನಗರಸಭೆ, ಪಟ್ಟಣ ಪಂಚಾಯಿತಿಗಳಲ್ಲಿ ಖಾಲಿ ಇರುವ ಹುದ್ದೆಗೆ ಲೋಡರ್ಸ್ ಮತ್ತು ಕ್ಲೀನರ್‌ಗಳನ್ನು ವಿಶೇಷವಾಗಿ ನೇಮಕಾತಿ ಮೂಲಕ ನೇಮಕ ಮಾಡಲು ಫೆ.7ರಂದು ಅರ್ಜಿ ಆಹ್ವಾನಿಸಲಾಯಿತು. ಆದರೆ, ಸರ್ಕಾರದ ಆದೇಶದನ್ವಯ ಶೀಘ್ರವಾಗಿ ನೇಮಕ ಮಾಡಬೇಕು. ನಗರದ 9ನೇ ವಾರ್ಡ್ ಹಾಗೂ ಕೊಳ್ಳೇಗಾಲದ ಪೌರಕಾರ್ಮಿಕರ ಕಾಲೋನಿಯಲ್ಲಿ ಮನೆ ನಿರ್ಮಾಣ ಮಾಡಿಕೊಡಬೇಕು ಎಂದು ಸಮಿತಿ ರಾಜ್ಯ ಸದಸ್ಯ ಡಿ.ಆರ್.ರಾಜು ಒತ್ತಾಯಿಸಿದರು.

ಕೊಳ್ಳೇಗಾಲ ನಗರಸಭೆಯಲ್ಲಿ ಪೌರಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿರುವರನ್ನು ಜೇಷ್ಠತೆ ಆಧಾರದ ಮೇಲೆ ನಾಲ್ಕು ಮೇಸ್ತ್ರಿ ನೇಮಕ ಮಾಡಬೇಕು. ಜಿಲ್ಲೆಯ ಗ್ರಾಪಂ ಪೌರಕಾರ್ಮಿಕರಿಗೆ ಸರ್ಕಾರಿ ಜಾಗ ಗುರುತಿಸಿ ಮನೆ ನಿರ್ಮಿಸಿಕೊಡಬೇಕು. ಪೌರಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಬೇಕು. ಇಲ್ಲದಿದ್ದರೆ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿ ಮನವಿ ಸಲ್ಲಿಸಿದರು. ರಾಜ್ಯ ಪೌರಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಆರ್ಮುಗಂ, ಪ್ರಧಾನ ಕಾರ್ಯದರ್ಶಿ ವೈ.ಕೆ. ಮೋಳೆ ಪಳನಿ, ಉಪಾಧ್ಯಕ್ಷ ಕೆ.ಎನ್.ಪುರ ಕುಮಾರ್, ಪ್ರಧಾನ ಕಾರ್ಯದರ್ಶಿ. ಆರ್. ನಾಗರಾಜು ನಗರ ಅಧ್ಯಕ್ಷ. ಸಿ.ಕೆ. ಮಹೇಶ್, ಮೇಗಲಹುಂಡಿ ಮಹಾದೇವ ಚಾಮರಾಜನಗರ ತಾಲೂಕ ಅಧ್ಯಕ್ಷ ಬಳಚವಾಡಿ ರಾಜು ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ಸಿ.ಪಿ.ಷಣ್ಮುಗಂ, ಹನೂರು ತಾಲೂಕು ಅಧ್ಯಕ್ಷ ಪಿ.ಮಹೇಶ್, ಮಾಂಬಳ್ಳಿ ಸುರೇಶ ಹಾಜರಿದ್ದರು.

ನಂದಿನಿ ಉತ್ಪನ್ನಗಳ ಮೂಲಕ ಸಂವಿಧಾನ ಜಾಗೃತಿ

ಚಾಮರಾಜನಗರ, ಫೆ22–ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಜಿಲ್ಲಾದ್ಯಂತ ಸಂವಿಧಾನ ಜಾಗೃತಿ ಜಾಥಾ ಯಶಸ್ವಿಯಾಗಿ ನಡೆಸುತ್ತಿದ್ದು, ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ (ಚಾಮುಲ್) ದಿಂದಲೂ ಜಾಗೃತಿ ಮೂಡಿಸಲಾಗುತ್ತಿದೆ.

ಬೆಂಗಳೂರಿನಲ್ಲಿ ಫೆ.24 ಮತ್ತು 25ರಂದು ನಡೆಯಲಿರುವ ಭಾರತ ಸಂವಿಧಾನ ಹಾಗೂ ರಾಷ್ಟ್ರೀಯ ಐಕ್ಯತಾ ಸಮಾವೇಶದ ಪ್ರಯುಕ್ತ ಚಾಮುಲ್ ನೆರವಿನಿಂದ ಜಿಲ್ಲೆ ಹಾಗೂ ನೆರೆಯ ರಾಜ್ಯದ ಗಡಿ ಭಾಗ ತಮಿಳುನಾಡು, ಕೇರಳದ ನಂದಿನಿ ಗ್ರಾಹಕರಿಗೆ ಪ್ರತಿನಿತ್ಯ ಸಂವಿಧಾನ ಜಾಗೃತಿ ಮೂಡಿಸಲಾಗುತ್ತಿದೆ.



ಚಾಮುಲ್ ತಯಾರಿಸುವ ನಂದಿನಿ ಉತ್ಪನ್ನಗಳ ಮೇಲೆ 'ಸಂವಿಧಾನ ನಮ್ಮ ಹೆಮ್ಮೆ ಬನ್ನಿ ಸಂವಿಧಾನ ಸಂಭ್ರಮಿಸೋಣ' ಎಂಬ ಘೋಷವಾಕ್ಯ ಮುದ್ರಿಸಲಾಗಿದ್ದು, ಮಂಡ್ಯ, ಮೈಸೂರು ಜಿಲ್ಲೆಗಳ ಭಾಗದ 5 ಲಕ್ಷ ಗ್ರಾಹಕರಿಗೆ ಪ್ರತಿನಿತ್ಯ ಜಾಗೃತಿ ಮೂಡಿಸಲಾಗುತ್ತಿದೆ. ಸಂವಿಧಾನ ಜಾಗೃತಿ ಕಾರ್ಯಕ್ರಮ ಮುಗಿಯುವ ತನಕ ಘೋಷವಾಕ್ಯದೊಂದಿಗೆ ನಂದಿನಿ ಉತ್ಪನ್ನಗಳ ಮೇಲೆ ಮುದ್ರಿಸಲಾಗುವುದು.

ಈ ಕಾರ್ಯಕ್ರಮಕ್ಕೆ ಜಿಲ್ಲೆಯ ಸಾರ್ವಜನಿಕರಿಂದ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ. ಈವರೆವಿಗೆ 50 ಲಕ್ಷ ಹಾಲಿನ ಪ್ಯಾಕೆಟ್‌ಗಳ ಮೇಲೆ ಮುದ್ರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗುಂಡ್ಲುಪೇಟೆ ನ್ಯಾಯಾಲಯಕ್ಕೆ ಭೇಟಿ ನೀಡಿದ ಕರ್ನಾಟಕ ಉಚ್ಚ ನ್ಯಾಯಾಲಯದ ಹಿರಿಯ ನ್ಯಾಯಮೂರ್ತಿ ಕೆ.ಸೋಮಶೇಖರ್ ಮತ್ತು ನ್ಯಾಯಾಧೀಶ ಅಮರಣ್ಣನವರ್ ಅವರನ್ನು ಚಾಮರಾಜನಗರ ಜಿಲ್ಲಾ ವಕೀಲರ ಸಂಘದಿಂದ ಸನ್ಮಾನಿಸಲಾಯಿತು. ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಶ್ರೀಧರ, ನ್ಯಾಯಾಧೀಶರಾದ ಬಿ.ಎಸ್.ಭಾರತಿ, ಎನ್.ಆರ್.ಲೋಕಪ್ಪ, ಬಿ.ಎಸ್.ಹೊನ್ನಸ್ವಾಮಿ, ಬಸವರಾಜ ತಳವಾರ, ಜಿ.ಜೆ.ಶಿವಕುಮಾರ್, ಕಾಂತಮ್ಮ, ರಘು, ಸಂಘದ ಜಂಟಿ ಕಾರ್ಯದರ್ಶಿ ಮಲ್ಲು, ಹೆಚ್.ಎಂ.ನಂಜುಂಡಸ್ವಾಮಿ ಇದ್ದರು.

ಹಣದ ವಿಚಾರವಾಗಿ ಭಾವನ ಕೊಲೆ

ಚಾಮರಾಜನಗರ: ಹಣದ ವಿಚಾರವಾಗಿ ಗಲಾಟೆ ನಡೆದು ವ್ಯಕ್ತಿ ತನ್ನ ಭಾವನನ್ನು (ಪತ್ನಿಯ ಅಣ್ಣ) ಕೊಲೆ ಮಾಡಿರುವ ಘಟನೆ ತಾಲೂಕಿನ ಸಾಗಡೆ ಗ್ರಾಮದಲ್ಲಿ ಗುರುವಾರ ಸಂಜೆ ನಡೆದಿದೆ. ಗ್ರಾಮದ ನಾಗೇಂದ್ರ (34) ಕೊಲೆಯಾಗಿದ್ದು, ಕೊಲೆ ಆರೋಪಿ ರಾಜು ಅಲಿಯಾಸ್ ಕಾಡರಾಜ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ನಾಗೇಂದ್ರನ ತಂಗಿಯನ್ನು ಅದೇ ಗ್ರಾಮದ ರಾಜುಗೆ ವಿವಾಹ ಮಾಡಿಕೊಡಲಾಗಿತ್ತು. ಆದರೆ, ಹಣದ ವಿಚಾರವಾಗಿ ಗುರುವಾರ ಸಂಜೆ ಗ್ರಾಮದ ಬಸ್ ನಿಲ್ದಾಣದ ಬಳಿ ಇಬ್ಬರಿಗೂ ಗಲಾಟೆ ನಡೆದಿದೆ. ಈ ವೇಳೆ ರಾಜು ತನ್ನ ಭಾವ ನಾಗೇಂದ್ರನನ್ನು ಕೊಲೆ ಮಾಡಿದ್ದಾನೆ. ಗ್ರಾಮಾಂತರ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಆರೋಪಿಯನ್ನು ಬಂಧಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನೋಂದಣಿಗೆ ಮನವಿ

ಚಾಮರಾಜನಗರ: ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ರಾಜ್ಯಮಟ್ಟದ ಬೃಹತ್ ಉದ್ಯೋಗ ಮೇಳವನ್ನು ಫೆ.26 ಮತ್ತು 27ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯ ವಿಕಲಚೇತನ ಉದ್ಯೋಗಾಕಾಂಕ್ಷಿಗಳು ಹೆಚ್ಚಿನ ಸಂಖ್ಯೆಯಲ್ಲಿ https://udyogo.skillconnet.koushalkar.com ವೆಬ್‌ಸೈಟ್‌ನಲ್ಲಿ ನೋಂದಾಯಿಸಿಕೊಳ್ಳಿ.

ಮೂರನೇ ಪುಟದಿಂದ

ಅಮಿತ್ ಷಾ ಹಸಿರು ನಿಶಾನೆ

ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿದ್ದಾರೆ. ಚಿಕ್ಕಬಳ್ಳಾಪುರ ಇಲ್ಲವೆ ಹೈದರಾಬಾದ್ ಕರ್ನಾಟಕದಲ್ಲಿ ಮತ್ತೊಂದು ಸ್ಥಾನವನ್ನು ಜೆಡಿಎಸ್‌ಗೆ ಬಿಟ್ಟುಕೊಡಲು ಷಾ ಸಮ್ಮತಿಸಿದ್ದು, ಇದು ಲೋಕಸಭಾ ಚುನಾವಣಾ ವೇಳಾಪಟ್ಟಿ ಪ್ರಕಟಗೊಂಡ ನಂತರ ಜೆಡಿಎಸ್‌ಗೆ ನಾಲ್ಕನೇ ಕ್ಷೇತ್ರ ಯಾವುದು ಎಂಬುದು ಅಂತಿಮಗೊಳ್ಳಲಿದೆ. ಕೇಂದ್ರ ಗೃಹ ಸಚಿವ ಅಮಿತಾ ಷಾ ಅವರ ಆಹ್ವಾನದ ಮೇರೆಗೆ ನಿನ್ನೆ ದೆಹಲಿಗೆ ತೆರಳಿದ್ದ ಕುಮಾರಸ್ವಾಮಿ ಇಂದು ಸುಮಾರು 20 ನಿಮಿಷಗಳ ಕಾಲ ಚರ್ಚೆ ನಡೆಸಿದ್ದಾರೆ.

ಅಲ್ಲದೆ, ನಿನ್ನೆ ರಾತ್ರಿ ಕೂಡ ಉಭಯ ನಾಯಕರು ಚರ್ಚೆ ಮಾಡಿದ್ದರು, ಇಂದು ಎರಡನೇ ಬಾರಿ ಮಾತುಕತೆ ನಡೆಸಿ ಸೀಟು ಹಂಚಿಕೆ ಅಂತಿಮಗೊಳಿಸಿದ್ದಾರೆ.

ಮಂಜುನಾಥ್ ಅವರನ್ನು ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದಲೇ ಕಣಕ್ಕಿಳಿಸಲು ಷಾ ಆಸಕ್ತಿ ತೋರಿರುವ ಜೊತೆಗೆ ಬೆಂಗಳೂರು ಉತ್ತರ ಕ್ಷೇತ್ರದ ಬಗ್ಗೆ ಮುಂದೆ ಪರಿಗಣಿಸೋಣ ಎಂದಿದ್ದಾರೆ. ಮಂಡ್ಯ, ಹಾಸನಕ್ಕೆ ಸಂಬಂಧಿಸಿದಂತೆ ಯಾರು ಏನೇ ಹೇಳಿದರೂ ಇದೇ ಅಂತಿಮ, ನಿಮ್ಮ ಮೂರು ಕ್ಷೇತ್ರಗಳಲ್ಲಿ ಚುನಾವಣಾ ಸಿದ್ಧತೆ ನಡೆಸಿ ಎಂದು ಅಮಿತ್ ಷಾ, ಕುಮಾರಸ್ವಾಮಿ ಅವರಿಗೆ ಸೂಚಿಸಿದ್ದಾರೆ.

ಚರ್ಚೆ ಸಂದರ್ಭದಲ್ಲಿ ರಾಜ್ಯ ಬಿಜೆಪಿ ಮುಖಂಡರ ನಡುವಿನ ಗೊಂದಲದ ಬಗ್ಗೆ ಷಾ ಮಾಹಿತಿ ಪಡೆದು ಕೆಲವು ಸಲಹೆಗಳನ್ನು ನೀಡಿದ್ದಾರೆನ್ನಲಾಗಿದೆ.

ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ಎನ್‌ಡಿಎ ಎರಡನೇ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಕುಪೇಂದ್ರ ರೆಡ್ಡಿ ಗೆಲುವಿಗೆ ನಿಮ್ಮ ಪ್ರಯತ್ನ ಮುಂದುವರೆಸಿ, ನಾವು ಏನು ಮಾಡಬೇಕೋ ಅದನ್ನು ಮಾಡುತ್ತೇವೆ ಎಂದಿದ್ದಾರೆ. ಉಳಿದಂತೆ ಚುನಾವಣಾ ಸಿದ್ಧತೆ, ಕಾಂಗ್ರೆಸ್ ಬಲಿಷ್ಠವಾದ ಕ್ಷೇತ್ರಗಳಲ್ಲಿ ಎನ್‌ಡಿಎ ಅಭ್ಯರ್ಥಿಯ ಗೆಲುವು ಹಾಗೂ ಈ ಕ್ಷೇತ್ರಗಳಲ್ಲಿ ವರ್ಚಸ್ವಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಬಗ್ಗೆಯೂ ಚರ್ಚೆ ಮಾಡಿದ್ದಾರೆ. ಮಂಡ್ಯ ಹಾಗೂ ಹಾಸನ ಕ್ಷೇತ್ರಗಳಲ್ಲಿ ಬಿಜೆಪಿಯ ಸ್ಥಳೀಯ ಮುಖಂಡರು ಎತ್ತುತ್ತಿರುವ ಅಪಸ್ವರಗಳ ಬಗ್ಗೆ ಷಾ ಗಮನಕ್ಕೆ ಕುಮಾರಸ್ವಾಮಿ ತಂದಿದ್ದಾರೆ. ಅದೆಲ್ಲವನ್ನೂ ನನಗೆ ಬಿಡಿ, ನೀವು ನಿಮ್ಮ ಕೆಲಸ ಮಾಡಿಕೊಳ್ಳಿ, ಮೈತ್ರಿ ಕೂಟದಲ್ಲಿ ಯಾರಿಂದಲೂ, ಯಾರ ಕಡೆಯಿಂದಲೂ ಅಪಸ್ವರ ಬರುವುದು ಬೇಡ. ಸಿದ್ದರಾಮಯ್ಯ ಆಡಳಿತ ವೈಫಲ್ಯ ಹಾಗೂ ಅವರ ಮಂತ್ರಿಮಂಡಲದ ಕೆಲವು ಸಚಿವರ ವಿರುದ್ಧದ ಭ್ರಷ್ಟಾಚಾರ ಆರೋಪಗಳಿಗೆ ಸಂಬಂಧಿಸಿದಂತೆ ಜಂಟಿಯಾಗಿ ಹೋರಾಟ ನಡೆಸಿ. ಚುನಾವಣೆಗೆ ಇನ್ನು ಸ್ವಲ್ಪ ದಿನಗಳಷ್ಟೇ ಉಳಿದಿದೆ. ಈಗಿನಿಂದಲೇ ಒಗ್ಗಟ್ಟಿನ ಬಲ ಪ್ರದರ್ಶನ ಮಾಡಿ ಮತಗಳು ಹಂಚಿ ಹೋಗದಂತೆ ನೋಡಿಕೊಳ್ಳಿ, ನೀವು ಬಲಿಷ್ಠರಿರುವ ಕಡೆ ನಮ್ಮವರು ನಿಮಗೆ ಸಂಪೂರ್ಣ ಬೆಂಬಲ ನೀಡಲಿದ್ದಾರೆ, ಅದೇ ರೀತಿ ನೀವು, ನಮ್ಮ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಿ ಎಂದು ಕುಮಾರಸ್ವಾಮಿ ಅವರಿಗೆ ಷಾ ಕಿವಿಮಾತು ಹೇಳಿದ್ದಾರೆ.

ಸಂಸದ ಶ್ರೀನಿವಾಸ್ ಪ್ರಸಾದ್ ಭೇಟಿ

ಮಾತುಕತೆ ವೇಳೆ ಲೋಕಸಭಾ ಚುನಾವಣೆಯ ಸಂಬಂಧ ಬಿಜೆಪಿ ಕಾರ್ಯತಂತ್ರ ಹಾಗೂ ಪ್ರಸಕ್ತ ರಾಜಕೀಯ ಬೆಳವಣಿಗೆ ಬಗ್ಗೆ ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ ಯಾರಿಗೂ ಒಳಗೆ ಪ್ರವೇಶವಿರಲಿಲ್ಲ. ತರುವಾಯ ಮಾತನಾಡಿದ ವಿಜಯೇಂದ್ರ, ಪ್ರಸಕ್ತ ರಾಜಕೀಯ ಬೆಳವಣಿಗೆ ಸಂಬಂಧ ಶ್ರೀನಿವಾಸ ಪ್ರಸಾದ್ ಜೊತೆ ಚರ್ಚೆ ಮಾಡಿದ್ದೇನೆ. ಅದರಲ್ಲೂ ಪ್ರಮುಖವಾಗಿ ಹಳೇ ಮೈಸೂರು ಭಾಗದ ರಾಜಕೀಯ ಬೆಳವಣಿಗೆ ಬಗ್ಗೆ ಕೂಲಂಕುಶವಾಗಿ ಸಮಾಲೋಚನೆ ನಡೆಸಿದ್ದೇನೆ. ಪಕ್ಷ ಸೂಕ್ತ ಅಭ್ಯರ್ಥಿಯನ್ನು ಕಣಕ್ಕಿಳಿಸಿದರೆ ಗೆಲ್ಲಬಹುದು ಎಂದು ಶ್ರೀನಿವಾಸ ಪ್ರಸಾದ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್‌ನ ಯಾವುದೇ ನಾಯಕರು ಎಷ್ಟೇ ಆರ್ಭಟ ಮಾಡಿದರೂ ಮೋದಿ ಅಲೆಯಲ್ಲಿ ಅವರಿಗೆ ಸೋಲು ಕಟ್ಟಿಟ್ಟ ಬುತ್ತಿ ಎಂದು ಶ್ರೀನಿವಾಸ ಪ್ರಸಾದ್ ತಿಳಿಸಿದ್ದಾರೆ ಎಂದರು.

ಶ್ರೀನಿವಾಸ ಪ್ರಸಾದ್ ಅವರು ರಾಜಕೀಯ ಜೀವನಕ್ಕೆ ಪಾದಾರ್ಪಣೆ ಮಾಡಿ ಮಾರ್ಚ್ 17 ಕ್ಕೆ 50 ವರ್ಷವಾಯಿತು. ಅವರ ರಾಜಕೀಯ ಜೀವನದ ಅನುಭವದಲ್ಲಿ ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗೆಲ್ಲಲು ಮಾರ್ಗದರ್ಶನ ನೀಡುವಂತೆ ಕೇಳಿದ್ದೇನೆ. ಅವರು ಕೂಡ ಕೆಲವು ಸಲಹೆಗಳನ್ನು ನೀಡಿದ್ದಾರೆ ಎಂದು ವಿಜಯೇಂದ್ರ ತಿಳಿಸಿದರು. ಬಿಜೆಪಿಯಲ್ಲಿ ಹಿರಿಯರನ್ನು ಕಡೆಗಣಿಸಲಾಗುತ್ತಿದೆ ಎಂಬ ಶ್ರೀನಿವಾಸ ಪ್ರಸಾದ್ ಅವರ ಈ ಮೊದಲಿನ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ವಿಜಯೇಂದ್ರ, ಬಿಜೆಪಿಯಲ್ಲಿ ಯಾರನ್ನು ಕಡೆಗಣಿಸುತ್ತಿಲ್ಲ. ಅದೆಲ್ಲಾ ಮುಗಿದ ಅಧ್ಯಾಯ ಎಂದು ಸ್ಪಷ್ಟಪಡಿಸಿದರು. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಇಂದು ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಆದರೆ ಈ ತಿಂಗಳಾಂತ್ಯಕ್ಕೆ ನಾನು ದೆಹಲಿಗೆ ಹೋಗುತ್ತಿದ್ದೇನೆ. ಆ ವೇಳೆ ಹೈಕಮಾಂಡ್ ಭೇಟಿ ಮಾಡಿ ಲೋಕಸಭಾ ಚುನಾವಣೆ ಸಂಬಂಧ ಚರ್ಚೆ ನಡೆಸುತ್ತೇನೆ ಎಂದರು.

ಆದರೆ ಲೋಕಸಭಾ ಚುನಾವಣೆಯ ಸೀಟು ಹಂಚಿಕೆ ಸೇರಿದಂತೆ ಯಾವುದೇ ವಿಚಾರದ ಬಗ್ಗೆ ಬಿಜೆಪಿ ಹಾಗೂ ಜೆಡಿಎಸ್ ನಡುವೆ ಗೊಂದಲ ಅಥವಾ ಭಿನ್ನಾಭಿಪ್ರಾಯ ವಿಲ್ಲ. ನಾವೆಲ್ಲಾ ಒಗ್ಗಟ್ಟಾಗಿದ್ದೇವೆ ಎಂದು ಹೇಳಿದರು. ಜಯದೇವ ಆಸ್ಪತ್ರೆಯ ನಿವೃತ್ತ ನಿರ್ದೇಶಕ ಡಾ.ಮಂಜುನಾಥ್, ಬೆಂಗಳೂರು ಉತ್ತರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಆಗುತ್ತಿದ್ದಾರೆಯೇ, ಅವರು ಬಿಜೆಪಿಗೆ ಸೇರುತ್ತಿದ್ದಾರೆಯೇ ಎಂಬ ಪ್ರಶ್ನೆಗೆ, ಈ ಬಗ್ಗೆ ನನಗೇನು ಗೊತ್ತಿಲ್ಲ. ಈ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ ಎಂದು ಸ್ಪಷ್ಟನೆ ನೀಡಿದರು.

ಬೆಂಗಳೂರು ಶಿಕ್ಷಕರ ಕ್ಷೇತ್ರದ ಉಪ ಚುನಾವಣೆ ಫಲಿತಾಂಶ ಮುಂದಿನ ಲೋಕಸಭಾ ಚುನಾವಣೆಗೆ ದಿಕ್ಸೂಚಿ ಎಂದು ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ವಿಜಯೇಂದ್ರ, ಸರ್ಕಾರ ಇದ್ದಾಗ ಉಪ ಚುನಾವಣೆ ಹೇಗೆ ನಡೆಯುತ್ತದೆ ಎಂಬುದು ಜನರಿಗೆ ಗೊತ್ತಿದೆ. ಹಾಗಾದರೆ ನಂಜನಗೂಡು ಉಪ ಚುನಾವಣೆ ನಂತರ ಸಿದ್ದರಾಮಯ್ಯ ಸರ್ಕಾರ ಅಧಿಕಾರಕ್ಕೆ ಬಾರದೆ ಏಕೆ ಸೋಲುಂಡಿತು ಎಂದು ಪ್ರಶ್ನಿಸಿದರು. ಬಿಜೆಪಿ ನಗರಾಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್‌ಗಳಾದ ಸಂದೇಶ್ ಸ್ವಾಮಿ, ಶಿವಕುಮಾರ್, ಬಿಜೆಪಿ ಮುಖಂಡ ಕವೀಶ್‌ಗೌಡ, ಮಾಜಿ ಜಿಲ್ಲಾಧ್ಯಕ್ಷ ಹೇಮಂತ್‌ಗೌಡ ಸೇರಿದಂತೆ ಹಲವು ನಾಯಕರು ಈ ವೇಳೆ ಹಾಜರಿದ್ದರು.

ಏ.10ರೊಳಗೆ ಅರಣ್ಯ ಇಲಾಖೆಗೆ ಹಿಂದಿರುಗಿಸಿ

ಈ ಸಂಬಂಧ ಜಾಗೃತಿ ಫ್ಲೆಕ್ಸ್‌ಗಳು ಹಾಗೂ ಪೋಸ್ಟರ್ ಗಳನ್ನು ಅಳವಡಿಸುವ ಮೂಲಕ ವನ್ಯಜೀವಿ ಅಂಗಾಂಗ ಹೊಂದಿರುವವರು ಸ್ವಯಂ ಪ್ರೇರಿತರಾಗಿ ಅವುಗಳನ್ನು ಅರಣ್ಯ ಇಲಾಖೆಗೆ ಒಪ್ಪಿಸಲು ಅನುವಾಗುವಂತೆ ಕಾರ್ಯ ಕ್ರಮ ಹಮ್ಮಿಕೊಂಡಿದೆ. ಪ್ರಮುಖವಾಗಿ ಅರಣ್ಯಕ್ಕೆ ಹೊಂದಿ ಕೊಂಡಂತಿರುವ ಕೊಡಗು,

ಚಿಕ್ಕಮಗಳೂರು, ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಯ ಗಡಿ ಭಾಗಗಳಲ್ಲಿ ಈ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಪಾರಂಪರಿಕವಾಗಿ ಸಂಗ್ರಹಿಸಲಾಗಿತ್ತು: ಸಹಜವಾಗಿಯೇ ಅನೇಕರು ಹುಲಿ ಉಗುರಿನ ಡಾಲರ್ ಹಾಕಿಕೊಳ್ಳುವುದು ಸರ್ವೇಸಾಮಾನ್ಯ. ಕೆಲವು ಮನೆಗಳಲ್ಲಿ ಪಾರಂಪರಿಕವಾಗಿಯೇ ಆನೆದಂತಗಳು, ಹುಲಿ ಚರ್ಮ ಮುಂತಾದವುಗಳನ್ನು ಅಲಂಕಾರಕ್ಕಾಗಿ ಇರಿಸಿಕೊಳ್ಳಲಾಗಿದೆ. ವನ್ಯಜೀವಿ ಅಂಗಾಂಗಗಳನ್ನು ಹೊಂದಿರುವುದು ಅಪರಾಧವೇನೂ ಆಗಿರಲಿಲ್ಲ. ನಂತರದ ದಿನಗಳಲ್ಲಿ ವನ್ಯಜೀವಿಗಳ ರಕ್ಷಣೆ ಉದ್ದೇಶದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವನ್ಯಜೀವಿ ಅಂಗಾಂಗಗಳ ಹೊಂದುವಿಕೆ ಹಾಗೂ ಮಾರಾಟವನ್ನು ನಿಷೇಧಿಸಿವೆ. ವನ್ಯಜೀವಿ ಅಂಗಾಂಗ ಹೊಂದಿರುವವರ ವಿರುದ್ಧ ವನ್ಯಜೀವಿ ಕಾಯ್ದೆಯಡಿ ಅರಣ್ಯ ಇಲಾಖೆ ಕ್ರಿಮಿನಲ್ ಕೇಸ್ ದಾಖಲಿಸಬಹುದಾಗಿದೆ. ಆದರೂ ಇದನ್ನು ಸಾರ್ವಜನಿಕರಾಗಲೀ, ಸರ್ಕಾರವೇ ಆಗಿರಲಿ ಈವರೆವಿಗೂ ಗಂಭೀರವಾಗಿ ಪರಿಗಣಿಸಿರಲಿಲ್ಲ, ಜನರಲ್ಲೂ ಅರಿವು ಮೂಡಿಸಿರಲಿಲ್ಲ. ಕೆಲ ತಿಂಗಳ ಹಿಂದೆ ಬಿಗ್‌ಬಾಸ್ ರಿಯಾಲಿಟಿ ಶೋನಲ್ಲಿ ಸ್ಪರ್ಧಿಯಾಗಿದ್ದ ವರ್ತೂರ್ ಸಂತೋಷ್ ಎಂಬುವರು ತಾವು ಧರಿಸಿರುವುದು ಹುಲಿ ಉಗುರು ಎಂದು ಹೆಮ್ಮೆಯಿಂದ ಹೇಳಿಕೊಂಡು ಹುಲಿ ಉಗುರು ಇರುವ ಡಾಲರ್ ಅನ್ನು ಪ್ರದರ್ಶಿಸಿದ್ದರು. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಬಿಗ್‌ಬಾಸ್ ರಿಯಾಲಿಟಿ ಶೋ ನಡೆಯುತ್ತಿದ್ದ ಸ್ಥಳಕ್ಕೇ ತೆರಳಿ, ಅವರನ್ನು ಬಂಧಿಸಿದ್ದರು. ಈ ಪ್ರಕರಣ ತೀವ್ರ ಚರ್ಚೆಗೆ ಗ್ರಾಸವಾಗಿತ್ತು. ಇದಾದ ನಂತರ ಸಾಮಾಜಿಕ ಜಾಲ ತಾಣದಲ್ಲಿ ಹುಲಿ ಉಗುರು ಡಾಲರ್ ಧರಿಸಿರುವ ಗಣ್ಯ ವ್ಯಕ್ತಿಗಳ ಫೋಟೋಗಳನ್ನು ಪೋಸ್ಟ್ ಮಾಡಿ, ಇವರ ಮೇಲೆ ಯಾಕೆ ಕ್ರಮ ಕೈಗೊಂಡಿಲ್ಲ ಎಂದು ಪ್ರಶ್ನಿಸಲಾಗುತ್ತಿತ್ತು. ಇದರ ಪರಿಣಾಮ ಎಂಬಂತೆ ಅರಣ್ಯ ಇಲಾಖಾ ಅಧಿಕಾರಿಗಳು ರಾಜ್ಯಸಭಾ ಸದಸ್ಯರೂ ಆದ ನಟ ಜಗ್ಗೇಶ್ ಅವರ ಮನೆ ಮೇಲೆ ದಾಳಿ ಮಾಡಿ ಅವರು ಧರಿಸಿದ್ದ ಹುಲಿ ಉಗುರಿನ ಡಾಲರ್ ಅನ್ನು ವಶಪಡಿಸಿಕೊಂಡಿದ್ದರು. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಪುತ್ರ ನಿಖಿಲ್ ಕುಮಾರಸ್ವಾಮಿ ಹುಲಿ ಉಗುರಿನ ಡಾಲರ್ ಇರುವ ಚೈನ್ ಧರಿಸಿದ್ದರಿಂದ ಅದು ತೀವ್ರ ಚರ್ಚೆಗೆ ಗ್ರಾಸವಾಗಿ ಸ್ವತಃ ಕುಮಾರಸ್ವಾಮಿಯವರೇ ಅರಣ್ಯಾಧಿಕಾರಿಗಳನ್ನು ತಮ್ಮ ಮನೆಗೆ ಕರೆಸಿಕೊಂಡು ಸದರಿ ಡಾಲರ್ ಯಾರೋ ಉಡುಗೊರೆಯಾಗಿ ನೀಡಿದ್ದು ಎಂದು ತಿಳಿಸಿ, ಅದು ನೈಜ ಹುಲಿ ಉಗುರು ಅಲ್ಲ ಎಂದು ಸ್ಪಷ್ಟಪಡಿಸಿದ್ದರು.


ಶಾಲಾ ಮಕ್ಕಳಿಗೆ ರಾಗಿ ಮಾಲ್ಟ್ ವಿತರಣೆ

ಬಡವರು, ಶ್ರಮಿಕರು, ದಲಿತ, ಶೂದ್ರರ ಮಕ್ಕಳಿಗೂ ಉತ್ತಮ ಶಿಕ್ಷಣ ದೊರೆಯಬೇಕು, ಮಕ್ಕಳೇ ದೇಶ ಹಾಗೂ ಸಮಾಜದ ಭವಿಷ್ಯ ಎಂದರು. ಶಿಕ್ಷಣದಿಂದ ಮಾತ್ರ ಸ್ವಾಭಿಮಾನ, ಜ್ಞಾನದ ಬೆಳವಣಿಗೆ ಸಾಧ್ಯ, ಶಿಕ್ಷಣ ಕೇವಲ ಓದು, ಬರಹ ಕಲಿಸುವುದಲ್ಲ, ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವ ವೈಚಾರಿಕತೆಯುಳ್ಳ ಶಿಕ್ಷಣ ಅಗತ್ಯ, ಇಂದಿನ ದಿನಗಳಲ್ಲಿ ವೈದ್ಯರು, ಎಂಜಿನಿಯರ್‌ಗಳೂ ಮೌಢ್ಯಕ್ಕೆ ಜೋತು ಬಿದ್ದಿದ್ದಾರೆ, ಬಸವಾದಿ ಶರಣರು ಮೌಢ್ಯಮುಕ್ತ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ್ದರು, ವೈಚಾರಿಕ ಶಿಕ್ಷಣದಿಂದ ಮಾತ್ರ ಮೌಢ್ಯಮುಕ್ತ ಸಮಾಜ ನಿರ್ಮಾಣ ಸಾಧ್ಯ. 2013ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಹಾಲು ಉತ್ಪಾದನೆ ಹೆಚ್ಚಾಯಿತು, ಇದಕ್ಕೆ ತಕ್ಕಂತೆ ಹಾಲಿನ ಮಾರಾಟ ಮತ್ತು ಉಪಉತ್ಪನ್ನಗಳನ್ನೂ ಹೆಚ್ಚು ಮಾಡಲು ಸಾಧ್ಯವಿಲ್ಲದ ಕಾರಣ, ಸರ್ಕಾರಿ ಶಾಲಾ ಮಕ್ಕಳಿಗೆ ವಾರದಲ್ಲಿ ಐದು ದಿನ ಹಾಲು ಕೊಡುವ ಕ್ಷೀರಭಾಗ್ಯ ಯೋಜನೆ ಹಾಗೂ ನಂತರ ಕಳೆದ ಬಜೆಟ್‌ನಲ್ಲಿ ವಾರಕ್ಕೆ ಎರಡು ದಿನ ಮೊಟ್ಟೆ ಕೊಡುವ ಕಾರ್ಯಕ್ರಮ ಆರಂಭಿಸಲಾಯಿತು ಎಂದರು.

ಜೆಎಸ್‌ಎಸ್ ವಿಜ್ಞಾನ, ತಂತ್ರಜ್ಞಾನ ವಿವಿಯಲ್ಲಿ ಯುವಬಿಂಬ–2024

ಸಾಂಸ್ಕೃತಿಕ, ಶೈಕ್ಷಣಿಕ ಉತ್ಸವಕ್ಕೆ ಗಾಯಕ ವಿಜಯಪ್ರಕಾಶ್ ಚಾಲನೆ

ಸಾಧನೆಗೆ ತಾಳ್ಮೆ ಅತೀ ಮುಖ್ಯ: ವಿದ್ಯಾರ್ಥಿಗಳಿಗೆ ವಿಜಯಪ್ರಕಾಶ್ ಕಿವಿಮಾತು



ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಆವರಣದಲ್ಲಿ ನಾಲ್ಕು ದಿನಗಳ 'ಯುವಬಿಂಬ–2024'ಕ್ಕೆ ಹೆಸರಾಂತ ಗಾಯಕ ವಿಜಯಪ್ರಕಾಶ್ ಚಾಲನೆ ನೀಡಿದರು



ಯುವಬಿಂಬ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ವಿವಿಧ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳು

ಮೈಸೂರು,ಫೆ22(ಎಂಟಿವೈ)– ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಆವರಣದಲ್ಲಿ ನಾಲ್ಕು ದಿನಗಳ ವರ್ಣರಂಜಿತ ನೃತ್ಯ ಸಂಗೀತ ಹಾಗೂ ಶೈಕ್ಷಣಿಕ ಕಾರ್ಯಕ್ರಮ 'ಯುವಬಿಂಬ–2024'ಕ್ಕೆ ಇಂದು ಚಾಲನೆ ದೊರೆಯಿತು.

ಎಸ್‌ಜೆಸಿ ಆವರಣದ ಫುಟ್‌ಬಾಲ್ ಮೈದಾನದಲ್ಲಿ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಹಾಗೂ ಭಾರತೀಯ ವಿಶ್ವವಿದ್ಯಾನಿಲಯಗಳ ಸಂಘದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಆಗ್ನೇಯ ವಲಯದ 'ಯುವಬಿಂಬ–2024' ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದ ಖ್ಯಾತ ಹಿನ್ನೆಲೆ ಗಾಯಕ ವಿಜಯಪ್ರಕಾಶ್ ಮಾತನಾಡಿ, ಮೈಸೂರಲ್ಲಿ ಜನಿಸಿದ ನಾನು ಬಾಲ್ಯದಿಂದಲೂ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಣ ಪಡೆದಿದ್ದೇನೆ. ಎಸ್‌ಜೆಸಿ ಹಳೆ ವಿದ್ಯಾರ್ಥಿಯೂ ಆಗಿದ್ದೇನೆ. ಜೆಎಸ್‌ಎಸ್ ಸಂಸ್ಥೆ ಹಾಗೂ ಸ್ವಾಮೀಜಿ ಮೊದಲಿನಿಂದಲೂ ಸಂಗೀತ, ಕಲೆಗೆ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ನಾನು ಈ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಥಿಯಾಗಿದ್ದಾಗ ಬಸವಣ್ಣನವರ ವಚನಗಳನ್ನು ಪ್ರಸ್ತುತಪಡಿಸುತ್ತಿದ್ದೆ. ನನ್ನ ಸಂಗೀತ ಬೆಳವಣಿಗೆಗೆ ಸುತ್ತೂರು ಸ್ವಾಮೀಜಿ ಪ್ರೋತ್ಸಾಹ ನೀಡಿದರು. ಸಂಸ್ಥೆಯ ಎಲ್ಲ ಕಾರ್ಯಕ್ರಮಗಳಲ್ಲೂ ನನಗೆ ಅವಕಾಶ ನೀಡುತ್ತಿದ್ದರು ಎಂದು ಸ್ಮರಿಸಿದರು.

ಗುರಿಯೊಂದಿಗೆ ತಾಳ್ಮೆ ಅಗತ್ಯ: ವಿದ್ಯಾರ್ಥಿಗಳು ನಿರ್ದಿಷ್ಟ ಗುರಿಯನ್ನಿಟ್ಟುಕೊಂಡು ಕಠಿಣ ಪರಿಶ್ರಮಪಡಬೇಕು. ಇದರೊಂದಿಗೆ ತಾಳ್ಮೆ ಇರಲೇಬೇಕು. ಕಲಿಕೆಗೆ ಪರಿಶ್ರಮ ಹಾಗೂ ಸಮಯವನ್ನು ಹೆಚ್ಚು ಮೀಸಲಿಡಬೇಕು. ಪ್ರಸ್ತುತ ಯುವ ಸಮುದಾಯ ವೇಗದ ಮನಸ್ಥಿತಿ ಹೊಂದಿದೆ. ಆ ವೇಗದ ಓಟದಲ್ಲಿ ಅಕ್ಕಪಕ್ಕ ಏನಿದೆ ಎಂದು ನೋಡುತ್ತಿಲ್ಲ. ಭವಿಷ್ಯದಲ್ಲಿ ನಾವು ಮಾಡಬೇಕಾದ ಸಾಧನೆ, ತಲುಪಬೇಕಾದ ಗುರಿ, ಸೇವಾ ಕ್ಷೇತ್ರವನ್ನು ವಿದ್ಯಾರ್ಥಿ ದೆಸೆಯಲ್ಲಿಂಯೇ ಆಯ್ಕೆ ಮಾಡಿಕೊಳ್ಳಬೇಕು. ಆಗ ಮಾತ್ರ ಸಾಧನೆ ಮಾಡಲು ಸಾಧ್ಯ. ವಿದ್ಯಾರ್ಥಿಗಳು ಪ್ರತಿಕ್ಷಣವನ್ನು ಖುಷಿಯಿಂದ ಅನುಭವಿಸಬೇಕು ಎಂದು ಸಲಹೆ ನೀಡಿದರು.

ನಮ್ಮಲ್ಲಿ ನೈತಿಕತೆ, ಮಾನವೀಯ ಮೌಲ್ಯಗಳು, ವಿನಯವಂತಿಕೆ ಗುಣ ವಿದ್ದರೆ, ಅವು ನಮ್ಮನ್ನು ಮುನ್ನಡೆಸುತ್ತವೆ. ಜೀವನದ ಆಯ್ಕೆಗಳು ಸರಿಯಾಗಿರಬೇಕು. ಏನು ಮಾಡಬೇಕು, ಏನು ಮಾಡಬಾರದು ಎಂಬ ಪ್ರಜ್ಞೆ ಹಾಗೂ ಆತ್ಮಸಾಕ್ಷಿಯು ಇರಬೇಕು. ಇಷ್ಟಿದ್ದರೆ ಜೀವನದ ಗುರಿ ತಲುಪಬಹುದು. ದೊಡ್ಡ ಸಾಧನೆಯನ್ನು ಮಾಡಬಹುದು. ನಾನು 1996ರಲ್ಲಿ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಬೇಕೆಂದು ಮುಂಬೈಗೆ ಹೋದೆ. ಸಾಕಷ್ಟು ಗೀತೆಗಳನ್ನು ಹಾಡಿದ್ದೇನೆ. ಹಂತ ಹಂತವಾಗಿ ಗಾಯನ, ಸಂಗೀತ ಕ್ಷೇತ್ರದಲ್ಲಿ ಮೇಲೇರಿದ್ದೇನೆ. 2008ರಲ್ಲಿ ಹಾಡಿದ ಜೈ ಹೋ ಹಾಡು ನನ್ನನ್ನು ಉತ್ತುಂಗಕ್ಕೆ ಕೊಂಡೊಯ್ದಿತು. ಅಲ್ಲಿವರೆಗೂ ನಾನು ತಾಳ್ಮೆಯಿಂದಲೇ ಗಾಯನ ಮುಂದುವರೆಸಿದ್ದೆ ಎಂದು ತಿಳಿಸಿದರು.

ಯುವಬಿಂಬ ಕಾರ್ಯಕ್ರಮಕ್ಕೆ ಕರ್ನಾಟಕದ ವಿವಿಧ ವಿಶ್ವವಿದ್ಯಾನಿಲಯ, ತೆಲಂಗಾಣ, ಛತ್ತೀಸ್‌ಗಡದ ವಿವಿಧ ವಿಶ್ವವಿದ್ಯಾನಿಲಯಗಳಿಂದ ಆಗಮಿಸಿರುವ ವಿದ್ಯಾರ್ಥಿಗಳು ಸಾಂಸ್ಕೃತಿಕ ನಗರಿ ಮೈಸೂರಿನ ಸೊಬಗನ್ನು ಸವಿಯಬೇಕು. ಚಾಮುಂಡಿಬೆಟ್ಟ, ಅರಮನೆ, ಮೃಗಾಲಯ ಸೇರಿದಂತೆ ಇನ್ನಿತರ ಪ್ರವಾಸಿ ತಾಣಗಳಿಗೆ ಭೇಟಿ ನೀಡಬೇಕು. ಮೈಸೂರಿಂದ ಹೋಗುವಾಗ ಸಿಹಿ ನೆನಪನ್ನು ಕೊಂಡೊಯ್ಯಬೇಕು ಎಂದು ಸಲಹೆ ನೀಡಿದರು.

ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎ.ಎನ್.ಸಂತೋಷ್ ಕುಮಾರ್ ಮಾತನಾಡಿ, ಉತ್ಸವದಲ್ಲಿ ಸಂಗೀತ, ನೃತ್ಯ, ಸಾಹಿತ್ಯ, ನಾಟಕ ಹಾಗೂ ಪ್ರದರ್ಶಕ ಕಲೆಗಳ 27 ಸ್ಪರ್ಧೆಗಳು ನಡೆಯಲಿದ್ದು, ಆಗ್ನೇಯ ವಲಯದ ವಿಶ್ವವಿದ್ಯಾಲಯಗಳ 1,250 ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.


ಕಾರ್ಯಕ್ರಮದಲ್ಲಿ ಎಐಯು ಜಂಟಿ ಕಾರ್ಯದರ್ಶಿ ಡಾ.ಬಲ್ಜಿತ್ ಸಿಂಗ್ ಸೆಕ್ಹಾನ್, ಜೆಎಸ್‌ಎಸ್ ಮಹಾವಿದ್ಯಾಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಸಿ.ಜಿ.ಬೆಟ್‌ಸೂರಮಠ, ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಬಿ.ಸುರೇಶ್, ಕುಲಸಚಿವ ಪ್ರೊ.ಎಸ್.ಎ.ಧನರಾಜ್, ಪ್ರಾಂಶುಪಾಲ ಪ್ರೊ.ಸಿ.ನಟರಾಜು, ಪರೀಕ್ಷಾ ನಿಯಂತ್ರಣಾಧಿಕಾರಿ ಪ್ರೊ.ಎಂ.ಎನ್.ನಾಗೇಂದ್ರ ಪ್ರಸಾದ್, ಪ್ರೊ.ಎಂ.ಎಸ್.ಸುನಿಲ್ ಕುಮಾರ್ ಉಪಸ್ಥಿತರಿದ್ದರು.

ಬೊಂಬೆ ಹೇಳುತೈಯ್ತೆ, ಜೈ ಹೋ ಗೀತೆಗೆ ತಲೆದೂಗಿದ ವಿದ್ಯಾರ್ಥಿಗಳು

ಯುವಬಿಂಬ ಕಾರ್ಯಕ್ರಮದಲ್ಲಿ ಗಾಯಕ ವಿಜಯಪ್ರಕಾಶ್ ನಟ ದಿ.ಪುನೀತ್ ರಾಜ್‌ಕುಮಾರ್ ಗಾಯನದ ಬೊಂಬೆ ಹೇಳುತೈಯ್ತೆ ಮತ್ತೆ ಹೇಳುತೈಯ್ತೆ ನೀನೇ ರಾಜಕುಮಾರ ಕನ್ನಡ ಹಾಡು ಹಾಗೂ ಜೈ ಹೋ ಹಿಂದಿ ಗೀತೆಯನ್ನು ಹಾಡಿದರು. ತೆಲಂಗಾಣದ ವಿದ್ಯಾರ್ಥಿಗಳಿಗಾಗಿ ತೆಲುಗು ಗೀತೆಯನ್ನು ಹಾಡಿ ಗಮನ ಸೆಳೆದರು. ಜೈ ಹೋ ಗೀತೆ ಹಾಡುವಾಗ ನೂರಾರು ವಿದ್ಯಾರ್ಥಿಗಳು ಧ್ವನಿಗೂಡಿಸಿದರು. ಇದೇ ವೇಳೆ ಫೆ.21ರಂದು ಜನ್ಮದಿನ ಆಚರಿಸಿಕೊಂಡ ಹಿನ್ನೆಲೆಯಲ್ಲಿ ಎಸ್‌ಜೆಸಿ ವತಿಯಿಂದ ವೇದಿಕೆ ಮೇಲೆ ವಿಜಯಪ್ರಕಾಶ್ ಅವರಿಂದ ಕೇಕ್ ಕಟ್ ಮಾಡಿಸಲಾಯಿತು. ಈ ಸಂದರ್ಭದಲ್ಲಿ ವಿಜಯಪ್ರಕಾಶ್ ಅವರು ಎಸ್‌ಜೆಸಿ ಸಿಬ್ಬಂದಿಯಾಗಿರುವ ಸಹೋದರ ಫಣೀಂದ್ರ ಅವರನ್ನು ವೇದಿಕೆ ಮೇಲೆ ಕರೆಸಿ, ಕೇಕ್ ತಿನ್ನಿಸಿದರು.

ಅರಣ್ಯ ಕಳೆ ಲಂಟಾನದಿಂದ ವನ್ಯಜೀವಿ ಕಲಾಕೃತಿ ತಯಾರು ಪ್ರೋತ್ಸಾಹಿಸಲು ಕೋಟಿ ನೆರವು

- ಅರಣ್ಯ ಸಚಿವ ಈಶ್ವರ ಖಂಡ್ರೆ ಘೋಷಣೆ
- ಬುಡಕಟ್ಟು ಜನರಿಗೆ ಜೀವನೋಪಾಯ ಕಲ್ಪಿಸುವ ಮಾರ್ಗ



ಲಂಟಾನಕಳೆಗಿಡದಿಂದ ತಯಾರಿಸಿದ ಆನೆ ಕಾಡೆಮ್ಮೆ ಕಲಾಕೃತಿಯನ್ನು ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಅನಾವರಣಗೊಳಿಸಿದ ನಂತರ ಅರಣ್ಯ ಸಚಿವ ಈಶ್ವರ್ ಖಂಡ್ರೆ ಮಾತನಾಡುತ್ತಿರುವುದು.

ಮೈಸೂರು, ಫೆ.22(ಎಂಟಿವೈ)– ಬಂಡೀಪುರ, ನಾಗರಹೊಳೆ ಸೇರಿದಂತೆ ವಿವಿಧ ಅರಣ್ಯ ಪ್ರದೇಶದಲ್ಲಿ ಭಾರಿ ಪ್ರಮಾಣದಲ್ಲಿ ಬೆಳೆದು ನಿಂತಿರುವ ಅನುಪಯುಕ್ತ ಕಳೆ ಲಂಟಾನದಿಂದ ಪೀಠೋಪಕರಣ ತಯಾರಿಸಲು ಪ್ರೋತ್ಸಾಹಕವಾಗಿ ಒಂದು ಕೋಟಿ ರೂ. ನೆರವು ನೀಡುವುದಾಗಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ತಿಳಿಸಿದ್ದಾರೆ.

ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಗುರುವಾರ ಲಂಟಾನ ಕಳೆ ಗಿಡದಿಂದ ತಯಾರಿಸಿದ ಆನೆ, ಕಾಡೆಮ್ಮೆ ಆಕೃತಿಗಳನ್ನು ಅನಾವರಣ ಮಾಡಿ ಮಾತನಾಡಿದ ಅವರು, ಸಸ್ಯಾಹಾರಿ ಪ್ರಾಣಿಗಳಿಗೂ ಉಪಯೋಗವಾಗದ, ಇತರೆ ಜಾತಿಯ ಗಿಡ, ಹುಲ್ಲು, ಮರ ಬೆಳೆಯುವುದಕ್ಕೂ ಅಡ್ಡಿಯಾಗಿರುವ ಮುಳ್ಳಿನಿಂದ ಕೂಡಿರುವ ಕಳೆಗಿಡ ಲಂಟಾನ ರಾಜ್ಯದ ಬಂಡೀಪುರ, ನಾಗರಹೊಳೆ, ಬಿಳಿಗಿರಿ ರಂಗನಬೆಟ್ಟ ಹುಲಿ ಸಂರಕ್ಷಿತ ಪ್ರದೇಶ ಮಾತ್ರವಲ್ಲದೆ, ಬಹುತೇಕ ಎಲ್ಲಾ ಅರಣ್ಯ ಪ್ರದೇಶಗಳಲ್ಲೂ ವ್ಯಾಪಿಸಿದ್ದು, ಇದರಿಂದ ಆನೆ, ಜಿಂಕೆ ಇತ್ಯಾದಿ ಸಸ್ಯಹಾರಿ ಪ್ರಾಣಿಗಳಿಗೆ ಹುಲ್ಲೂ ಸಿಗದಂತಾಗಿದೆ. ಹೀಗಾಗಿ ಈ ಕಳೆಯನ್ನು ತೆಗೆಯುವುದು ಅನಿವಾರ್ಯವಾಗಿದೆ. ಬುಡಕಟ್ಟು ಸಮುದಾಯದ ನೆರವಿನಿಂದ ಈ ಕಳೆ ತೆಗೆಸಿ, ಇದರಿಂದ ಅಲಂಕಾರಿಕ ವಸ್ತು ತಯಾರಿಸಿದರೆ ಅವರ ಜೀವನೋಪಾಯವೂ ಆಗುತ್ತದೆ. ಕಾಡಿನ ಕಳೆಯ ಸಮಸ್ಯೆಗೂ ಪರಿಹಾರ ಸಿಗುತ್ತದೆ ಎಂದು ಅಭಿಪ್ರಾಯಪಟ್ಟರು.

ಲಂಟಾನದಿಂದ ತಯಾರಿಸಿದ ಪೀಠೋಪಕರಣ, ಅಲಂಕಾರಿಕ ವಸ್ತುಗಳು ಮತ್ತು ವನ್ಯಜೀವಿ ಆಕೃತಿಗಳಿಗೆ ದೇಶ–ವಿದೇಶದಲ್ಲಿ ಬೇಡಿಕೆ ಸೃಷ್ಟಿಸಲು ವ್ಯಾಪಕ ಪ್ರಚಾರ ನೀಡುವ ಅಗತ್ಯವಿದೆ. ಆನ್‌ಲೈನ್ ಮೂಲಕ ಮಾರಾಟ ಮಾಡಲು ವೇದಿಕೆ ಕಲ್ಪಿಸಲು ಕ್ರಮ ವಹಿಸುವ ಸಾಧ್ಯತೆಗಳ ಕುರಿತಂತೆ ವರದಿ ಸಲ್ಲಿಸಲು ಸೂಚಿಸಿದ ಅವರು, ಲಂಟಾನ ಕಳೆ ಗಿಡ ವಿದೇಶದಿಂದ ನಮ್ಮ ದೇಶಕ್ಕೆ ಆಗಮಿಸಿದೆ. ಇದು ರಕ್ತಬೀಜಾಸುರನಂತೆ ಕಾಡನ್ನು ಆವರಿಸುತ್ತಿದ್ದು ಇದನ್ನು ವೈಜ್ಞಾನಿಕವಾಗಿ ನಿರ್ಮೂಲನೆ ಮಾಡುವ ಅಗತ್ಯವಿದೆ. ಲಂಟಾನವನ್ನು ಹೆಚ್ಚಿನ ಪ್ರಮಾಣದಲ್ಲಿ ಬುಡಸಹಿತ ತೆಗೆದು ಕಲಾಕೃತಿ ತಯಾರಿಸಲು ಬುಡಕಟ್ಟು ಮತ್ತು ಆದಿವಾಸಿಗಳಿಗೆ ಸೂಕ್ತ ತರಬೇತಿ ನೀಡಿದರೆ ಸಾವಿರಾರು ಜನರಿಗೆ ಉದ್ಯೋಗಾವಕಾಶ ಲಭಿಸುತ್ತದೆ. ಲಂಟಾನ ಸಮಸ್ಯೆಯೂ ಪರಿಹಾರವಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಹಿರಿಯ ಐಎಫ್‌ಎಸ್ ಅಧಿಕಾರಿ ಕುಮಾರ್ ಪುಷ್ಕರ್ ಹಾಗೂ ಇನ್ನಿತರರು ಇದ್ದರು.

ಉಚಿತ ಆರೋಗ್ಯ ಶಿಬಿರ

ಮೈಸೂರು,ಫೆ.22–ಪಿಕೆಟಿಬಿ ಮತ್ತು ಸಿಡಿ ಆಸ್ಪತ್ರೆ ಐಸಿಟಿಸಿ ವಿಭಾಗ ಮತ್ತು ಎನ್‌ಜೆ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ ಬನ್ನಿಮಂಟಪ ವತಿಯಿಂದ ಫೆ.24ರಂದು ಮಂಜುನಾಥಪುರದ ದೊಡ್ಡಮ್ಮ ತಾಯಿ ಸಮುದಾಯ ಭವನದಲ್ಲಿ ಉಚಿತ ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿದೆ. ಆರೋಗ್ಯ ಶಿಬಿರದಲ್ಲಿ ಉಚಿತವಾಗಿ ಬಿ ಪಿ, ಶುಗರ್, ಟಿಬಿ, ಓಬಿಜಿ, ಗ್ಯಾಸ್ಟಿಕ್ ಸಮಸ್ಯೆ, ಹೆಚ್.ಐ.ವಿ, ತಂಬಾಕು, ಮೂಳೆ, ಗರ್ಭಕೋಶ ತೊಂದರೆ, ಕ್ಯಾನ್ಸರ್ ಸರ್ಜರಿ, ಇ.ಎನ್.ಟಿ, ಕಣ್ಣಿನ ತಪಾಸಣೆ, ಜನರಲ್ ತಪಾಸಣೆ ಉಚಿತ ಕಾನೂನುಗಳ ಸೇವೆ ಹಾಗೂ ಆಭಾ ಕಾರ್ಡ್, ಇ–ಶ್ರಮ್ ಕಾರ್ಡ್‌ನ್ನು ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಮೃಗಾಲಯದಿಂದ ಕಾಳಿ ಹುಲಿ ಸಂರಕ್ಷಿತ ಪ್ರದೇಶಕ್ಕೆ 40 ಜಿಂಕೆ ಸ್ಥಳಾಂತರ

ಟ್ರಕ್ ಮೂಲಕ ದೊಡ್ಡ ಬೋನ್‌ನಲ್ಲಿ ಚುಕ್ಕಿ ಜಿಂಕೆ ರವಾನೆ



ಮೈಸೂರು ಮೃಗಾಲಯದಿಂದ ಕಾಳಿ ಹುಲಿ ಸಂರಕ್ಷಿತ ಪ್ರದೇಶಕ್ಕೆ ಜಿಂಕೆಗಳನ್ನು ಸ್ಥಳಾಂತರಿಸಲಾಯಿತು.

ಮೈಸೂರು, ಫೆ.22(ಎಂಟಿವೈ)– ಮೈಸೂರು ಮೃಗಾಲಯದಲ್ಲಿ ಜಿಂಕೆಗಳ ಸಂಖ್ಯೆ ಹೆಚ್ಚಾದ ಹಿನ್ನೆಲೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಕಾಳಿ ಹುಲಿ ಸಂರಕ್ಷಿತ ಪ್ರದೇಶಕ್ಕೆ 40 ಚುಕ್ಕಿ ಜಿಂಕೆಗಳನ್ನು ಯಶಸ್ವಿಯಾಗಿ ಸ್ಥಳಾಂತರಿಸಲಾಗಿದೆ.

ಮೈಸೂರು ಮೃಗಾಲಯದಲ್ಲಿ ಕೆಲ ವರ್ಷಗಳಲ್ಲಿ ಪ್ರಾಣಿಗಳ ಸಂತಾನೋತ್ಪತ್ತಿಯಲ್ಲಿ ಗಮನಾರ್ಹ ಸಾಧನೆಯಾಗುತ್ತಿದ್ದು, ಕೆಲ ಸಸ್ಯಾಹಾರಿ ಪ್ರಾಣಿಗಳ ಸಂಖ್ಯೆ ಹೆಚ್ಚಳವಾಗಿದೆ. ಮೃಗಾಲಯದಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಜಿಂಕೆಗಳಿದ್ದ ಹಿನ್ನೆಲೆಯಲ್ಲಿ ಕಳೆದ 3 ವರ್ಷದ ಹಿಂದೆ ಅರಬ್ಬಿತಿಟ್ಟಿಗೆ 52 ಜಿಂಕೆಗಳನ್ನು ಸ್ಥಳಾಂತರಿಸಲಾಗಿತ್ತು. ಇದೀಗ 40 ಚುಕ್ಕಿ ಜಿಂಕೆಗಳನ್ನು ಸುರಕ್ಷಿತವಾಗಿ ಕಾಳಿ ಹುಲಿ ಸಂರಕ್ಷಿತ ಪ್ರದೇಶಕ್ಕೆ ಬಿಡಲಾಗಿದೆ.

ಕಳೆದ ಮೂರು ತಿಂಗಳಿಂದ ಜಿಂಕೆ ಇರುವ ಆವರಣದಲ್ಲಿ ದೊಡ್ಡ ದೊಡ್ಡ ಬೋನು ಇರಿಸಿ, ಅವುಗಳಲ್ಲಿ ಆಹಾರ ಪದಾರ್ಥ ಇಟ್ಟು ಜಿಂಕೆ ಒಳಗೆ ಬರುವುದನ್ನು ರೂಢಿ ಮಾಡಲಾಗಿತ್ತು ಎರಡು ದಿನದ ಹಿಂದೆ 3 ಬೋನ್‌ಗಳಲ್ಲಿದ್ದ 40 ಜಿಂಕೆಗಳನ್ನು ಕ್ರೇನ್ ಮೂಲಕ ಲಾರಿಗಳಲ್ಲಿಟ್ಟು ಸ್ಥಳಾಂತರಿಸಲಾಯಿತು.

ಕ್ವಾರಂಟೇನ್: ಮೈಸೂರು ಮೃಗಾಲಯದಿಂದ ಲಾರಿಗಳಲ್ಲಿ ಸಾಗಿಸಿದ ಜಿಂಕೆ ಗಳನ್ನು ಕಾಳಿ ಹುಲಿ ಸಂರಕ್ಷಿತ ಪ್ರದೇಶದ 2.5 ಎಕರೆ ಜಾಗದಲ್ಲಿ ಸುತ್ತಲೂ ಬೇಲಿ ಅಳವಡಿಸಿ, ಜಿಂಕೆಗಳನ್ನು ಬಿಡಲಾಗಿದೆ. ಹೊಸ ವಾತಾವರಣಕ್ಕೆ ಜಿಂಕೆಗಳು ಹೊಂದಿಕೊಳ್ಳಲೆಂಬ ಕಾರಣದಿಂದ ಕ್ವಾರಂಟೇನ್‌ನಲ್ಲಿಡಲಾಗಿದೆ. ಅಲ್ಲದೆ ಜಿಂಕೆಗಳ ಆರೋಗ್ಯ ಸ್ಥಿತಿಗತಿ ಬಗ್ಗೆಯೂ ಸೂಕ್ಷ್ಮವಾಗಿ ಗಮನಿಸಲಾಗುತ್ತದೆ. ವನ್ಯಜೀವಿಗಳಿಗೆ ಸೋಂಕು ಹರಡಬಾರದೆಂಬ ಉದ್ದೇಶದಿಂದ ಕ್ವಾರಂಟೇನ್‌ನಲ್ಲಿಡಲಾಗಿದೆ.

ಈ ಹಿಂದೆ 13 ಕಾಡೆಮ್ಮೆ(ಇಂಡಿಯನ್ ಗಾರ್)ಗಳನ್ನು ತಾವರೆಕೊಪ್ಪ ಅರಣ್ಯ, ಶಿವಮೊಗ್ಗದ ಸಿಂಹ ಸಫಾರಿ ಕೇಂದ್ರ ಹಾಗೂ ಜಿರಾಫೆಯನ್ನು ಬನ್ನೇರುಘಟ್ಟ, ಹಂಪಿಯ ಅಟಲ್ ಬಿಹಾರಿ ವಾಜಪೇಯಿ ಮೃಗಾಲಯಕ್ಕೆ ಸ್ಥಳಾಂತರ ಮಾಡಲಾಗಿತ್ತು.

ವಾಕ್, ಶ್ರವಣ ದೋಷವುಳ್ಳವರಿಗೆ ಅತೀ ಕಡಿಮೆ ದರದಲ್ಲಿ ಸಾಧನಗಳ ವಿತರಣೆ

ಸೂಕ್ತ ಸಮಯದಲ್ಲಿ ಪರೀಕ್ಷಿಸಿದರೆ ದೋಷ ಪರಿಹಾರ ಸಾಧ್ಯ: ಆಯಿಷ್ ನಿರ್ದೇಶಕಿ ಡಾ. ಪುಷ್ಪಾವತಿ ವಿಶ್ವಾಸ

ಮೈಸೂರು, ಫೆ.22(ಎಂಟಿವೈ)– ವಿಶ್ವ ಶ್ರವಣ ದಿನದ ಅಂಗವಾಗಿ ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ (ಆಯಿಷ್) 97 ವಾಕ್ ಮತ್ತು ಶ್ರವಣ ದೋಷವುಳ್ಳ ಮಕ್ಕಳು ಹಾಗೂ ವೃದ್ಧರಿಗೆ 117 ಶ್ರವಣ ಸಾಧನಗಳನ್ನು ವಿತರಿಸಲಾಯಿತು.

ಸಂಸ್ಥೆಯ ಸಭಾಂಗಣದಲ್ಲಿ ಗುರುವಾರ ಆಯಿಷ್ ಮತ್ತು ಹೆಬ್ಬಾಳದ ಫೌಶರ್ ಸೆನ್ಸಾರ್ ಟೆಕ್ನಾಲಜಿ ಇಂಡಿಯಾ ಕಂಪನಿ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 29 ಸಾವಿರ ರೂ. ಮೌಲ್ಯದ ಶ್ರವಣ ಸಾಧನಗಳನ್ನು ಫಲಾನುಭವಿಗಳಿಗೆ ಕೇವಲ 3 ಸಾವಿರ ರೂ.ಗಳಿಗೆ ವಿತರಿಸಲಾಯಿತು.

ಶ್ರವಣ ಸಾಧನ ವಿತರಣಾ ಕಾರ್ಯಕ್ರಮವನ್ನು ಫೌಶರ್ ಸೆನ್ಸಾರ್ ಟೆಕ್ನಾಲಜಿ ಇಂಡಿಯಾ ಮುಖ್ಯಸ್ಥ ಅಲೋಕ್ ಸಿನ್ಹಾ ಉದ್ಘಾಟಿಸಿ, ಮಾತನಾಡಿ, ವಾಕ್ ಮತ್ತು ಶ್ರವಣ ಸಮಸ್ಯೆ ಹೊಂದಿರುವ ಮಕ್ಕಳಿಗೆ ಸಾಮಾನ್ಯ ಮಕ್ಕಳಂತೆ ಸಮಾನ ಅವಕಾಶ ದೊರೆಯಬೇಕು. ಇದಕ್ಕಾಗಿ ನಮ್ಮ ಸಂಸ್ಥೆಯಿಂದ ಶ್ರವಣ ಸಾಧನಗಳನ್ನು ನೀಡಲಾಗಿದೆ. ವಿಶೇಷ ಮಕ್ಕಳು ಎಲ್ಲರೊಂದಿಗೆ ಬೆರೆಯುವ ವಾತಾವರಣ ಸೃಷ್ಟಿಸುವುದು ಎಲ್ಲರ ಜವಾಬ್ದಾರಿ. ಮಾನವ ಸಂಪನ್ಮೂಲ ಗಳಿಕೆಗಾಗಿ ಸೀಮಿತಗೊಳಿಸದೆ ಸಮಾಜ ಸೇವೆಗೂ ಸಿಗುವಂತಾಗಬೇಕು. ಆಗ ಮಾತ್ರ ಜನಕಲ್ಯಾಣ ಸಾಧ್ಯ. ದೈಹಿಕ ನ್ಯೂನತೆ ಇರುವ ಹಲವರು ಉತ್ತಮ ಸಾಧನೆಗಳನ್ನು ಮಾಡಿದ ಉದಾಹರಣೆಗಳಿವೆ. ವಿಶೇಷ ಮಕ್ಕಳು ಮನುಕುಲಕ್ಕೆ ಉತ್ತಮ ಕೊಡುಗೆ ನೀಡಬಲ್ಲರು. ಅವರ ಸಾಮರ್ಥ್ಯವನ್ನು ಅರಳಿಸುವ ಶಕ್ತಿ ಪೋಷಕರಲ್ಲಿದೆ ಎಂದರು.



ಮೈಸೂರಿನ ಆಯಿಷ್‌ನಲ್ಲಿ ಗುರುವಾರ ಫೌಶರ್ ಸೆನ್ಸಾರ್ ಟೆಕ್ನಾಲಜಿ ಇಂಡಿಯಾ ಕಂಪನಿ ವತಿಯಿಂದ ವಾಕ್ ಮತ್ತು ಶ್ರವಣ ದೋಷವುಳ್ಳ ಮಕ್ಕಳು ಹಾಗೂ ವೃದ್ಧರಿಗೆ ಶ್ರವಣ ಸಾಧನಗಳನ್ನು ವಿತರಿಸಲಾಯಿತು.

ಇದೇ ವೇಳೆ ಆಯಿಷ್ ನಿರ್ದೇಶಕಿ ಡಾ.ಎಂ.ಪುಷ್ಪಾವತಿ ಮಾತನಾಡಿ, ಮಕ್ಕಳಲ್ಲಿ ಶ್ರವಣ ದೋಷವನ್ನು ಪತ್ತೆ ಹಚ್ಚಲು ಜಿಲ್ಲೆಯ ಆಸ್ಪತ್ರೆಗಳಿಗೆ ಆಯಿಷ್ ತಂಡ ಭೇಟಿ ನೀಡಿ ನವಜಾತ ಮಕ್ಕಳನ್ನು ಪರೀಕ್ಷಿಸುತ್ತಿದ್ದು, ಶ್ರವಣದೋಷ ಎದುರಿಸುತ್ತಿರುವ ಮಕ್ಕಳಿಗೆ ಶ್ರವಣ ಸಾಧನಗಳನ್ನು ನೀಡಲಾಗುತ್ತಿದೆ. ಮಕ್ಕಳಿಗೆ ಕಿವಿ ಕೇಳಿಸದೆ ಇದ್ದರೆ ಅವರು ಮಾತನಾಡುವುದನ್ನು ಕಲಿಯುವುದಿಲ್ಲ. ಮಕ್ಕಳಲ್ಲಿ ಶ್ರವಣ ದೋಷವಿದೆಯೇ ಎಂಬುದನ್ನು ಆರಂಭದಲ್ಲಿಯೇ ಪತ್ತೆ ಹಚ್ಚಬೇಕು. ಶ್ರವಣ ಸಾಧನ ಬಳಕೆಯಿಂದ ಮಕ್ಕಳಿಗೆ ಶಬ್ದ ಕೇಳಿಸುತ್ತದೆ. ಹೊಸದಾಗಿ ಶ್ರವಣ ಸಾಧನ ಅಳವಡಿಸುವ ಸಂದರ್ಭ ನಾವು ಆಡುವ ಮಾತು ಹಾಗೂ ಪ್ರಕೃತಿಯಲ್ಲಿನ ಶಬ್ದ ಸೇರಿದಂತೆ ಪ್ರತಿಯೊಂದು ಶಬ್ದ ಮಗುವಿಗೆ ಕೇಳಿಸಲು ಪ್ರಾರಂಭವಾಗುತ್ತದೆ. ಶ್ರವಣ ಸಾಧನ ಹಾಕಿಕೊಂಡ ತಕ್ಷಣ ಮಕ್ಕಳು ಮಾತನಾಡುವುದಿಲ್ಲ. ಹಾಗಾಗಿ ಶ್ರವಣ ಸಾಧನವನ್ನು ಪಡೆದುಕೊಂಡ ನಂತರ ಮಕ್ಕಳಿಗೆ ಪೋಷಕರು ತರಬೇತಿ ನೀಡಬೇಕು. ಅದಕ್ಕೆ ಬೇಕಾದ ಮಾರ್ಗದರ್ಶನವನ್ನು ಆಯಿಷ್ ನೀಡಲಿದೆ ಎಂದರು.

ಶ್ರವಣ ದೋಷವುಳ್ಳವರಿಗೆ ಶ್ರವಣ ಸಾಧನ ನೀಡುತ್ತಿರುವ 2ನೇ ಕಾರ್ಯಕ್ರಮ ಇದಾಗಿದೆ. ಸರ್ಕಾರ ಮಾತ್ರವಲ್ಲ ಖಾಸಗಿ ಸಹಭಾಗಿತ್ವದಲ್ಲೂ ಶ್ರವಣ ಸಾಧನವನ್ನು ನೀಡಲಾಗುತ್ತಿದೆ. ಈ ಹಿಂದೆ ಬ್ಯಾಂಕ್ ಆಫ್ ಬರೋಡಾ 40 ಶ್ರವಣ ಸಾಧನವನ್ನು ನೀಡಿತ್ತು ಇದೀಗ ಫೌಶರ್ ಸೆನ್ಸಾರ್ ಟೆಕ್ನಾಲಜಿ ಇಂಡಿಯಾ ಕಂಪನಿ ಸಹಯೋಗದೊಂದಿಗೆ 117 ಶ್ರವಣ ಸಾಧನ ನೀಡಲಾಗಿದೆ. ಇನ್ನಷ್ಟು ಸಂಘ ಸಂಸ್ಥೆಗಳು ಮುಂದೆ ಬಂದರೆ ಮತ್ತಷ್ಟು ಮಂದಿಗೆ ಶ್ರವಣ ಸಾಧನ ನೀಡಬಹುದಾಗಿದೆ. ಗ್ರಾಮೀಣ ಪ್ರದೇಶಕ್ಕೆ ತೆರಳಿ ಶ್ರವಣ ದೋಷವುಳ್ಳ ಮಕ್ಕಳನ್ನು ಗುರುತಿಸಲು ನಮಗೆ ಜನವರಿ ತಿಂಗಳಿನಲ್ಲಿ ಐಸಿಐಸಿಐ 35 ಲಕ್ಷ ರೂ.ವೆಚ್ಚದ ವಾಹನ ನೀಡಿದೆ ಎಂದು ಹೇಳಿದರು.

ಶ್ರವಣ ಸಾಧನ ಪಡೆದುಕೊಂಡ ಹಾಸನ ಜಿಲ್ಲೆಯ ಹೊಳೆನರಸೀಪುರದ ತನಯ್ ಅವರ ತಾಯಿ ಗೀತಾ ಮಾತನಾಡಿ, ತನಯ್‌ಗೆ ಒಂದೂವರೆ ವರ್ಷದ ನಂತರ ಸಣ್ಣ ಶಬ್ದಗಳು ಕೇಳಿಸುತ್ತಿರಲಿಲ್ಲ. ಜೋರಾಗಿ ಮಾತನಾಡಿದಾಗ ಮಾತ್ರ ಆ ಶಬ್ದಕ್ಕೆ ಪ್ರತಿಕ್ರಿಯಿಸುತ್ತಿದ್ದ. ಇದರಿಂದ ನಮಗೆ ಮಗುವಿಗೆ ಶ್ರವಣ ದೋಷ ಇರುವುದು ಗಮನಕ್ಕೆ ಬಂತು. ಆಯಿಷ್‌ನಲ್ಲಿ ಶ್ರವಣ ಸಾಧನ ನೀಡುತ್ತಿರುವ ವಿಚಾರ ತಿಳಿದು ಇಲ್ಲಿಗೆ ಆಗಮಿಸಿದ್ದೇವೆ. ಈಗ ನಮ್ಮ ಮಗುವಿಗೆ ಶಬ್ದ ಕೇಳಿಸುತ್ತಿದ್ದು, ನಮಗೆ ಸಂತಸವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಆಯಿಷ್ ಶ್ರವಣ ವಿಭಾಗದ ಮುಖ್ಯಸ್ಥೆ ಡಾ.ಎನ್.ದೇವಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಶುಕ್ರವಾರ 23-2-2024
ಬೆಳ್ಳಿ ಬೆಳಕು
ಸಿನಿಮಾ ಪುರವಣಿ
ಮೈಸೂರು ಮಿತ್ರ
● ಸತ್ಯಮೂರ್ತಿ ತೋಳಹುಣಸೆ

'ಮೆಜೆಸ್ಟಿಕ್-2' ಚಿತ್ರದಲ್ಲಿ ಭರತ್, ಸಂಹಿತಾ ವೀನ್ಯಾ

ಡಜನ್ ದೆವ್ವಗಳ ಮಧ್ಯೆ ಕೋಮಲ್



ಹಾಸ್ಯನಟ ಕೋಮಲ್ ನಟನೆಯ 25ನೇ ಚಿತ್ರ 'ಕುಟೀರ'ಕ್ಕೆ ಇತ್ತೀಚೆಗೆ ಚಾಲನೆ ದೊರೆಯಿತು. ಅನೂಪ್ ಅಂಟೋನಿ ಆಕ್ಷನ್ ಕಟ್ ಹೇಳುತ್ತಿರುವ ಈ ಚಿತ್ರದಲ್ಲಿ ಬಿಗ್‌ಬಾಸ್ ಖ್ಯಾತಿಯ ಪ್ರಿಯಾಂಕ ತಿಮ್ಮೇಶ್ ನಾಯಕಿಯಾಗಿ ನಟಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ಕೋಮಲ್, ಅದೇಕೋ ನನಗೂ ಹಾರರ್ ಚಿತ್ರಗಳಿಗೂ ದೊಡ್ಡ ನಂಟಿದೆ ಅಂತ ಕಾಣುತ್ತೆ. ನಾನು ಮಾಡಿದ ಹಾರರ್ ಚಿತ್ರಗಳೆಲ್ಲ ಹಿಟ್ ಆಗಿವೆ. ಇದು ಕೂಡ ಹಾರರ್ ಕಾಮಿಡಿ ಚಿತ್ರ. ನಾನೀಗಾಗಲೇ ನೂರಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿದ್ದರೂ ಹೀರೋ ಆಗಿ ಇದು 25ನೇ ಚಿತ್ರ ಎನ್ನಬಹುದು. ಈ ಹಿಂದೆ ನಾನು ಮಾಡಿದ ಎಲ್ಲಾ ಹಾರರ್ ಕಾಮಿಡಿ ಸಿನಿಮಾಳಿಗಿಂತ ಈ ಚಿತ್ರದ ಕಥೆ ವಿಭಿನ್ನವಾಗಿದೆ. ನಾನು ತುಂಬಾ ಇಷ್ಟಪಡುವ ಹಾರರ್ ಫ್ಯಾಂಟಸಿ ಜಾನರ್‌ನ ಐದನೇ ಚಿತ್ರವಿದು. ಚಿತ್ರದ ಹೆಸರೇ ಹೇಳುವಂತೆ ಕುಟೀರ ಎಂದರೆ ಮನೆ. ಈ ಚಿತ್ರದಲ್ಲೂ ಒಂದು ದೊಡ್ಡ ಮನೆ ಇರುತ್ತದೆ. ಆಕಸ್ಮಿಕವಾಗಿ ನಾನಲ್ಲಿ ಸಿಕ್ಕಿಹಾಕಿಕೊಳ್ಳುತ್ತೇನೆ. ಅಲ್ಲಿರುವ ದೆವ್ವಗಳ ಜೊತೆ ನಾನು ಹೇಗೆ ಹೆಣಗಾಡುತ್ತೇನೆ ಎಂದು ನಿರ್ದೇಶಕರು ತುಂಬಾ ಚೆನ್ನಾಗಿ ತೋರಿಸುತ್ತಿದ್ದಾರೆ. ಒಂದು ಪಾಳು ಬಿದ್ದ ಮನೆಯಲ್ಲಿ ದೆವ್ವಗಳು ನಡೆಸುವ ಕುಚೇಷ್ಟೆಗಳ ಮೇಲೆ ಈ ಚಿತ್ರ ನಿಂತಿದೆ. ವಿಶೇಷವಾಗಿ ಈ ಚಿತ್ರದಲ್ಲಿ ಒಂದಲ್ಲ, ಎರಡಲ್ಲ, ಡಜನ್ ದೆವ್ವಗಳ ಜೊತೆಗೆ ನಾನು ಕಣ್ಣಾಮುಚ್ಚಾಲೆ ಆಡಬೇಕಾಗಿದೆ. ಚಿತ್ರದಲ್ಲಿ ಹಾರರ್, ಕಾಮಿಡಿ ಜೊತೆಗೆ ವಿಡಂಬನೆ ಸಹ ಇದೆ. ಚಿತ್ರದಲ್ಲಿ ಸಿಜಿ ವರ್ಕ್‌ಗೆ ಹೆಚ್ಚು ಪ್ರಾಮುಖ್ಯತೆಯಿದೆ ಎಂದು ಹೇಳಿದರು.

ನಾನೀ ಕಥೆ ಬರೆದಾಗಲೇ ಇದಕ್ಕೆ ಕೋಮಲ್ ನಾಯಕ ಅಂದುಕೊಂಡಿದ್ದೆ. ಕೋಮಲ್ ಸಹ ಕಥೆಕೇಳಿ ತುಂಬಾ ಇಷ್ಟಪಟ್ಟು ಒಪ್ಪಿದರು. ಮಾರ್ಚ್ ಎರಡನೇ ವಾರದಿಂದ ಚಿತ್ರೀಕರಣ ಆರಂಭ. ಯಶ್ ಶೆಟ್ಟಿ, ಕಾಕ್ರೋಚ್ ಸುಧಿ ಹಾಗೂ ಇತರರು ಚಿತ್ರದಲ್ಲಿದ್ದಾರೆ. ಬಿ.ಜಿ.ಭರತ್ ಅವರ ಸಂಗೀತ ನಿರ್ದೇಶನ, ಅರುಣ್ ಸುರೇಶ್ ಅವರ ಛಾಯಾಗ್ರಹಣ ಹಾಗೂ ಶಂಕರ್ ರಾಮನ್ ಅವರ ಸಂಭಾಷಣೆ ಈ ಚಿತ್ರಕ್ಕಿದೆ ಎಂದು ನಿರ್ದೇಶಕ ಅನೂಪ್ ಆಂಟೋನಿ ತಿಳಿಸಿದರು.

ಈ ಚಿತ್ರದ ನಿರ್ಮಾಪಕರು ಮಧು ಮರಿಸ್ವಾಮಿ. ಬಿಗ್‌ಬಾಸ್ ನಂತರ ಮೊದಲ ಬಾರಿಗೆ ತೆರೆಮೇಲೆ ನಟಿಸುತ್ತಿರುವ ಪ್ರಿಯಾಂಕ ತಿಮ್ಮೇಶ್ ಮಾತನಾಡಿ, ಚಿತ್ರದಲ್ಲಿ ಒಬ್ಬ ಆಂಗ್ಲೋ ಇಂಡಿಯನ್ ಯುವತಿಯಾಗಿ ನಾನು ಕೋಣೆಸಿಕೊಳ್ಳುತ್ತಿದ್ದೇನೆ ಎಂದು ಹೇಳಿದರು.

ಆಗ ದಾಸ ದರ್ಶನ್ ಈಗ ಮರಿದಾಸ ಭರತ್

ಎರಡು ದಶಕಗಳ ನಂತರ ಮತ್ತೆ ಮೆಜೆಸ್ಟಿಕ್‌ನಲ್ಲಿ ಮರಿದಾಸನ ಹವಾ..



ನಟ ದರ್ಶನ್‌ಗೆ ದಾಸ ಎಂಬ ಹೆಸರು ಬಂದಿದ್ದೇ ಮೆಜೆಸ್ಟಿಕ್ ಚಿತ್ರದಿಂದ. 22 ವರ್ಷಗಳ ಹಿಂದೆ ತೆರೆಕಂಡು ದಾಖಲೆ ಬರೆದಿದ್ದ ಆ ಚಿತ್ರ ದರ್ಶನ್‌ಗೆ ದೊಡ್ಡ ಹೆಸರನ್ನೂ ತಂದುಕೊಟ್ಟಿತ್ತು. ಆ ಚಿತ್ರಕ್ಕೆ ಸ್ಕ್ರಿಪ್ಟ್ ಕೆಲಸ ಮಾಡಿದ್ದ ರಾಮು ಅವರೇ ಈಗ ಮೆಜೆಸ್ಟಿಕ್ 2 ಚಿತ್ರ ನಿರ್ದೇಶಿಸುತ್ತಿದ್ದಾರೆ. ಈ ಚಿತ್ರದ ಮೂಲಕ ಹಿರಿಯ ನಿರ್ಮಾಪಕ ಶಿಲ್ಪಾ ಶ್ರೀನಿವಾಸ್‌ರ ಪುತ್ರ ಭರತ್ ನಾಯಕನಾಗಿ ಪರಿಚಯವಾಗುತ್ತಿದ್ದಾರೆ. ಟಿ.ಆನಂದಪ್ಪ ಈ ಚಿತ್ರಕ್ಕ ಬಂಡವಾಳ ಹೂಡುತ್ತಿದ್ದಾರೆ. ಕಳೆದ ವಾರ ಈ ಚಿತ್ರದ ಟೈಟಲ್ ಲಾಂಚ್ ಕಾರ್ಯಕ್ರಮ ನಡೆಯಿತು. ಹಿರಿಯ ನಿರ್ಮಾಪಕ ಶಿಲ್ಪಾ ಶ್ರೀನಿವಾಸ್ ಮಾತನಾಡಿ, 1976ರಿಂದ ಚಿತ್ರರಂಗದಲ್ಲಿದ್ದು, ಬಹುತೇಕ ಸ್ಟಾರ್‌ಗಳ ಜೊತೆ 25 ಸಿನಿಮಾ ನಿರ್ಮಿಸಿ, 500ಕ್ಕೂ ಹೆಚ್ಚು ಚಿತ್ರಗಳನ್ನು ವಿತರಿಸಿದ್ದೇನೆ. ಈಗ ನನ್ನ ಮಗ ಭರತ್ ಹೀರೋ ಆಗ್ತಿದಾನೆ, ಆತನನ್ನು ಹರಸಿ ಎಂದು ಹೇಳಿದರು. ನಿರ್ದೇಶಕ ರಾಮು ಮಾತನಾಡಿ, ಆರಂಭದಲ್ಲಿ ನಾನು ಪಿ.ಎನ್. ಸತ್ಯ, ಪ್ರೇಂ ಜೊತೆ ಕೆಲಸ ಮಾಡಿದ್ದೆ, ಮೆಜೆಸ್ಟಿಕ್ ಸ್ಕ್ರಿಪ್ಟ್ ಬರೆದಿದ್ದು ನಾನೇ, ನಂತರ ಸತ್ಯ ಅವರ ಜೊತೆ ಮನಸ್ತಾಪವಾಗಿ ನನ್ನನ್ನು ಬಿಟ್ಟು ಚಿತ್ರ ಮಾಡಿದರು. ನಾನು ಬೆಂಗಳೂರಿಗೆ ಬಂದಾಗ ಮೆಜೆಸ್ಟಿಕ್‌ನಲ್ಲಿ ನಡೀತಿರುವ ಘಟನೆಗಳನ್ನು ನೋಡಿದಾಗಲೇ ಈ ಟೈಟಲ್ ಹೊಳೆದಿತ್ತು, ಮೆಜೆಸ್ಟಿಕ್ ಸಿನಿಮಾ ನನ್ನ ಕನಸು, ಅದೀಗ ನನಸಾಗುತ್ತಿದೆ ಎಂದರು.

ನಾಯಕ ಭರತ್, ಮಾತನಾಡಿ ನಿರ್ದೇಶಕರು ನಾನು ದರ್ಶನ್‌ರ ಅಭಿಮಾನಿ. ಅವರು 25 ವರ್ಷ ಪೂರೈಸಿದ ಸಂದರ್ಭದಲ್ಲಿ ನಮ್ಮ ಸಿನಿಮಾ ಲಾಂಚ್ ಆಗ್ತಿದೆ. ಅವರ 1% ಆದರೂ ನಮಗೆ ಬಂದರೆ ಸಾಕು. ಮರಿದಾಸನ ಪಾತ್ರಕ್ಕೆ ಸಾಕಷ್ಟು ತಯಾರಿ ಮಾಡಿಕೊಂಡಿದ್ದೇನೆ ಎಂದರು, ನಾಯಕಿ ಸಂಹಿತಾ ವಿನ್ಯಾ, ಸಂಗೀತ ನಿರ್ದೇಶಕ ವಿನು ಮನಸು, ಛಾಯಾಗ್ರಾಹಕ ವೀನಸ್ ಮೂರ್ತಿ, ಸ್ಟಂಟ್ ಮಾಸ್ಟರ್ ಚಿನ್ನಯ್ಯ ಚಿತ್ರದ ಕುರಿತಂತೆ ಮಾತನಾಡಿದರು.

ಯುವ ರಾಜ್‌ಕುಮಾರ್ 'ಯುವ' ಬಿಡುಗಡೆಗೆ ಸಿದ್ಧ



ವರನಟ ಡಾ.ರಾಜ್‌ಕುಮಾರ್ ಅವರ ಮೊಮ್ಮಗ ಯುವ ರಾಜ್‌ಕುಮಾರ್ ಅವರ ಚೊಚ್ಚಲ ಚಿತ್ರದೊಂದಿಗೆ 'ಯುವ' ಬಿಡುಗಡೆಗೆ ಸಿದ್ದವಾಗಿದಡ. ಸಂತೋಷ್ ಆನಂದ್‌ರಾಮ್ ನಿರ್ದೇಶನದ ಮತ್ತು ಹೊಂಬಾಳೆ ಫಿಲ್ಮ್ಸ್ ಬ್ಯಾನರ್‌ನಡಿಯಲ್ಲಿ ನಿರ್ಮಿಸಲಾದ ಈ ಚಿತ್ರವನ್ನಂಯ ಮಾ.29 ರಂದು ಬಿಡುಗಡೆ ಮಾಡಲು ಚಿತ್ರತಂಡ ನಿರ್ಧರಿಸಿದ್ದು, ಈ ಚಿತ್ರದ ಬಗ್ಗೆ ವ್ಯಾಪಕ ನಿರೀಕ್ಷೆ ಮನೆ ಮಾಡಿದೆ.

'ಮಿಸ್ಟರ್ ಅಂಡ್ ಮಿಸಸ್ ರಾಮಾಚಾರಿ' ಮತ್ತು 'ರಾಜಕುಮಾರ'ನಂತಹ ಹಿಟ್ ಸಿನಿಮಾಗಳಿಗೆ ಹೆಸರಾದ ಸಂತೋಷ್ ಆನಂದ್‌ರಾಮ್ ಅವರ ನಿರ್ದೇಶನದ ಯುವ ಚಿತ್ರದ ಆಡಿಯೋ ಹಕ್ಕುಗಳನ್ನು ಆನಂದ್ ಆಡಿಯೋ ಮ್ಯೂಸಿಕ್ ಲೇಬಲ್ 3 ಕೋಟಿಗೂ ಹೆಚ್ಚು ಬೆಲೆಗೆ ಪಡೆದುಕೊಂಡಿದೆ ಎಂದು ವರದಿಯಾಗಿದೆ. ಚಿತ್ರದ ಕಥಾವಸ್ತು ಮತ್ತು ಪಾತ್ರವರ್ಗದ ವಿವರಗಳನ್ನು ಇನ್ನೂ ಬಹಿರಂಗಪಡಿಸಿಲ್ಲವಾದರೂ ಯುವ ಸಿನಿಮಾದ ನಾಯಕಿಯಾಗಿ ಕಾಂತಾರ ಖ್ಯಾತಿಯ ಸಪ್ತಮಿಗೌಡ ಮತ್ತು ಪ್ರಮುಖ ಪಾತ್ರದಲ್ಲಿ ಅಚ್ಯುತ್ ಕುಮಾರ್ ನಟಿಸಿದ್ದಾರೆ. ಯುವ ಚಿತ್ರಕ್ಕೆ ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸಿದ್ದಾರೆ.

'ಕ್ರೀಂ' ಮಹಿಳೆ ಮಹಾಕಾಳಿಯಾದಾಗ...




ಅನಾದಿ ಕಾಲದಿಂದಲೂ ಮಹಿಳೆಯರ ಮೇಲೆ ಅತ್ಯಾಚಾರ, ದೌರ್ಜನ್ಯ ಪ್ರಕರಣಗಳು ನಡೆಯುತ್ತಲೇ ಇವೆ. ಅದೇ ರೀತಿ ದೌರ್ಜನ್ಯಕ್ಕೊಳಗಾದ ಮಹಿಳೆಯೊಬ್ಬಳ ಕಥೆಯೇ ಕ್ರೀಂ. ತನಗಾದ ಅನ್ಯಾಯದ ವಿರುದ್ಧ ಈಕೆ ನಡೆಸುವ ಹೋರಾಟವೇ ಕ್ರೀಂ ಚಿತ್ರದ ಕಥಾವಸ್ತು. ಕಿರಿಕ್‌ಪಾರ್ಟಿ ಖ್ಯಾತಿಯ ನಟಿ ಸಂಯುಕ್ತ ಹೆಗಡೆ ಪ್ರಮುಖ ಪಾತ್ರದಲ್ಲಿ ನಟಿಸಿರುವ, ಕ್ರೀಂ ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು. ಮಾರ್ಚ್ ಒಂದರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿರುವ ಈ ಚಿತ್ರದ ಟ್ರೈಲರನ್ನು ಕಥೆಗಾರ ಅಗ್ನಿ ಶ್ರೀಧರ್ ಅನಾವರಣಗೊಳಿಸಿದರು. ಡಿ.ಕೆ. ದೇವೇಂದ್ರ ಅವರ ನಿರ್ಮಾಣದ ಈ ಚಿತ್ರಕ್ಕೆ ಅಭಿಷೇಕ್ ಬಸಂತ್ ಆಕ್ಷನ್‌ಕಟ್ ಹೇಳಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಅಗ್ನಿಶ್ರೀಧರ್, ನನಗೆ ನಟನೆಗಿಂತ ಬರವಣಿಗೆಯಲ್ಲೇ ಹೆಚ್ಚು ಆಸಕ್ತಿ. ಆದರೂ ನಿರ್ಮಾಪಕರ ಒತ್ತಾಯಕ್ಕೆ ಮಣಿದು ಒಂದು ಪಾತ್ರ ಮಾಡಿದ್ದೇನೆ. ಕ್ರೀಂ ಎಂದರೆ ಬೀಜಾಕ್ಷರಿ ಮಂತ್ರ. ಹಣ ಹಾಗೂ ಅಧಿಕಾರಕ್ಕಾಗಿ ನಡೆಯುವ ಅಮಾಯಕ ಹೆಣ್ಣು ಮಕ್ಕಳನ್ನು ಬಲಿಕೊಡುವ ಕಥೆ ಚಿತ್ರದಲ್ಲಿದೆ, ಅದರ ವಿರುದ್ಧ ನಿಂತು ಧೈರ್ಯದಿಂದ ಹೋರಾಡುವ ಮಹಿಳೆಯ ಪಾತ್ರದಲ್ಲಿ ಸಂಯುಕ್ತ ಅವರು ಕಾಣಿಸಿಕೊಂಡಿದ್ದಾರೆ. ಈಗಲೂ ನಮ್ಮ ಊರು, ನಮ್ಮ ದೇಶ ಹಾಗೂ ವಿದೇಶಗಳಲ್ಲೂ ಈ ಕೃತ್ಯ ಅವ್ಯಾಹತ ವಾಗಿ ನಡೆಯುತ್ತಲೇ ಇದೆ. ಇದು ಯಾರಿಗೂ ಗೊತ್ತಾಗುವುದೇ ಇಲ್ಲ, ಇಂತಹ ಸೂಕ್ಷ್ಮ ವಿಚಾರವನ್ನು ಕ್ರೀಂ ಚಿತ್ರದ ಮೂಲಕ ಹೇಳಹೊರಟಿದ್ದೇವೆ, ಭಾರತದಲ್ಲಿ ಪ್ರತಿವರ್ಷ ಎರಡೂವರೆ ಸಾವಿರ ಮಹಿಳೆಯರು ಒಂದಲ್ಲಾ ಒಂದು ಕಾರಣದಿಂದ ಬಲಿಯಾಗುತ್ತಿದ್ದಾರೆ. ಅದಕ್ಕೆ ಕಾರಣವೇನು ಎಂಬುದನ್ನು ಕ್ರೀಂ ಚಿತ್ರದ ಮೂಲಕ ತಿಳಿಸುತ್ತಿದ್ದೇವೆ, ಅಭಿಷೇಕ್ ಬಸಂತ್ ತುಂಬಾ ಚೆನ್ನಾಗಿ ನಿರ್ದೇಶನ ಮಾಡಿದ್ದಾರೆ. ನಾಯಕಿ ಸಂಯುಕ್ತ ಹೆಗಡೆ ಅವರಂತೂ ಚಿತ್ರಕ್ಕಾಗಿ ತುಂಬಾನೇ ಎಫರ್ಟ್ ಹಾಕಿದ್ದಾರೆ ಎಂದರು.

ನಿರ್ದೇಶಕ ಅಭಿಷೇಕ್ ಬಸಂತ್ ಮಾತನಾಡುತ್ತ ವಿಭಿನ್ನ ಕಥಾಹಂದರ ಇಟ್ಟುಕೊಂಡು ನನ್ನ ಮೊದಲ ಸಿನಿಮಾ ನಿರ್ದೇಶನ ಮಾಡಬೇಕೆಂಬ ಆಸೆಯಿತ್ತು. ಅಗ್ನಿ ಶ್ರೀಧರ್ ಅವರ ಕಥೆಯೇ ಅದಕ್ಕೆ ಸೂಕ್ತ ಎನಿಸಿತು ಎಂದರು. ನಾಯಕಿ ಸಂಯುಕ್ತ ಹೆಗಡೆ ಮಾತನಾಡಿ, ಸುಮಾರು ಐದು ವರ್ಷಗಳ ನಂತರ ನಾನು ಮತ್ತೆ ತೆರೆಮೇಲೆ ಬರುತ್ತಿದ್ದೇನೆ, ಅದೂ ಕನ್ನಡ ಸಿನಿಮಾ ಮೂಲಕವೇ ಎನ್ನುವುದು ಖುಷಿಯ ವಿಚರ ಏಕೆಂದರೆ ನಾನು ಚಿತ್ರರಂಗಕ್ಕೆ ಬಂದದ್ದು ಕನ್ನಡ ಚಿತ್ರದಿಂದಲೇ. ನಾನು ಈವರೆಗೂ ಮಾಡಿರದಂಥ ಪಾತ್ರವಿದು. ಚಿತ್ರಕ್ಕಾಗಿ ತುಂಬಾ ಕಷ್ಟಪಟ್ಟಿದ್ದೇನೆ, ಮೈಮೂಳೆ ಫೈಟ್ ಮಾಡುವಾಗ ಮೂಳೆ ಮುರಿದುಕೊಂಡಿದ್ದೇನೆ ಎಂದು ಹೇಳಿದರು.

ಸಿನಿಪದಬಂಧ-514



ಹೆಸರು

ವಿಳಾಸ

ದೂರವಾಣಿ ಸಂಖ್ಯೆ



ಗುಣಮಟ್ಟ, ದೀರ್ಘ ಬಾಳಿಕೆಯ ಎಲ್ಲಾ ವಿಧದ ಟಾರ್ಪಾಲಿನ್ಸ್ ಬ್ಯಾಗ್‌ಗಳಿಗೆ ಸಂಪರ್ಕಿಸಿ
ನಂ.87, ಡಿ.ದೇವರಾಜ ಅರಸ್ ರಸ್ತೆ, ಮೈಸೂರು

ವಿಜೇತರು: ಆರ್.ರವಿ, 267, ರಮಾವಿಲಾಸ ರಸ್ತೆ, ಮೈಸೂರು-570024

ಎಡದಿಂದ ಬಲಕ್ಕೆ

1.	ರವಿರಾಜ್ – ತಾರಾ ಅಭಿನಯದ ದೇವತೆಗಳ ಪಾನೀಯದ ಹನಿ	5
6.	ಕಾಕೋಳು ಸರೋಜರಾವ್ ಕಥೆಯಲ್ಲಿ ಶಿವಣ್ಣ, ಸುಧಾರಾಣಿ ಅಭಿನಯವಿದೆ	5
7.	ಮದುವೆಯ ಆಮಂತ್ರಣ ತೆರೆಯ ಮೇಲೂ ಅಚ್ಚಾಗಿದೆ	5
9.	ಶಂಕರ್ ನಾಗ್ ಸೋಲದ ಪುತ್ರ	4
10.	ದರ್ಶನ್ ಇಂದ್ರನ ವಾಹನ ಏರಿದ್ದಾನೆ	4
14.	ಪ್ರೀತಿಯೊಂದಿಗಿನ ಹಾಡಿನ ಆರಂಭ	5
15.	ಸೂಪರ್ ಚಿತ್ರದ ನಾಯಕಿ	5
16.	ದೇವರಾಜ್ ಬರೆದ ಕೊಲೆಗಾರನ ದಿನಚರಿ	5



ಉಮ್ಮತ್ತೂರು ಇಂದುಶೇಖರ್

ಮೊ.9880820462

ಸಿನಿ ಪದಬಂಧ 513ರ ಉತ್ತರ

ಕ	ಥಾ	ಸಂ	ಗ	ಮ		ತಾ				ಅ
ನ				ಧು		ಯಿ		ಬೀ		ನು
ಸು		ಆ	ಪ್ತ	ರ	ಕ್ಷ	ಕ		ದಿ		ಭ
ನ				ಮೈ		ನ	ಮ್ಮ	ಬ	ಸ	ವ
ನ		ಯು		ತ್ರಿ		ಸು		ಸ		
ಸು	ಮ	ಲ	ತಾ				ದೇ	ವ	ದಾ	ಸಿ
		ಐ		ಇಂ		ನ		ಣ್ಣ		ಡಿ
ಪ್ರ	ಳ	ಯ	ರು	ದ್ರ		ನ್ನ				ದೆ
ಜಾ		ರಿ		ಧ	ರ್ವ	ದೇ	ವ	ತೆ		ದ್ದ
ಶ		ಕ		ನು		ವ				ಶಿ
ಕ್ತಿ				ಷ್		ರು	ದ್ರ	ತಾಂ	ಡ	ವ

ಮೇಲಿನಿಂದ ಕೆಳಕ್ಕೆ

1.	ಪದ್ಮಾ ವಾಸಂತಿ, ಶ್ರೀಧರ್, ರಾಮಕೃಷ್ಣ ಅಭಿನಯದ ಸುಂದರ ಕ್ಷಣ	6
2.	ಸಾಯಿಕುಮಾರ್ ಕಲ್ಲಿನ ಕೋಟೆಯ ವ್ಯಾಘ್ರ	5
3.	ಶಂಕರ್‌ನಾಗ್ ಇಟ್ಟ ರುಧಿರದ ಬೊಟ್ಟು	5
4.	ಶ್ರೀನಿವಾಸ ಮೂರ್ತಿ–ರೂಪಾದೇವಿಯ ಬದುಕಿನಲ್ಲಿ ಚಲಿಸಿದ ನಾವೆ	4
5.	ಲಯನ್ _ _ _ _ _ _	6
8.	ಕಲ್ಯಾಣ್ ಕುಮಾರ್–ಕಲ್ಪನಾ ಪ್ರೀತಿಗೆ ಆರ್.ನಾಗೇಂದ್ರರಾಯರ ಅನುಮತಿಯೇ!	6
11.	ಶಿವಣ್ಣನ ಹುಟ್ಟಿದ ಮನೆಯ ಸಂಪತ್ತು	6
12.	ರಾಜ್ ಕುಮಾರ್ ಬಿಸಿ ಬಿಸಿ ಕಜ್ಜಾಯದ ರುಚಿ ತೋರಿಸಿದ ಚಿತ್ರ	5
13.	ಸುರೇಶ್ ಹೆಬ್ಳಿಕರ್ ಅರಣ್ಯದಲ್ಲಿ ಕಿಚ್ಚು ಹಚ್ಚಿದೆ	5
14.	ರವಿಚಂದ್ರನ್ ರಾಮಾಚಾರಿಯಾದರೆ ಬಿ.ಸಿ. ಪಾಟೀಲ್!?	4

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಕಾಲ ಕಾಲಕ್ಕೆ ಆಸ್ತಿ ದಾಖಲಾತಿ ನವೀಕರಿಸಿಕೊಳ್ಳಿ

ಸಾರ್ವಜನಿಕರಿಗೆ ಕಂದಾಯ ಅದಾಲತ್‌ನಲ್ಲಿ ತಹಸೀಲ್ದಾರ್ ಟಿ.ಜೆ.ಸುರೇಶ್ ಆಚಾರ್ ಸಲಹೆ





ತಿ.ನರಸೀಪುರದ ಆಡಳಿತಸೌಧದಲ್ಲಿ ಕಂದಾಯ ಅದಾಲತ್ ನಡೆಯಿತು. ಮತ್ತೊಂದು ಚಿತ್ರದಲ್ಲಿ ಅದಾಲತ್‌ನಲ್ಲಿ ಭಾಗವಹಿಸಿದ್ದ ಫಲಾನುಭವಿಗಳು.

ತಿ.ನರಸೀಪುರ, ಫೆ.22– ಸಾರ್ವಜನಿಕರು ತಮ್ಮ ಆಸ್ತಿ ಮತ್ತು ಜಮೀನುಗಳ ದಾಖಲಾತಿಗಳನ್ನು ಕಾಲ ಕಾಲಕ್ಕೆ ನವೀಕರಿಸಿಕೊಂಡಾಗ ಮಾತ್ರ ಸರ್ಕಾರದ ಸವಲತ್ತುಗಳನ್ನು ಪಡೆಯಲು ಸಾಧ್ಯ ಎಂದು ತಹಸೀಲ್ದಾರ್ ಟಿ.ಜೆ.ಸುರೇಶ್ ಆಚಾರ್ ತಿಳಿಸಿದರು.

ಪಟ್ಟಣದ ತಹಸೀಲ್ದಾರ್ ಕಚೇರಿ ಆವರಣದಲ್ಲಿ ಗುರುವಾರ ನಡೆದ ಕಂದಾಯ ಅದಾಲತ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಾರ್ವಜನಿಕರು ತಮ್ಮ ಆಸ್ತಿ ಮತ್ತು ಜಮೀನುಗಳ ದಾಖಲಾತಿಗಳನ್ನು ಕಾಲ ಕಾಲಕ್ಕೆ ನವೀಕರಿಸಿಕೊಳ್ಳಬೇಕು. ಪ್ರಸ್ತುತ ಇರುವ ವಾರಸುದಾರರ ಹೆಸರಿನಲ್ಲಿ ದಾಖಲೆ ಇದ್ದಾಗ ಮಾತ್ರ ಯಾವುದೇ ಸವಲತ್ತು ಪಡೆಯಲು ಸಾಧ್ಯ. ಹೀಗಾಗಿ ಕಂದಾಯ ಅದಾಲತ್ ಸದುಪಯೋಗಕ್ಕೆ ಎಲ್ಲರೂ ಮುಂದಾಗಬೇಕು ಎಂದರು.

ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ಅಧಿಕಾರಿಗಳ ಮೂಲಕ ತಾಲೂಕು ಮಟ್ಟದಲ್ಲಿ ಪರಿಶೀಲಿಸಿದಾಗ 25,500 ಪೌತಿ ಖಾತೆ ಬಾಕಿ ಇರುವುದು ಗೊತ್ತಾಗಿದೆ. ದೊರೆತಿರುವ ಅಂಕಿ ಅಂಶಗಳ ಪ್ರಕಾರ ಎಲ್ಲರ ಪೌತಿ ಖಾತೆ ಮಾಡಿಕೊಟ್ಟರೇ ಶೇ.100 ರಷ್ಟು ಪ್ರಗತಿ ಸಾಧಿಸಿದಂತಾಗುತ್ತದೆ. ಮುಂದಿನ ದಿನಗಳಲ್ಲಿ ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಸಂದಾಯ ಮಾಡಲು ಅನುಕೂಲವಾಗುತ್ತದೆ ಎಂದರು.

ಇದಕ್ಕೆ ಪೂರಕವಾಗಿ ಸವಲತ್ತು ಪಡೆಯಲು ಪ್ರಸ್ತುತ ಹಾಲಿ ವಾರಸುದಾರರ ಹೆಸರಿಗೆ ಆರ್‌ಟಿಸಿ ಅಪ್‌ಡೇಟ್ ಆಗಬೇಕಾಗುತ್ತದೆ. ನಾವು ಆ ನಿಟ್ಟಿನಲ್ಲಿ ಕ್ರಮ ವಹಿಸಲು ಮುಂದಾಗಿದ್ದೇವೆ ಎಂದರು.

ಕಂದಾಯ ಅದಾಲತ್ ಕಾರ್ಯಕ್ರಮದಿಂದ ಸಾರ್ವಜನಿಕರು ಅನಗತ್ಯವಾಗಿ ಕಚೇರಿಗೆ ಅಲೆಯುವುದು ತಪ್ಪುತ್ತದೆ. ಅಧಿಕಾರಿಗಳು, ಸಿಬ್ಬಂದಿ ಹಾಗೂ ಸೇವೆ ಪಡೆಯುವ ಸಾರ್ವಜನಿಕರು ಮುಖಾಮುಖಿಯಾಗಿ ಕೆಲಸ ಮಾಡಿಸಿಕೊಳ್ಳಲು ಅವಕಾಶವಿರುತ್ತದೆ. ಸಾರ್ವಜನಿಕರು ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಕಂದಾಯ ಇಲಾಖೆ ಕಾರ್ಯ ಒತ್ತಡದಿಂದ ಸಕಾಲದಲ್ಲಿ ಜನರಿಗೆ ಸ್ಪಂದಿಸಲು ಸಾಧ್ಯವಾಗದ ಕಾರಣ ಅದಾಲತ್ ಮೂಲಕ ಅರ್ಜಿಗಳ ವಿಲೇವಾರಿ ಮಾಡಲಾಗುತ್ತಿದೆ ಎಂದು.

ಇದೇ ವೇಳೆ ಕಸಬಾ, ಬನ್ನೂರು, ಸೋಸಲೆ, ಮೂಗೂರು ಹಾಗೂ ತಲಕಾಡು ಹೋಬಳಿಯ 342 ಅರ್ಜಿಗಳ ಪೈಕಿ 297 ಪೌತಿ ಖಾತೆಗಳು ಹಾಗೂ 45 ತಿದ್ದುಪಡಿ ಅರ್ಜಿಗಳನ್ನು ಪರಿಶೀಲಿಸಿ ಮುಂದಿನ ಕ್ರಮಕ್ಕೆ ಆದೇಶಿಸಲಾಯಿತು. ಕಂದಾಯ ಅದಾಲತ್‌ನಿಂದ 1359 ಫಲಾನುಭವಿಗಳು ಪ್ರಯೋಜನ ಪಡೆದರು.

ಕಾರ್ಯಕ್ರಮದಲ್ಲಿ ಶಿರಸ್ತೇದಾರ್ ಮಂಜುಳಾ, ರೇಣುಕಾ, ಉಪ ತಹಸೀಲ್ದಾರ್ ರೂಪ, ಲಕ್ಷ್ಮಿ, ಶೋಭ ಕುಮಾರ್, ರಾಜಸ್ವ ನಿರೀಕ್ಷಕರಾದ ಮಹೇಂದ್ರಟಿ.ಪಿ, ನಾಗೇಂದ್ರ ಶ್ಯಾಂ, ಎಂ.ಇ.ಬಸವರಾಜು, ಗೋವಿಂದರಾಜು, ಪ್ರಥಮ ದರ್ಜೆ ಸಹಾಯಕ ಚೆಲುವ ರಾಜು, ಗ್ರಾಮ ಆಡಳಿತಾಧಿಕಾರಿ, ಆನಂದ್, ಸೋಮಶೇಖರ್, ಜಬೀನಾ, ಸಂತೋಷ್, ನಯನ, ಯಶವಂತ್, ಶ್ರೀನಿವಾಸ್ ಹಾಜರಿದ್ದರು.

ರೈತರು ಹೆಚ್ಚು ಅರ್ಜಿ ಸಲ್ಲಿಸಿ

ಕೆಲವೊಂದು ಖಾತೆಗಳು 3 ಅಥವಾ 4ನೇ ತಲೆಮಾರಿನ ಹೆಸರಿನಲ್ಲಿರುತ್ತದೆ. ಅದನ್ನು ಬದಲಾವಣೆ ಮಾಡಲು ಮರಣ ಪ್ರಮಾಣ ಪತ್ರ ಅವಶ್ಯಕ. ಆದರೆ ಅದು ದೊರೆಯದಿದ್ದರೂ ನಮ್ಮ ಅಧಿಕಾರಿಗಳು ವಾಸಸ್ಥಳದ ಮಹಜರು ಮಾಡಿ ಅದರ ಆಧಾರದ ಮೇಲೆ ಖಾತೆ ಬದಲಾವಣೆ ಮಾಡಿ ಕೊಡುತ್ತಾರೆ. ಹೀಗಾಗಿ ಅದಕ್ಕೆ ಸಂಬಂಧಿಸಿದ ಅಫಿಡೇವಿಟ್ ಒದಗಿಸಿದರೆ ಹಾಲಿ ಖಾತೆದಾರರಿಂದ ಪ್ರಸ್ತುತ ಜೀವಂತವಿರುವ ಖಾತೆದಾರರ ಹೆಸರಿಗೆ ವರ್ಗಾವಣೆ ಮಾಡಿಕೊಡಲಾಗುತ್ತದೆ. ಹೀಗಾಗಿ ರೈತ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿ ಸಲ್ಲಿಸಿ ಅದಾಲತ್‌ನ ಪ್ರಯೋಜನ ಪಡೆಯಿರಿ.

- ಟಿ.ಜೆ.ಸುರೇಶ್ ಆಚಾರ್, ತಹಸೀಲ್ದಾರ್

ಬಿ.ಮಟಕೆರೆ: ಸಂವಿಧಾನ ಜಾಗೃತಿ ಜಾಥಾಕ್ಕೆ ಸ್ವಾಗತ



ಬಿ.ಮಟಕೆರೆ ಎಸ್.ಕಾಲೋನಿಗೆ ಆಗಮಿಸಿದ ಸಂವಿಧಾನ ಜಾಗೃತಿ ಜಾಥಾವನ್ನು ಸ್ವಾಗತಿಸಲಾಯಿತು.

ಸರಗೂರು, ಫೆ.22– ತಾಲೂಕಿನ ಬಿ.ಮಟಕೆರೆ ಎಸ್.ಕಾಲೋನಿಯಲ್ಲಿ ಸಂವಿಧಾನ ಜಾಗೃತಿ ಜಾಥಾಕ್ಕೆ ಗ್ರಾಮಸ್ಥರು ಅದ್ಧೂರಿ ಸ್ವಾಗತ ಕೋರಿದರು. ಇದೇ ವೇಳೆ ಸಂವಿಧಾನ ಪೀಠಿಕೆ ಪ್ರತಿಜ್ಞಾವಿಧಿ ಬೋಧಿಸಿ ಗೌರವ ಸಲ್ಲಿಸಲಾಯಿತು.

ಈ ಸಂದರ್ಭ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿದ ಸಂವಿಧಾನ ಜಾಗೃತಿ ಜಾಥಾಕ್ಕೆ ಮಹಿಳೆಯರ ಪೂರ್ಣಕುಂಭ, ಡೊಳ್ಳು, ಪೂಜಾ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಮೆರಗು ನೀಡಿದವು.

ಕಾರ್ಯಕ್ರಮದಲ್ಲಿ ಗ್ರಾಪಂ ಮಾಜಿ ಉಪಾಧ್ಯಕ್ಷ ವೈಕುಂಠಯ್ಯ, ಸದಸ್ಯರಾದ ವಿನೋದ್, ಶ್ರೀನಿವಾಸ್, ಸಮಾಜ ಸೇವಕ ಶಿವಕುಮಾರ್, ಯಜಮಾನರಾದ ಜವರಯ್ಯ, ಸ್ವಾಮಿ, ಸುರೇಶ್, ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಜಯಕುಮಾರ್, ಉಪಾಧ್ಯಕ್ಷ ಶಿವರಾಜು, ಕಾರ್ಯದರ್ಶಿ ಪ್ರಕಾಶ್, ಖಜಾಂಚಿ ಆನಂದ್, ಮುಖಂಡರಾದ ತೋಟಯ್ಯ, ಕೃಷ್ಣ, ಮಹೇಶ್, ಮಹದೇವಸ್ವಾಮಿ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು, ತಾಪಂ, ಗ್ರಾಪಂ ಅಧಿಕಾರಿಗಳು, ಶಾಲಾ ಶಿಕ್ಷಕರು, ಮಕ್ಕಳು, ಗ್ರಾಮಸ್ಥರು ಪಾಲ್ಗೊಂಡಿದ್ದರು.

ಗ್ರಾಮೀಣ ಮಕ್ಕಳಿಗೆ ಆದಿಚುಂಚನಗಿರಿ ಟ್ರಸ್ಟ್‌ನಿಂದ ಶಿಕ್ಷಣ

ನಾಳೆ 16 ಕೊಠಡಿಗಳ ಲೋಕಾರ್ಪಣೆ: ಸೋಮೇಶ್ವರನಾಥ ಸ್ವಾಮೀಜಿ

ಭೇರ್ಯ, ಫೆ.22– ಗ್ರಾಮೀಣ ರೈತರ ಮಕ್ಕಳಿಗೆ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಶ್ರೀಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಕಾರ್ಯ ನಿರ್ವಹಿಸುತ್ತಿದೆ ಎಂದು ಮೈಸೂರು ಆದಿಚುಂಚನಗಿರಿ ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ ತಿಳಿಸಿದರು.

ಕೆ.ಆರ್.ನಗರ ತಾಲೂಕಿನ ಹೊಸ ಅಗ್ರಹಾರ ಗ್ರಾಮದಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ನೂತನ ನಿರ್ಮಿಸಿರುವ ಬಿಜಿಎಸ್ ಪಬ್ಲಿಕ್ ಶಾಲೆಯ 16 ಕೊಠಡಿಗಳನ್ನು ಪರಿಶೀಲಿಸಿ ಮಾತನಾಡಿದ ಅವರು, ಫೆ24ರಂದು ಸಂಜೆ 4 ಗಂಟೆಗೆ ಶಾಲಾ ಕೊಠಡಿಗಳನ್ನು ಆದಿಚುಂಚನಗಿರಿ ಪೀಠಾಧ್ಯಕ್ಷಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಲೋಕಾರ್ಪಣೆ ಮಾಡಲಿದ್ದಾರೆ. ಇಂದಿನಿಂದಲೇ ಶಾಲಾ ಕಟ್ಟಡದಲ್ಲಿ ಹೋಮ ಹವನ ಆರಂಭಿಸಲಾಗಿದೆ ಎಂದರು.



ನೂತನ 16 ಕೊಠಡಿಗಳನ್ನು ಸೋಮೇಶ್ವರನಾಥ ಸ್ವಾಮೀಜಿ ಪರಿಶೀಲಿಸಿದರು.

ಅಂದಿನ ಕಾರ್ಯಕ್ರಮದಲ್ಲಿ ಕೆ.ಆರ್.ನಗರ ಕಾಗಿನೆಲೆ ಶಾಖಾ ಮಠದ ಶ್ರೀಶಿವಾನಂದಪುರಿ ಸ್ವಾಮೀಜಿ, ಶಾಸಕ ಡಿ.ರವಿಶಂಕರ್, ಮಾಜಿ ಸಚಿವ ಸಾ.ರಾ.ಮಹೇಶ್, ತಹಸೀಲ್ದಾರ್ ಸಿ.ಎಸ್.ಪೂರ್ಣಿಮಾ, ಬಿಇಓ ಆರ್.ಕೃಷ್ಣಪ್ಪ, ಪೊಲೀಸ್ ಇನ್ಸ್‌ಪೆಕ್ಟರ್ ಪಿ.ಸಂತೋಷ್, ಹೊಸಅಗ್ರಹಾರ ಗ್ರಾಪಂ ಅಧ್ಯಕ್ಷ ರಾಮಚಂದ್ರ, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಮಿರ್ಲೆ ಅಣ್ಣೇಗೌಡ, ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್, ಸಮಾಜದ ಮುಖಂಡ ಗಣೇಶ್ ಭಾಗವಹಿಸಲಿದ್ದಾರೆ ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಗಣೇಶ್, ಗ್ರಾಪಂ ಸದಸ್ಯ ಡಿ.ಎಸ್.ಯೋಗೇಶ್ ಇತರರಿದ್ದರು.

ನಾಳೆ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬ್ರಹ್ಮ ರಥೋತ್ಸವ

ಇಂದು ಗಿರಿಜಾ ಕಲ್ಯಾಣ



ಫೆ.24 ರಂದು ಬೆಳಗ್ಗೆ 10.45ರಿಂದ 11.15ರ ಶುಭ ಮೇಷ ಲಗ್ನದಲ್ಲಿ ಬೆಳ್ಳಿ ಬಸವ, ವಿಶೇಷವಾಗಿ ಹಾಗೂ ಭ್ರಮರಾಂಬ ಸಮೇತ ಮಲ್ಲಿಕಾರ್ಜುನಸ್ವಾಮಿಯವರ ಉತ್ಸವ ಮೂರ್ತಿಗಳನ್ನು 3 ರಥಗಳಲ್ಲಿ ಪ್ರತಿಷ್ಠಾಪಿಸಿದ ಬಳಿಕ ಸಾವಿರಾರು ಭಕ್ತರ ಸಮ್ಮುಖದಲ್ಲಿ ರಥೋತ್ಸವ ಜರುಗಲಿವೆ. ಸಂಜೆ 5 ಗಂಟೆಗೆ ಶಾಂತೋತ್ಸವ (ಹಂಸ ವಾಹನದ ಮೇಲೆ) ನೆರವೇರಿಸಲಾಗುವುದು.

ಬೆಟ್ಟದಪುರ, ಫೆ.22– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಇತಿಹಾಸ ಪ್ರಸಿದ್ಧ ಶ್ರೀಭ್ರಮರಾಂಬ ಸಮೇತ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬ್ರಹ್ಮ ರಥೋತ್ಸವ ಫೆ.24 ರಂದು ನಡೆಯಲಿದ್ದು, ಗ್ರಾಮದಲ್ಲಿ ಈಗಾಗಲೇ ಹಬ್ಬದ ವಾತಾವರಣ ಕಳೆಗಟ್ಟಿದೆ.

ಮಲ್ಲಯ್ಯನ ಜಾತ್ರೆ ಎಂದೇ ಪ್ರಖ್ಯಾತಿಯಾಗಿರುವ ಜಾತ್ರೆಗೆ ಮೈಸೂರು ಜಿಲ್ಲೆ ಮಾತ್ರವಲ್ಲದೇ, ನೆರೆಯ ಕೊಡಗು ಮತ್ತು ಹಾಸನ ಜಿಲ್ಲೆಗಳಿಂದಲೂ ಹೆಚ್ಚಾಗಿ ಭಕ್ತರು ಆಗಮಿಸಲಿದ್ದು, ಜಾತ್ರೆ ಯಶಸ್ವಿಗೊಳಿಸಲು ಮುಜರಾಯಿ ಹಾಗೂ ಧಾರ್ಮಿಕ ದತ್ತಿ ಇಲಾಖೆ ಸಜ್ಜಾಗಿದೆ.

ಈಗಾಗಲೇ ದೇವಸ್ಥಾನದಲ್ಲಿ ವಾರ್ಷಿಕ ಜಾತ್ರಾ ಪೂಜಾ ಕೈಂಕರ್ಯಗಳು ಆರಂಭಗೊಂಡಿದ್ದು, ಪುಣ್ಯಾಹ, ಗಣಪತಿ ಪೂಜೆ ಹಾಗೂ ಮೂಲದೇವರ ಪೂಜೆಯೊಂದಿಗೆ ಕ್ರಮವಾಗಿ ಪ್ರತಿದಿನ ಗಜಾರೋಹಣ(ಆನೆ ವಾಹನ), ಭೂತಾರೋಹಣ (ಭೂತವಾಹನ), ವೃಷಭಾರೋಹಣ(ಬಸವ ವಾಹನ) ಉತ್ಸವಗಳು ನಡೆದಿವೆ.

ಫೆ.23ರಂದು ಸಂಜೆ 7 ಗಂಟೆಗೆ ಅಶ್ವಾರೋಹಣ (ಕುದುರೆ ವಾಹನ) ಉತ್ಸವ ಗ್ರಾಮದ ಮುಖ್ಯ ಬೀದಿಗಳಲ್ಲಿ ನಡೆಯಲಿದ್ದು, ರಾತ್ರಿ 10 ಗಂಟೆಗೆ ಅಲಂಕೃತ ಮಂಟಪದಲ್ಲಿ ಭ್ರಮರಾಂಬ ಹಾಗೂ ಮಲ್ಲಿಕಾರ್ಜುನಸ್ವಾಮಿಗೆ ಗಿರಿಜಾ ಕಲ್ಯಾಣ ನೆರವೇರಿಸಲಾಗುವುದು.

ಫೆ.26ರಂದು ರಾತ್ರಿ ಗ್ರಾಮದ ತಾವರೆಕೆರೆಯಲ್ಲಿ ತೆಪ್ಪೋತ್ಸವ ಮಾಡುವ ಮೂಲಕ ಜಾತ್ರೆಗೆ ತೆರೆ ಬೀಳಲಿದೆ.

ಜಾತ್ರೆ ಅಂಗವಾಗಿ ಗ್ರಾಮದ ಮಧ್ಯಭಾಗದಲ್ಲಿರುವ ದೇವಾಲಯವನ್ನು ಬಣ್ಣಗಳಿಂದ ಅಲಂಕರಿಸಿದ್ದು, ಪ್ರಮುಖ ರಸ್ತೆಗಳು ಹಾಗೂ ವೃತ್ತಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ರಾತ್ರಿ ವೇಳೆ ಬೆಟ್ಟ ಹತ್ತುವ ಭಕ್ತರಿಗೆ ಅನುಕೂಲವಾಗುವಂತೆ ವಿದ್ಯುತ್ ಕಂಬಗಳ ದೀಪಗಳನ್ನು ರಿಪೇರಿ ಮಾಡಿಸಲಾಗಿದೆ. ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿದೆ. ಅಲ್ಲದೇ ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

ನಂಜನಗೂಡು: ಮಾಂಗಲ್ಯ ಸರ ಕಳವು

ನಂಜನಗೂಡು, ಫೆ.22– ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಮಹಿಳೆಯ ಮಾಂಗಲ್ಯ ಸರ ಕಸಿದು ಪರಾರಿಯಾಗಿರುವ ಘಟನೆ ನಗರದ ಆರ್.ಪಿ.ರಸ್ತೆಯ 6ನೇ ಕ್ರಾಸ್ ಬಳಿ ಗುರುವಾರ ರಾತ್ರಿ ನಡೆದಿದೆ. ಇಲ್ಲಿನ 9ನೇ ಕ್ರಾಸ್ ನಿವಾಸಿ ಸರಸ್ವತಿ ಮಾಂಗಲ್ಯ ಸರ ಕಳೆದುಕೊಂಡವರು. ಖಾಸಗಿ ಮಹಿಳಾ ಸಂಘದಲ್ಲಿ ಕೆಲಸ ಮಾಡುತ್ತಿದ್ದ ಸರಸ್ವತಿ ಕಾರ್ಯ ನಿಮಿತ್ತ 6ನೇ ಕ್ರಾಸ್‌ಗೆ ಆಗಮಿಸಿ, ವಾಪಸ್ ಮನೆಗೆ ಹೋಗುವ ವೇಳೆ ರಸ್ತೆ ಮಧ್ಯೆ ಪಲ್ಸರ್ ಬೈಕ್ ನಿಲ್ಲಿಸಿಕೊಂಡು ನಿಂತಿದ್ದ ಇಬ್ಬರು ದುಷ್ಕರ್ಮಿಗಳು 50 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ ಕಳವು ಮಾಡಲು ಯತ್ನಿಸಿದ್ದಾರೆ. ಈ ವೇಳೆ ಸರಸ್ವತಿ ಅವರು ಸರವನ್ನು ಗಟ್ಟಿಯಾಗಿ ಹಿಡಿದುಕೊಂಡ ಪರಿಣಾಮ ಚಿನ್ನದ ಸರ 3 ತುಂಡುಗಳಾಗಿದ್ದು, ಸುಮಾರು 25 ಗ್ರಾಂ ತೂಕದ ಒಂದು ತುಂಡನ್ನು ಖದೀಮರು ಕಸಿದು ಪರಾರಿಯಾಗಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪಟ್ಟಣ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಬಸವರಾಜು ಸ್ಥಳ ಪರಿಶೀಲಿಸಿ ಮಹಿಳೆಯಿಂದ ಕಳ್ಳರ ಚಹರೆ ತಿಳಿದು ಸಿಸಿ ಟಿವಿ ಫುಟೇಜ್ ಪರಿಶೀಲಿಸುವ ಮೂಲಕ ಆರೋಪಿಗಳ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ. ಈ ಸಂಬಂಧ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಆಕ್ರೋಶ: ಪಟ್ಟಣ ಪೊಲೀಸ್ ಠಾಣೆಯ 200 ಮೀಟರ್ ಅಂತರದಲ್ಲೇ ಕಳ್ಳತನ ನಡೆದಿರುವುದು ಸಾರ್ವಜನಿಕರಲ್ಲಿ ಭಯ ಹುಟ್ಟಿಸಿದೆ. ಕಳೆದ ಕೆಲ ದಿನಗಳಿಂದ ನಗರ ವ್ಯಾಪ್ತಿಯಲ್ಲಿ ಸರಗಳ್ಳತನ ನಡೆಯುತ್ತಿದ್ದರೂ ಪೊಲೀಸರು ಸರಗಳ್ಳರ ಬಂಧನಕ್ಕೆ ಕ್ರಮ ವಹಿಸದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಒಟ್ಟಾರೆ ಸಂಜೆ ಹಾಗೂ ರಾತ್ರಿ ವೇಳೆ ಪಟ್ಟಣದಲ್ಲಿ ಪೊಲೀಸ್ ಗಸ್ತು ಹೆಚ್ಚಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.


ಇಬ್ಬರು ಬೈಕ್ ಕಳವು ಆರೋಪಿಗಳ ಬಂಧನ

ತಿ.ನರಸೀಪುರ, ಫೆ.22– ಪ್ರತ್ಯೇಕ ಪ್ರಕರಣಗಳಲ್ಲಿ ಪಟ್ಟಣ ಹಾಗೂ ಬನ್ನೂರು ಠಾಣಾ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ತಿ.ನರಸೀಪುರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಮಂಡ್ಯದ ಕಾವೇರಿ ನಗರದ ನಿವಾಸಿ ಗೌತಮ್ ಅಲಿಯಾಸ್ ಕೆಂಚ(30), ತಾಲೂಕಿನ ಎಡದೊರೆ ಕುರಿಸಿದ್ದನಹುಂಡಿ ಗ್ರಾಮದ ಹರೀಶ್ ಅಲಿಯಾಸ್ ಮೆಡ್ಡ(33) ಬಂಧಿತ ಆರೋಪಿಗಳು. ಪೊಲೀಸರು ಗೌತಮ್‌ನಿಂದ 4 ದ್ವಿಚಕ್ರ ವಾಹನಗಳು ಮತ್ತು ಹರೀಶ್‌ನಿಂದ ಒಂದು ದ್ವಿಚಕ್ರ ವಾಹನ ಸೇರಿದಂತೆ 2.5 ಲಕ್ಷ ರೂ. ಮೌಲ್ಯದ ಐದು ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಡಿವೈಎಸ್ಪಿ ರಘು, ಸಿಪಿಐ ಮೇದಪ್ಪ, ಎಸ್‌ಐ ನಂಜುಂಡರಾಜ ಅರಸ್, ಸಿಬ್ಬಂದಿಗಳಾದ ಲತೀಫ್, ಭಾಸ್ಕರ್, ಆನಂದ್ ಪಾಲ್ಗೊಂಡಿದ್ದರು.

ಅಧಿಕಾರ ಸಿಕ್ಕಿದ್ದರೆ ತಾಲೂಕಿನ ಸಮಗ್ರ ಅಭಿವೃದ್ಧಿಯಾಗುತ್ತಿತ್ತು

ಅಭಿನಂದನೆ ಸ್ವೀಕರಿಸಿದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅಭಿಪ್ರಾಯ



ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು.

ಹುಣಸೂರು, ಫೆ.22– ತಾಲೂಕಿನಲ್ಲಿ ಈ ಹಿಂದಿನ ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ಅಭಿವೃದ್ಧಿ ಪರ್ವವೇ ನಡೆದಿತ್ತು. ಈ ಬಾರಿ ತಮಗೆ ಅಧಿಕಾರ ಸಿಕ್ಕಿದ್ದರೆ ತಾಲೂಕಿನ ಸಮಗ್ರ ಅಭಿವೃದ್ಧಿ ನಡೆಯುತ್ತಿತ್ತು ಎಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅಭಿಪ್ರಾಯಪಟ್ಟರು.

ಇತ್ತೀಚೆಗೆ ಮಂಡಿಸಿದ ಬಜೆಟ್‌ನಲ್ಲಿ ಸರ್ಕಾರ ಮರದೂರು ಏತ ನೀರಾವರಿ ಯೋಜನೆ ಸೇರ್ಪಡೆ ಮಾಡಲು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರ ಪರಿಶ್ರಮವೇ ಕಾರಣ ಎಂದು ನೀರು ತುಂಬಿಸುವ ಕೆರೆಗಳ ಭಾಗದ ಗ್ರಾಮಗಳ ಕೃಷಿಕರು, ರೈತ ಮುಖಂಡರು, ಸ್ನೇಹಜೀವಿ ಬಳಗದವರು ತಾಲೂಕಿನ ಮಾದಳ್ಳಿ ಮಠದ ಆವರಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಗ್ರಾಮಸ್ಥರಿಂದ ಬೆಳ್ಳಿಗದೆ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ನನ್ನ ಕನಸಿನ ಮರದೂರು ಯೋಜನೆಗೆ ಅನುದಾನ ಬಿಡುಗಡೆ ಮಾಡಿಸಿ ಬಜೆಟ್‌ನಲ್ಲಿ ಸೇರಿಸಿದ್ದೇನೆಂಬ ಹೆಮ್ಮೆ ಇದೆ. ಈ ಹಿಂದಿನ ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ಹನಗೋಡು ಅಣೆಕಟ್ಟೆ ಆಧುನೀಕರಣ, ಬಿಳಿಕೆರೆ, ಜೀನಹಳ್ಳಿ, ಹಳೇಬೀಡು ಕೆರೆಗಳಿಗೆ ನೀರು ತುಂಬಿಸುವ ಮತ್ತು ತಾಲೂಕಿಗೆ 11 ಏತ ನೀರಾವರಿ ಯೋಜನೆಗಳನ್ನು ತಂದಿದ್ದೇನೆ ಎಂದರು.

ಏಷ್ಯಾ ಖಂಡದಲ್ಲೇ ಮೊದಲೆಂಬಂತೆ 501 ಎಕರೆ ವಿಸ್ತೀರ್ಣದ ಹೈರಿಗೆ ಕೆರೆಯನ್ನು ಅಭಿವೃದ್ಧಿಗೊಳಿಸಿದೆ. ನೂರಾರು ರೈತರಿಗೆ ಸಾಗುವಳಿ ಕೊಡಿಸಿದ್ದೇನೆ. ರಾಜ್ಯದಲ್ಲೇ ತಾಲೂಕು ಮಟ್ಟದಲ್ಲಿ ಪಿ.ಜಿ. ಕೋರ್ಸ್ ತಂದೆ. ಶಾಲಾ ಕಾಲೇಜುಗಳ ಅಭಿವೃದ್ಧಿ, ರಸ್ತೆ ನಿರ್ಮಾಣ, ವಿದ್ಯುತ್, ದೇವಾಲಯ, ಚರ್ಚ್, ಮಸೀದಿ ನಿರ್ಮಾಣ, ಜೀರ್ಣೋದ್ಧಾರ ಸೇರಿದಂತೆ ಅಭಿವೃದ್ಧಿ ಪರ್ವವೇ ನಡೆಯಿತು. ಮುಂದೆ ಕಟ್ಟೆ ಮಳಲವಾಡಿ ನಾಲೆಗಳ ಆಧುನೀಕರಣ ಯೋಜನೆ ಮಂಜೂರು ಮಾಡಿಸಿ, ಅದನ್ನು ಸಾಕಾರಗೊಳಿಸಬೇಕಿದೆ ಎಂದರು.

ಮಾದಹಳ್ಳಿ ಮಠದ ಸಾಂಬ ಸದಾಶಿವಸ್ವಾಮೀಜಿ ಮಾತನಾಡಿ, ತಾಲೂಕಿನಲ್ಲಿ ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ತಾಲೂಕಿನಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಮಠದ ಅಭಿವೃದ್ಧಿಗೆ ಸಂಪೂರ್ಣ ನೆರವಾಗಿದ್ದು, ಮುಂದಿನ ದಿನಗಳಲ್ಲಿ ಒಳ್ಳೆಯ ಅವಕಾಶ ಸಿಗಲೆಂದು ಹಾರೈಸಿದರು. ಹಾರಂಗಿ ನಿವೃತ್ತ ಇಇ ಸುರೇಶ್ ನೀರಾವರಿ ಯೋಜನೆಗಳ ಅನುಷ್ಠಾನದ ಬಗ್ಗೆ ಸಮಗ್ರ ಮಾಹಿತಿ ನೀಡಿದರು.

ಈ ವೇಳೆ ಜಿಪಂ ಮಾಜಿ ಉಪಾಧ್ಯಕ್ಷೆ ಗೌರಮ್ಮ, ಮುಖಂಡರಾದ ಆನಂದಸ್ವಾಮಿ, ಯ.ಕೂಸಪ್ಪ, ಕುಮಾರ್, ಚಿಕ್ಕಸ್ವಾಮಿ, ಅಣ್ಣಯ್ಯನಾಯ್ಕ, ಪುಟ್ಟರಾಜು, ಕುನ್ನೇಗೌಡ, ಪುಟ್ಟಮ್ಮ, ರಮೇಶ್, ಬಸವರಾಜು, ನಾರಾಯಣ್, ಕುಮಾರ್ ಮಾತನಾಡಿದರು. ರಾಜು, ಶಿವರಾಜೇಗೌಡ, ಕೃಷ್ಣ, ಬಾಬಣ್ಣ, ನಿಂಗಮ್ಮ, ಶಾಂತ, ಪುಟ್ಟಮ್ಮ ಸೇರಿದಂತೆ ಸಾವಿರಕ್ಕೂ ಹೆಚ್ಚು ಮಂದಿ ರೈತರು ಭಾಗವಹಿಸಿದ್ದರು.

ಮಂಜುನಾಥ್ ಸೋಲು ಬಡವರ ಸೋಲು

ತಮ್ಮ ಸೋಲಿನ ವ್ಯಾಖ್ಯಾನ ಮಾಡಿದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ನನ್ನ ಸೋಲು ಬಡವರ ಸೋಲಾಗಿದೆ. ನನ್ನಿಂದ ಸಹಾಯ ಪಡೆದ ಅನೇಕ ಮುಖಂಡರೇ ಮಾರಾಟವಾದರೆಂದು ಬೇಸರ ವ್ಯಕ್ತಪಡಿಸಿದ ಅವರು ಸೋತೆನೆಂದು ಸುಮ್ಮನೆ ಕೂರುವುದಿಲ್ಲ. ಕ್ಷೇತ್ರದ ಜನರ ನೋವು ನಲಿವಿನಲ್ಲಿ ಭಾಗಿಯಾಗುವೆ. ನನೆಗುದಿಗೆ ಬಿದ್ದಿರುವ ಅರಸು, ಅಂಬೇಡ್ಕರ್, ಜಗಜೀವನರಾಂ ಭವನ ಪೂರ್ಣಗೊಳಿಸಲು ಮನವಿ ಮಾಡಿದ್ದೇನೆ. ಸರ್ಕಾರದಿಂದ ಆದಷ್ಟು ಕೆಲಸ ಮಾಡಿಸುವೆನೆಂದು ವಿಶ್ವಾಸ ವ್ಯಕ್ತಪಡಿಸಿ, ಅಭಿವೃದ್ಧಿಗೆ ಮತ್ಸರ ಬೇಡ, ಅಭಿವೃದ್ಧಿ ಕಾರ್ಯಗಳಿಗೆ ಎಲ್ಲರಿಗೂ ಸಹಕಾರ ನೀಡುವೆನೆಂದು ಹೇಳಿದ ಅವರು, ಮರದೂರು ಯೋಜನೆಗೆ ಸಹಕಾರ ನೀಡಿರುವ ಮುಖ್ಯಮಂತ್ರಿ, ಡಿಕೆಶಿ, ಉಸ್ತುವಾರಿ ಮಂತ್ರಿಗಳನ್ನು ಎಲ್ಲರೂ ಸೇರಿ ಅಭಿನಂದಿಸೋಣ ಎಂದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಮತ್ಸ್ಯಗಂಧ (ಕ), ಪ್ರೇತ (ಕ)	2,2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಫಾರ್ ರಿಜಿಸ್ಟ್ರೇಷನ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಕ್ರಾಕ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಮತ್ಸ್ಯಗಂಧ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಒಂದು ಸರಳ ಪ್ರೇಮಕಥೆ (ಕ)	4 ಪ್ರದರ್ಶನಗಳು
ರಾಜಕಮಲ್	
ಆರ್ಟಿಕಲ್ 370 (ಹಿಂ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಧೈರ್ಯಂ ಸರ್ವತ್ರ ಸಾಧನಂ	4 ಪ್ರದರ್ಶನಗಳು
ತಿಬ್ಬಾದೇವಿ	
ಲಾಲ್ ಸಲಾಮ್ (ತ)	4 ಪ್ರದರ್ಶನಗಳು
ಪ್ರಭಾ	
ಇ–ಮೇಲ್ (ಕ)	2 ಪ್ರದರ್ಶನಗಳು
ಲೇಡಿಸ್ ಬಾರ್ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಶಾಖಾಹಾರಿ (ಕ): ಬೆ.10.15ಕ್ಕೆ, ಕೆಟಿಎಂ (ಕ): ಮ.1.10ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಝಾ ಜಿಯಾ (ಹಿಂ): ಸಂ.4.15ಕ್ಕೆ, ಅಬ್ಬಬ್ಬ (ಕ): ರಾ.7.05ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ.
ಸ್ಕ್ರೀನ್ 2	ತುಂಡು (ಮ): ಬೆ.10.50ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಮ.1.40ಕ್ಕೆ, ರಾ.10.10ಕ್ಕೆ, ಕುಚ್ ಖಟ್ಟಾ ಹೋ ಜಾಯ್ (ಹಿಂ): ಸಂ.4.20ಕ್ಕೆ, ಪ್ರೇಮಲು (ಮ): ರಾ.7ಕ್ಕೆ.
ಸ್ಕ್ರೀನ್ 3	ಮಂಡ್ಯ ಹೈದ (ಕ): ಬೆ.10.15ಕ್ಕೆ, ಸೈರನ್ (ತ): ಮ.1.15ಕ್ಕೆ, ಮೇಡಮ್ ವೆಬ್ (ಇಂ): ಸಂ.4.35ಕ್ಕೆ, ರಾ.10ಕ್ಕೆ, ಭ್ರಮಯುಗಂ (ಮ): ರಾ.7.10ಕ್ಕೆ.
ಸ್ಕ್ರೀನ್ 4	ಸಾರಾಂಶ (ಕ): ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.1.05ಕ್ಕೆ, ಫೈಟರ್ (ಹಿಂ): ಸಂ.4.10ಕ್ಕೆ, ಒಂದು ಸರಳ ಪ್ರೇಮಕಥೆ (ಕ): ರಾ.7.20ಕ್ಕೆ, ಊರು ಪೇರು ಭೈರವಕೋಣ (ತೆ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಉಪಾಧ್ಯಕ್ಷ (ಕ): ಬೆ.10.05ಕ್ಕೆ, ಮೇಡಮ್ ವೆಬ್ (ಇಂ): ಮ.1.20ಕ್ಕೆ, ರಾ.7.05ಕ್ಕೆ, ರಾ.9.40ಕ್ಕೆ, ಊರು ಪೇರು ಭೈರವಕೋಣ (ತೆ): ಮ.3.55ಕ್ಕೆ.
ಸ್ಕ್ರೀನ್ 2	ಮೇಡಮ್ ವೆಬ್ (ಇಂ): ಬೆ.9.55ಕ್ಕೆ, ಸೈರನ್ 108 (ತ): ಸಂ.4ಕ್ಕೆ, ರಾ.10.30ಕ್ಕೆ, ಉಪಾಧ್ಯಕ್ಷ (ಕ): ರಾ.7.15ಕ್ಕೆ.
ಸ್ಕ್ರೀನ್ 3	ಸೈರನ್ 108 (ತ): ಮ.12.15ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಸಂ.4.10ಕ್ಕೆ, ಪ್ರೇಮಲು (ಮ): ಸಂ.6.45ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಝಾ ಜಿಯಾ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಒಂದು ಸರಳ ಪ್ರೇಮಕಥೆ (ಕ): ಬೆ.10.05ಕ್ಕೆ, ಸಂ.4.20ಕ್ಕೆ, ಅಬ್ಬಬ್ಬ (ಕ): ಮ.1.15ಕ್ಕೆ, ತುಂಡು (ಮ): ರಾ.7.30ಕ್ಕೆ, ಭ್ರಮಯುಗಂ (ಮ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೈಟರ್ (2ಡಿ)(ಹಿಂ): ಸಂ.6.35ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಝಾ ಜಿಯಾ (ಹಿಂ): ಬೆ.9.30ಕ್ಕೆ, ಮ.3.55ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.3.25ಕ್ಕೆ, ಅನ್ವೇಷಿಪಿನ್ ಕಂಡೆತುಂ (ಮ): ಸಂ.4.05ಕ್ಕೆ, ಸಾರಾಂಶ (ಕ): ಮ.1.15ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಮ.12.15ಕ್ಕೆ, ಸೈರನ್ 108 (ತ): ಬೆ.10.10ಕ್ಕೆ, ಸಂ.4.20ಕ್ಕೆ, ರಾ.10.30ಕ್ಕೆ, ಮೇಡಮ್ ವೆಬ್ (ಇಂ): ಬೆ.10.50ಕ್ಕೆ, ಮ.1.25ಕ್ಕೆ, ಸಂ.4.35ಕ್ಕೆ, ರಾ.7.10ಕ್ಕೆ, ರಾ.9.45ಕ್ಕೆ, ಪ್ರೇಮಲು (ಮ): ಮ.12.40ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ, ಅಬ್ಬಬ್ಬ (ಕ): ಮ.2.55ಕ್ಕೆ, ವಾರನಂ ಆಯಿರಂ (ತ): ಸಂ.6ಕ್ಕೆ, ರವಿಕೆ ಪ್ರಸಂಗ (ಕ): ರಾ.9.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈದಾನದಲ್ಲೇ ಕುಸಿದು ಬಿದ್ದು ಕ್ರಿಕೆಟಿಗ ಸಾವು

ಬೆಂಗಳೂರು, ಫೆ.22– ಕರ್ನಾಟಕದ ಯುವ ಕ್ರಿಕೆಟಿಗ ಕೆ.ಹೊಯ್ಸಳ ಮೈದಾನದಲ್ಲೇ ಕುಸಿದು ಬಿದ್ದು ಮೃತಪಟ್ಟಿರುವ ಘಟನೆ ಬೆಂಗಳೂರಿನಲ್ಲಿ ನಡೆದಿದೆ. ಏಜಿಸ್ ಸೌತ್ ಝೋನ್ ಟೂರ್ನಿ ನಡುವೆ ಈ ದುರ್ಘಟನೆ ನಡೆದಿದ್ದು, ಕರ್ನಾಟಕ ತಂಡಕ್ಕೆ ತೀವ್ರ ಆಘಾತವಾಗಿದೆ. ಕೆ.ಹೊಯ್ಸಳ ಪೋಷಕರ ಆಕ್ರಂದನ ಮುಗಿಲು ಮುಟ್ಟಿದ್ದು, ಕುಟುಂಬಸ್ಥರು, ಆಪ್ತರು ಹಾಗೂ ಅಭಿಮಾನಿಗಳು ಶೋಕ ಸಾಗರದಲ್ಲಿ ಮುಳುಗಿದ್ದಾರೆ.

ಏಜಿಸ್ ಸೌತ್ ಝೋನ್ ಟೂರ್ನಿಯಲ್ಲಿ ಇಂದು ಕರ್ನಾಟಕ ತಂಡ, ತಮಿಳುನಾಡು ವಿರುದ್ಧ ಹೋರಾಟ ನಡೆಸಿತ್ತು. ರೋಚಕ ಪಂದ್ಯದಲ್ಲಿ ಕೆ.ಹೊಯ್ಸಳ ಅದ್ಭುತ ಬೌಲಿಂಗ್ ಪ್ರದರ್ಶನ ನೀಡಿದ್ದರು. ಈ ಪಂದ್ಯದಲ್ಲಿ ತಮಿಳುನಾಡು ತಂಡವನ್ನು ಮಣಿಸಿದ ಕರ್ನಾಟಕ ಸಂಭ್ರಮಾಚರಣೆ ನಡೆಸಿತ್ತು. ಗೆಲುವಿನ ಬಳಿಕ ಮೈದಾನದಲ್ಲಿ ಆಟಗಾರರು, ಕೋಚ್, ಸಹಾಯಕ ಸಿಬ್ಬಂದಿ ಸೇರಿದ್ದರು. ಈ ಪಂದ್ಯದ ಗೆಲುವಿನ ಕಾರಣ ಹಾಗೂ ಮುಂದಿನ ಪಂದ್ಯಕ್ಕೆ ಬೇಕಾದ ತಯಾರಿಗಳ ಕುರಿತು ಕೋಚ್ ಹಾಗೂ ಇತರರು ಕೆಲ ಮಾರ್ಗದರ್ಶನ ನೀಡಿದ್ದರು.

ಮೈದಾನದಲ್ಲಿ ತಂಡದ ಜೊತೆ ನಿಂತು ಸಲಹೆ ಪಡೆಯುತ್ತಿದ್ದ ಕೆ.ಹೊಯ್ಸಳ ಏಕಾಏಕಿ ಕುಸಿದು ಬಿದ್ದು, ಕೆಲವೇ ಕ್ಷಣದಲ್ಲಿ ಪ್ರಜ್ಞಾಹೀನಾ ಸ್ಥಿತಿಗೆ ತಲುಪಿದ್ದಾನೆ. ಮೈದಾನದಲ್ಲಿದ್ದ ವೈದ್ಯರ ತಂಡ ಸ್ಥಳಕ್ಕೆ ಧಾವಿಸಿ ಪರಿಶೀಲಿಸಿ ತುರ್ತು ಚಿಕಿತ್ಸೆ ನೀಡಿದ್ದಾರೆ. ಇದೇ ವೇಳೆ ಆಂಬುಲೆನ್ಸ್ ಮೂಲಕ ಬೌರಿಂಗ್ ಆಸ್ಪತ್ರೆಗೆ ವೇಗಿಯನ್ನು ದಾಖಲಿಸಲಾಯಿತು. ಬೌರಿಂಗ್ ಆಸ್ಪತ್ರೆ ವೈದ್ಯರು ತಪಾಸಣೆ ನಡೆಸಿ, ಯುವ ಕ್ರಿಕೆಟಿಗ ಕೆ.ಹೊಯ್ಸಳ ಹೃದಯಾಘಾತದಿಂದ ಮೃತಪಟ್ಟಿರುವುದಾಗಿ ಖಚಿತಪಡಿಸಿದ್ದಾರೆ. ವೈದ್ಯರ ವರದಿ ಕರ್ನಾಟಕ ತಂಡವನ್ನೇ ಬೆಚ್ಚಿ ಬೀಳಿಸಿತ್ತು. ತಮಿಳುನಾಡು ವಿರುದ್ಧ ಉತ್ತಮ ಬೌಲಿಂಗ್ ಸಂಘಟಿಸಿದ್ದ ಯುವ ಕ್ರಿಕೆಟಿಗ, ತಮ್ಮ ಜೊತೆಗೆ ಸಂಭ್ರಮಾಚರಣೆ ಮಾಡಿದ್ದ ಕ್ರಿಕೆಟಿಗ ಇನ್ನಿಲ್ಲ ಅನ್ನೋದನ್ನು ಒಪ್ಪಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ.

ಪತ್ರಕರ್ತ ನಂದಕುಮಾರ್ ಶೈಲಿ ನಿಧನ



ಹೆಚ್.ಡಿ.ಕೋಟೆ, ಫೆ.22– ಪಟ್ಟಣದ ನಿವಾಸಿಯೂ ಆದ ಪತ್ರಕರ್ತ ಹಾಗೂ ಛಾಯಾಗ್ರಾಹಕ ನಂದಕುಮಾರ್ ಶೈಲಿ (46) ಗುರುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ, ತಾಯಿ, ಸಹೋದರ, ಸಹೋದರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ನಡೆಯಲಿದೆ.


ಅಂಬಾರಿ ಕನ್ವೆನ್ಷನ್ ಹಾಲ್
ಮಾಲೀಕರಾದ
ಶ್ರೀ ಸ್ವೀಟ್ ಮಹೇಶ್ ರವರಿಗೆ
ಜನುಮದಿನದ ಶುಭಾಶಯಗಳು
ಶುಭಕೋರುವವರು :
ಶ್ರೀ ದಿನೇಶ್ (JD)
ದಾಸನಕೊಪ್ಪಲು


ಸ್ವೀಟ್ ಮಹೇಶ್
ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
VISMAYA
8050302424
ಶುಭಕೋರುವವರು : ನವೀನ್ ಮತ್ತು ಯತೀಶ್